## DISTRIBUTION OF PRINTED PROCEEDINGS TO THE MEMBERS.

Mr. SPEAKER.—In Legislature Secretariat Circular No. 37 dated 16th July 1966 Hon'ble members of the Assembly were informed that the printed proceedings of the Legislative Assembly were ready for distribution and that they may kindly collect copies from the Notice Office. So far only 80 members have received. I have got their names. If the other members have not found it convenient to collect them from the Notice Office, I can have arrangements made to deliver them either at the Legislators' Home or General Hostel or Sudarshan Guest House. If members so desire, they can send a note and it will be attended to. I am suggesting this because proceedings till the last sittings 9th April 1966 have all been printed.

Sri S. S. KOLKEBAIL (Coondapoor).— It would be convenient if it is a bound volume.

Mr. SPEAKER.—Members must come and tell me their difficulty. I will see whether it could be done.

---

### Member's Representation

Sri C. J. MUCKANNAPPA (Sira).—Sir, may I take it for granted that the privilege motion sent by me about 4 days ago has been rejected since the member has come and expressed his regret ?

Mr. SPEAKER.—After he has apologised, it does not arise. The Hon'ble Member may kindly take it like that. I have not even admitted it. I have got it, but in the meanwhile certain things have happened and he has come and apologised and so I do not think any further action is necessary. I have not admitted the motion.

---

## SUPPLEMENTARY AND ADDITIONAL DEMANDS FOR GRANTS FOR 1966-67.

### (General Discussion.)

Sri RAMAKRISHNA HEGDE (Finance Minister).—Sir, I beg to move:

"That a further sum not exceeding Rs. 3,20,100 be granted to the Government to defray the charges which will come in course of payment during the financial year for the period ending 31st March 1967 in respect of 'General Administration'."

Mr. SPEAKER.—Motion moved:

"That on the recommendation of the Governor a further sum not exceeding Rs. 3,20,100 be granted to Government to defray

the charges which will come in course of payment during the financial year for the period ending 31st March 1967 in respect of 'General Administration'."

This is Demand No. 10. The rest of the Demands‡ have already been circulated and they are deemed to have been moved and they are also open for debate. I would suggest that we devote the whole of today for discussion of this. Members will try to accommodate as much as possible.

[MR. DEPUTY SPEAKER in the Chair]

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಹಣಕಾಸಿನ ಸಚಿವರು ಸಪ್ಲಿಮೆಂಟರಿ ಎಸ್ಟಿಮೇಟಿನ ಮೊದಲನೆಯ ಸುಮಾರು ಮೂರು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳ ಇನ್‌ಸ್ಟಾಲ್‌ಮೆಂಟ್‌ನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾವು ಮೊನ್ನೆ ತಾನೆ ಮಾರ್ಚಿ ಆಖೈರಿನಲ್ಲಿ 1966-67ನೇ ಇಸವಿಯ ಆಯವ್ಯಯದ ಪಟ್ಟಿಯನ್ನು ಮುಂಜೂರು ಮಾಡಿದಾಗ ಪ್ರಸಕ್ತ ಸಾಲಿನಲ್ಲಿ ಬರತಕ್ಕ ಎಲ್ಲಾ ವಹಿವಾಟುಗಳನ್ನೂ ಕೂಡ ಚರ್ಚೆ ಮಾಡಿ ಯಾವ್ಯಾವ ಬಾಬಿಗೆ ಎಷ್ಟು ಹಣವನ್ನು ಕೊಡಬೇಕೆಂಬುದನ್ನು ಹೇಳಿ, ಹಣ ಮಂಜೂರು ಮಾಡಿದೆವು. ಇನ್ನೂ ಕೇವಲ ನಾಲ್ಕು ತಿಂಗಳುಗಳಾಗಿವೆ. ಈಗಾಗಲೇ ಮಾನ್ಯ ಹಣಕಾಸಿನ ಸಚಿವರು ಇಷ್ಟು ದೊಡ್ಡ ಹಣವನ್ನು ಈ ಕೇಳಿಕೆಯ ಮುಖಾಂತರ ಸಭೆಯ ಮುಂದೆ ಇಟ್ಟಿದ್ದಾರೆ. ಇವತ್ತು ಈ ವಿವರಗಳಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಒಂದು ವಿಷಯವನ್ನು ನಾನು ಹೇಳಬೇಕಾಗಿದೆ. ಮಾನ್ಯ ಹಣಕಾಸಿನ ಸಚಿವರು ನಾವು ಮಾರ್ಚಿ ತಿಂಗಳಿನಲ್ಲಿ ಆಯವ್ಯಯವನ್ನು ವಿಮರ್ಶೆ ಮಾಡಿದಾಗ ಡಿಫಿಸಿಟ್ ಅಥವಾ ಸರ್‌ಪ್ಲಸ್ ಬಡ್ಜೆಟ್ ಏನಿತ್ತು, ಈಗ ಎಷ್ಟು ಮಟ್ಟಿಗೆ ಬದಲಾವಣೆಯಾಗಿದೆ ಎಂಬುದನ್ನು ಅವರು ಹೇಳಬೇಕಾಗಿತ್ತು. ಅದನ್ನು ಹೇಳಿಲ್ಲ. ಆಗ ಹಣಕಾಸಿನ ಸಚಿವರು ಇದು ನಾಲ್ಕನೆ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷ ಆದ್ದರಿಂದ ಮೈಸೂರಿನ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟ ಪರಿಸ್ಥಿತಿಗೆ ಬಂದಿರತಕ್ಕ ಕಾರಣದಿಂದ ಇನ್ನು ಮುಂದೆ ಆದಷ್ಟು ಮಟ್ಟಿಗೆ ಖರ್ಚು ಕಡಿಮೆ ಮಾಡುತ್ತೇನೆ, ಎಲ್ಲಾ ಇಲಾಖೆಯಲ್ಲೂ ಶೇಕಡ ಹತ್ತರಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ, ಅತಿ ಅಗತ್ಯವಾದ ಹಣವನ್ನು ಸಂಪಾದನೆ ಮಾಡತಕ್ಕ ಯಾವುದಾದರೂ ಇಲಾಖೆ ಇದ್ದರೆ, ಸಿಬ್ಬಂದಿ ಖರ್ಚು ಮಾಡಬೇಕಾದ ಸಂದರ್ಭ ಬಂದರೆ ಮಾತ್ರ ಖರ್ಚು ಮಾಡುತ್ತೇನೆ, ಇಲ್ಲದೇ ಹೋದರೆ ಕೈ ಹಾಕುವುದಿಲ್ಲ ಎಂದು ಈ ಶಾಸನ ಸಭೆಗೆ ಬರವಸೆ ಕೊಟ್ಟಿದ್ದಾರೆ. ಇವತ್ತು ನಮ್ಮ ಮುಂದೆ ಇರುವ ಬೇಡಿಕೆಯನ್ನು ನೋಡುವುದಾದರೆ ಅವರು ಏನೊಂದು ತತ್ವವನ್ನು ಆಗ ಈ ಸಭೆಯ ಮುಂದೆ ಇಟ್ಟಿರೊ ಆ ತತ್ವಕ್ಕೂ ಇವತ್ತು ಶಾಸನ ಸಭೆಯ ಮುಂದೆ ಇರುವ ಸಪ್ಲಿಮೆಂಟರಿ ಎಸ್ಟಿಮೇಟ್‌ಗೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಇದರಲ್ಲಿ ಅವರ ಮಾತಿನ ಪ್ರಕಾರ ಯಾವುದಾದರೂ ಹಣಕಾಸನ್ನು ಸಂಪಾದನೆ ಮಾಡಿದ್ದಾರೆಯೇ ಎಂದು ನೋಡುವುದಾದರೆ ಅಂತಹ ಯಾವ ಒಂದು ಬಾಬೂ ಕೂಡ ಇಲ್ಲ. ಎಲ್ಲಾ ಕಡೆಯೂ ಖಜಾನೆಯಿಂದ ಹಣವನ್ನು ಇನ್ನೂ ಎಳೆಯತಕ್ಕ ಬಾಬು ಇದೆಯೇ ಹೊರತು ತುಂಬತಕ್ಕ ಬಾಬು ಯಾವುದೂ ಇಲ್ಲ. ಅವರು ಹಿಂದೆ ಕೊಟ್ಟ ಭರವಸೆ ಅವರ ಕನ್‌ಕ್ಲೂಡಿಂಗ್ ರಿಮಾರ್ಕ್ಸ್‌ಗೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಹೊಸ ಹೊಸ ಇಲಾಖೆಗಳನ್ನು ಹೊಸ ಹೊಸ ಸಿಬ್ಬಂದಿಗಳನ್ನು ನಿರ್ಮಾಣ ಮಾಡತಕ್ಕ ಕಾರ್ಯ ಮುಂದುವರಿಯುತ್ತಾ ಇದೆ. ಒಂದು ಬಾರಿ ಸೇಕಡ ಹತ್ತರಷ್ಟು ಖರ್ಚನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುತ್ತೀರಿ, ಹಣ ಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಹೇಳುತ್ತೀರಿ, ಅಂತಹ ಕಾಲದಲ್ಲಿ 5-6 ಹೊಸ ಇಲಾಖೆಗಳನ್ನು ಹೊಸ ಹೊಸ ಸಿಬ್ಬಂದಿಗಳನ್ನು ನಿರ್ಮಾಣ ಮಾಡತಕ್ಕ ಕಾರ್ಯ ಮಾಡಿದ್ದೀರಿ. ಇದರಿಂದಾಗಿ, ಯಾವ ಒಂದು ರೀತಿಯಲ್ಲಿ ನೀವು ಮಿತವ್ಯಯ ಮಾಡಿದ ಹಾಗೆ ಆಯಿತು ಎಂಬ ಪ್ರಶ್ನೆಯನ್ನು ನಾನು ಹಣಕಾಸಿನ ಮಂತ್ರಿಗಳಿಗೆ ಕೇಳ ಬಯಸುತ್ತೇನೆ.

ಮೊದಲನೆಯದಾಗಿ ಡಿಮ್ಯಾಂಡ್ ನಂಬರ್ 2ರಲ್ಲಿ ಸುಮಾರು ಎರಡು ಲಕ್ಷ ಮೂವತ್ತು ಸಾವಿರ ರೂಪಾಯಿಗಳನ್ನು ಕೇಳಿದ್ದೀರಿ. ಇದು ಏಕೆ? ಅಣ್ಣಾಜಿ ಶಂಕರ್ ನಾಡ ಗೌಡ ಎಂಬುವರು ಸರ್ಕಾರದ ಮೇಲೆ ದಾವ ಹಾಕಿ ಡಿಕ್ರಿ ಪಡೆದಿದ್ದಾರೆ. ಈ ಹಣವನ್ನು ಕೊಡಬೇಕೆಂದು ಹೈಕೋರ್ಟಿನವರು ನಮಗೆ ಡಿಕ್ರಿ ಕೊಟ್ಟಮೇಲೆ ಕೊಡಬೇಕಾಯಿತು ಎಂದು ಹೇಳಿದ್ದೀರಿ. ಅವರಿಗೆ ಎರಡು ಲಕ್ಷ ಹತ್ತೊಂಭತ್ತು ಸಾವಿರದ ಇನ್ನೂರ ಐವತ್ತಮೂರು ರೂಪಾಯಿ ಕೊಡಬೇಕು ಕೋರ್ಟ್ ಕಾಸ್ಟ್ ಎಲ್ಲಾ ಸೇರಿದರೆ ಎರಡು ಲಕ್ಷ ಮೂವತ್ತು ಸಾವಿರ ರೂಪಾಯಿಗಳಾಗುತ್ತವೆ ಎಂದು ಹೇಳಿದ್ದೀರಿ. ಕೋರ್ಟಿಗೆ ಹೋಗಿ ಈ ರೀತಿ ಡಿಕ್ರಿ ಮಾಡಿಸಿಕೊಂಡು, ಕೋರ್ಟ್ ಕಾಸ್ಟ್ ಕೊಡುವುದರ ಬದಲು

‡*Viz.*, Demand Nos. 13, 18, 20, 23, 24, 25, 30, 33, 44, 47, 48 and 54.

(ಶ್ರೀ ಎಸ್. ಶಿವಪ್ಪ)

ನೀವೇ ನೇರವಾಗಿ ವ್ಯವಹಾರವನ್ನು ಮಾಡಿದ್ದರೆ ಬಹುಶಃ : ಈ ರೀತಿಯಾಗಿ ಆಗುತ್ತಲೇ ಇರಲಿಲ್ಲ. ಇದು ಒಂದೇ ಕಡೆ ಅಲ್ಲ ; ಪಿ.ಡಬ್ಲ್ಯು.ಡಿ., ವಿದ್ಯಾ ಇಲಾಖೆ, ಇನ್ನೂ ಅನೇಕ ಇಲಾಖೆಗಳಲ್ಲಿ ಕೋರ್ಟಿಗೆ ಹೋಗಿರುವ ಮತ್ತು ಕೋರ್ಟ್ ಕಾಸ್ಟ್ ಕೊಟ್ಟಿರುವ ಪ್ರಮೇಯಗಳು ಬೇಕಾದಷ್ಟು ಇವೆ. ಅನೇಕ ಇಲಾಖೆಗಳಲ್ಲಿ ಈ ರೀತಿಯಾಗಿ ಕೋರ್ಟ್ ವ್ಯವಹಾರಗಳಿಗೆ ದಿನೇ ದಿನೇ ಹೋಗುತ್ತಾ ಇರತಕ್ಕ ಪ್ರವೃತ್ತಿ ಜಾಸ್ತಿಯಾಗುತ್ತಾ ಇದೆ. ಇದನ್ನು ತಪ್ಪಿಸಬೇಕು. ಹೀಗೆ ತಪ್ಪಿಸುವುದರಿಂದ ಲಕ್ಷಾಂತರ ರೂಪಾಯಿಗಳ ಹಣವನ್ನು ಉಳಿಸಬಹುದಾಗಿದೆ.

ಇನ್ನು 13ನೇ ಡಿಮ್ಯಾಂಡ್‌ನ್ನು ತೆಗೆದುಕೊಂಡರೆ ಸಿ.ಐ.ಡಿ. ಇಂಟೆಲಿಜೆನ್ಸ್ ಬ್ರಾಂಚಿನ ಪ್ರೆಸ್ ಸೆಕ್ಷನ್‌ಗಾಗಿ ಒಂದು ನೂರು ರೂಪಾಯಿಗಳನ್ನು ಟೋಕನ್ ಗ್ರಾಂಟ್ ಕೇಳಿದ್ದೀರಿ. ಈ ಸೆಂಟ್ರಲ್ ಇಂಟೆಲಿಜೆನ್ಸ್ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಾ ಇದೆ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವವನ್ನು ಅನುಷ್ಠಾನಕ್ಕೆ ತರತಕ್ಕ ಸಂದರ್ಭದಲ್ಲಿ, ಅದರಲ್ಲೂ ಪ್ರಜಾಪ್ರಭುತ್ವ ಶೈಶವಾವಸ್ಥೆಯಲ್ಲಿರತಕ್ಕ ನಮ್ಮ ರಾಜ್ಯದಲ್ಲಿ ಎಷ್ಟು ಮಟ್ಟಿಗೆ ಪೋಲೀಸಿನವರು ನಮ್ಮ ನಾಗರಿಕ ಹಕ್ಕು ಬಾಧ್ಯತೆಗಳನ್ನು ಕಾಪಾಡ ಬೇಕೆಂಬುದನ್ನು ನಮ್ಮ ಮಾನ್ಯ ಗೃಹಸಚಿವರು ಯೋಚನೆ ಮಾಡಬೇಕು. ನಮಗೆ ಒಂದು ದೂರು ಬಂದಿವೆ, ಮೊನ್ನೆ ರಾಷ್ಟ್ರಾಧ್ಯಕ್ಷರು ಈ ಊರಿಗೆ ಬರತಕ್ಕ ಕಾಲದಲ್ಲಿ ಒಬ್ಬ ಕಾರ್ಪೊರೇಟರನ್ನು, ಸುಮಾರು ಹತ್ತು ಮಂದಿ ಪೋಲೀಸಿನವರು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಏಕೆ ಕರೆದುಕೊಂಡು ಹೋದರು ಎಂಬುದನ್ನು ಹೇಳದೆ ಸುಮಾರು 4–5 ಗಂಟೆ ನೋಟೀಸ್ ಕೊಡದೆ, ಏನೂ ಹೇಳದೆ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಸಾಯಂಕಾಲ ವಾಪಸು ಕಳುಹಿಸಿದರು. ಹೀಗೆ ಒಂದೇ ಸಲ ಅಲ್ಲ, ಅನೇಕ ಸಲ ಮಾಡುತ್ತಾ ಇದ್ದಾರೆ. ಇಂತಹ ಕಿರುಕುಳಗಳನ್ನು ತಪ್ಪಿಸ ಬೇಕು. ಏನು ಮಾಡಬೇಕಾದರೂ ಸಾರ್ವಜನಿಕವಾಗಿ, ಪ್ರಕಟಣೆಗಳ ಮುಖಾಂತರ, ಮೆರವಣಿಗೆ ಮಾಡುವುದು, ಸಭೆ ಮಾಡುವುದರ ಮುಖಾಂತರವಾಗಿ ಮಾಡುತ್ತಾ ಇದ್ದೇನೆ ಎಂದು ಅವರು ಹೇಳಿ ದ್ದಾರೆ, ಅವರ ಹೆಸರು ತಮಗೆಲ್ಲರಿಗೂ ಗೊತ್ತಿದೆ, ಕನ್ನಡ ಚಳುವಳಿಯಲ್ಲಿ ಬಹಳ ಪ್ರಮುಖ ಪಾತ್ರ ವಹಿಸಿರತಕ್ಕ ವ್ಯಕ್ತಿಗಳು ಅವರು, ಶಾಸನ ಸಭಾ ಸದಸ್ಯರೆಲ್ಲರಿಗೂ ಅವರು ಬರೆದಿದ್ದಾರೆ, ಇಂತಹ ಕಿರುಕುಳ ಪೋಲೀಸ್‌ನವರು ಕೊಡುವುದನ್ನು ತಪ್ಪಿಸಬೇಕು. ಪೋಲೀಸ್‌ನವರ ಕೈಗೆ ಸಿಕ್ಕಿ ಅವ ಮಾನಿತರಾಗಿ ಪೋಲೀಸ್ ಸ್ಟೇಷನ್‌ನಲ್ಲಿ ಕೂಡಬೇಕಾಗಿರತಕ್ಕಂಥ ಕೃತ್ಯವನ್ನು ಅವರು ಏನು ಮಾಡಿ ದ್ದರು ? ಇದನ್ನು ಗೃಹ ಸಚಿವರ ಪರಿಶೀಲನೆ ಮಾಡಿ, ಮುಂದೆ ಈ ರೀತಿ ಆಗದಂತೆ ಒಂದು ಆಜ್ಞೆ ಯನ್ನು ಕೊಟ್ಟು ಸರಿಪಡಿಸಬೇಕೆಂದು ಹೇಳುತ್ತೇನೆ. ಸಕಾರಣ ಇದ್ದು ಶಾಂತಿಗೆ ಧಕ್ಕೆ ಬರತಕ್ಕ ಪರಿಸ್ಥಿತಿ ಇದ್ದರೆ ಕರೆದುಕೊಂಡು ಹೋಗಲಿ. ಆದರೆ ಕಾರಣವಿಲ್ಲದೆ ಏಕಾಏಕಿ ಕರೆದುಕೊಂಡು ಹೋಗು ವುದು ತಪ್ಪು. ಗೌರವಯುತವಾದ ವ್ಯಕ್ತಿಗಳನ್ನು ಪೋಲೀಸ್‌ನವರು ಯಾವಾಗ ಬೇಕಾದರೂ ಕರೆದುಕೊಂಡು ಹೋಗತಕ್ಕ ಪ್ರವೃತ್ತಿ ಇದೆ, ಇದನ್ನು ತಪ್ಪಿಸಬೇಕು. ಪೋಲೀಸ್ ಇಲಾಖೆಯ ಮೇಲ್ವಿಚಾರಣೆ ಇರತಕ್ಕ ಗೃಹ ಸಚಿವರು ಅವರೂ ಕೂಡ ವಕೀಲರು ; ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಹೋರಾಟ ಮಾಡಿದ ವ್ಯಕ್ತಿಗಳು ಆದ್ದರಿಂದ ಹೆಚ್ಚು ಹೇಳಬೇಕಾಗಿಲ್ಲ.

ಡಿಮ್ಯಾಂಡ್ ನಂಬರ್ 18ರಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸ್ ತೆರೆಯುವುದಕ್ಕೆ ಟೋಕನ್ ಗ್ರಾಂಟ್ ತೆಗೆದುಕೊಂಡಿದ್ದೀರಿ. ಲೇಡಿ ಕರ್ಜನ್ ಅಂಡ್ ಬೌರಿಂಗ್ ಆಸ್ಪತ್ರೆಯಲ್ಲಿ ಇವತ್ತಿಗೂ ಕೂಡ ಅಲ್ಲಿ ಯಾವ ಕೋರ್ಸೂ ಕೂಡ ನಡೆಯುತ್ತಾ ಇಲ್ಲ. ಇದಕ್ಕೆ ಕಾರಣವೇನು ? ಎಕ್ವಿಪ್‌ಮೆಂಟ್ ಆಗಲಿ ಸಿಬ್ಬಂದಿಯಾಗಲಿ ಅಲ್ಲಿ ಇದ್ದ ಪಕ್ಷದಲ್ಲಿ ಇದುವರೆಗೂ ಏಕೆ ತೆರೆಯಲಿಲ್ಲ ? ಕೇವಲ ಕೆಲವು ಪ್ರೊಫೆಸರುಗಳನ್ನು ಮಾತ್ರ ತೆಗೆದುಕೊಂಡರೆ ಪೋಸ್ಟ್ ಗ್ರ್ಯಾಜ್ಯುಯೇಟ್ ಕೋರ್ಸ್ ಪ್ರಾರಂಭ ಮಾಡಿದ ಹಾಗೆ ಆಯಿತೇ ? ದೇಶಕ್ಕೆ ಸಹಾಯವಾಯಿತೇ ? ಈ ರೀತಿ ಆಗುವುದಕ್ಕೆ ಕಾರಣವೇನು ಎಂಬುದಕ್ಕೆ ಸರ್ಕಾರದವರು ಇವತ್ತು ವಿವರಣೆ ಹೇಳಬೇಕೆಂದು ಕೇಳುತ್ತೇನೆ.

ಇದೇ ರೀತಿ ಡಿಮಾಂಡ್ 20ರಲ್ಲಿ ಹಾಲಿ ಇರತಕ್ಕ 2 ಗ್ರಾಮಸೇವಕರ ತರಬೇತಿ ಕೇಂದ್ರಗಳಿ ದ್ದರೂ ಅವು ಸಾಲದೇನೋ ಅನ್ನುವಂತೆ ಈಗ ಇನ್ನೊಂದು ಹೊಸ ಗ್ರಾಮಸೇವಕರ ತರಬೇತಿ ಕೇಂದ್ರ ವನ್ನು ಗಂಗಾವತಿಯಲ್ಲಿ ತೆರೆಯಬೇಕು, ಅದಕ್ಕೆ ಹಣ ಬೇಕು ಎಂದು ಕೇಳಿದ್ದಾರೆ. ಇದಕ್ಕೆ ಈಗ 75 ಸಾವಿರ ರೂಪಾಯಿ ಬೇಕಾಗಿದೆ. ಈಗಾಗಲೇ ಕೆಲಸಮಾಡುತ್ತಿರುವ 2 ಕೇಂದ್ರಗಳಲ್ಲಿ ತರ ಬೇತಾದ ಗ್ರಾಮಸೇವಕರು ಏನು ಕೆಲಸ ಮಾಡುತ್ತಿದ್ದಾರೋ ಅವರಿಂದ ಕಿಂಚಿತ್ತೇನಾದರೂ ಗ್ರಾಮ ಗಳಿಗೆ ಉಪಕಾರವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸದೆ ಇನ್ನೊಂದು ಕೇಂದ್ರವನ್ನು ತೆರೆಯು ತಕ್ಕದ್ದು ವಿವೇಚನಾಯುತವಾದ ಕಾರ್ಯವಲ್ಲ. ಈ ಗ್ರಾಮಸೇವಕರನ್ನು ಗ್ರಾಮಾಭಿವೃದ್ಧಿ ಕಾರ್ಯ ಗಳಿಗೆ ಇತ್ತೀಚೆಗೆ ನೇಮಕ ಮಾಡಿದಮೇಲೆ ಯಾವ ಗ್ರಾಮಕ್ಕೇ ಹೋಗಲಿ ಅಲ್ಲಿ ಇವರು ಕಿತಾಪತಿ

ಗಳನ್ನು ಗ್ರಾಮದಲ್ಲಿ ಹಚ್ಚಿಡುತ್ತಿದ್ದಾರೆ. ಇವರಿಗೆ ಈ ಕಿತಾಪತಿ ಹಚ್ಚಿಡುವ ಕೆಲಸದ ವಿನಾ ಬೇರೇನೂ ಕೆಲಸವಿರುವುದಿಲ್ಲ. ಇವರು ತಮ್ಮ ಕೇಂದ್ರ... ಹೋಬಳಿಯಲ್ಲಿ ಯಾವುದು ದೊಡ್ಡ ಊರಿದ್ದು ಎಲ್ಲಿ ಹೋಟಲು, ಸಿನೀಮಾಗಳಿರುತ್ತವೆಯೋ ಅಲ್ಲಿಯೇ ಮಾಡುತ್ತಾರೆ. ಇದನ್ನೆಲ್ಲಾ ನೋಡಿದರೆ ಸರ್ಕಾರದವರು ಕೇವಲ ಹುದ್ದೆಗಳನ್ನು ಕೊಡತಕ್ಕ ಉದ್ದೇಶಕ್ಕಾಗೇ ಹುದ್ದೆಗಳನ್ನು ನಿರ್ಮಾಣಮಾಡುತ್ತಿದ್ದಾರೆಂದು ಕಾಣಬರುತ್ತಿದೆ. ಆದರೆ ಗ್ರಾಮಗಳ ಸೇವೆಗೆ ಬರತಕ್ಕವರು ಅಲ್ಲಿ ಕೆಟ್ಟ ಕೃತ್ಯಗಳನ್ನೇ ಮಾಡುತ್ತಿದ್ದರೂ ಅವರಿಗೆ ಕೊಟ್ಟಿರತಕ್ಕ ಹೆಸರೇನೋ ಬಹಳ ಒಳ್ಳೆಯದಾಗಿದೆ. ಅಂತೂ ಒಟ್ಟಿನಲ್ಲಿ ಸರ್ಕಾರದವರು ಈ ಬಾಬಿಗೆ ಖರ್ಚುಮಾಡುತ್ತಿರುವ ಹಣದಿಂದ ಪ್ರಜೆಗಳಿಗೇನೂ ಉಪಯೋಗವಾಗುತ್ತಿಲ್ಲ. ಈ ಹಣವೆಲ್ಲಾ ದುರ್ವ್ಯಯವಾದಂತೆ ಲೆಕ್ಕಹಾಕಬೇಕಾಗಿದೆ. ಇದೇ ಉದ್ದೇಶಕ್ಕಾಗೇ ಈಗ ಆ ಕಮ್ಯುನಿಟಿ ಡೆವಲಪ್‌ಮೆಂಟ್ ಬಾಬು ಬೇರೆ ಇದೆ, ಅದಕ್ಕೆ ಬೇರೆ ಹಣವನ್ನು ಖರ್ಚುಮಾಡುತ್ತಿದ್ದೇವೆ. ಸರ್ಕಾರದವರು ಹೊಸ ಹೊಸ ಗ್ರಾಮ ನೌಕರರನ್ನು ನೇಮಕ ಮಾಡುವುದು ಒಂದು ಕಡೆ ಇರಲಿ, ಹಾಲಿ ಹಿಂದಿನಿಂದ ಇರತಕ್ಕ ಜನರೇನು ಕೆಲಸಮಾಡುತ್ತಿದ್ದಾರೆಂಬುದನ್ನು ಒಂದು ಸರ್ವೆಮಾಡಿಸಿ, ಈ ಕೆಲಸಕ್ಕೆ ಇನ್ನೂ ಹೆಚ್ಚಿನ ಜನರು ಬೇಕೆ ಎಂಬುದನ್ನು ಲೆಕ್ಕ ಹಾಕಿಕೊಂಡು ಇದನ್ನು ಮಾಡಿಲ್ಲ. ಗ್ರಾಮ ಗ್ರಾಮಗಳಲ್ಲಿ ಪಾರ್ಟಿಯನ್ನು ಬೆಳೆಸತಕ್ಕ ಜನರನ್ನು ಸರ್ಕಾರ ಈ ದಿವಸ ತರಬೇತು ಮಾಡುವುದಕ್ಕೆ ಹೊರಟಿರುವಂತೆ ಕಾಣುತ್ತದೆ. ಈ ಜನರು ಸಮಾಜಕ್ಕೆ ಒಂದು ಹೊರೆಯಾಗಿದ್ದಾರೆಯೇ ವಿನಾ ಇವರಿಂದ ಉಪಕಾರವೇನೂ ಆಗುತ್ತಿಲ್ಲ. ಇವರಿಂದ ದೇಶಕ್ಕೇನು ಒಳ್ಳೆಯದಾಗಬೇಕಾಗಿತ್ತೋ, ಅದಕ್ಕೆ ಪ್ರತಿಯಾಗಿ ದೇಶಕ್ಕೆ ಹಾನಿಯಾಗುತ್ತಿದೆ.

ಇನ್ನು ಅದೇ ಡಿಮ್ಯಾಂಡ್ ಸಬ್ ಐಟಂ (8) ರಲ್ಲಿ ಬೆಳೆಗಳಿಗೆ ಬರತಕ್ಕ ರೋಗಗಳನ್ನು ತಡೆಗಟ್ಟಲು ಅದಕ್ಕೆ ಹಣಬೇಕೆಂದು ಕೇಳಿದ್ದಾರೆ. ಬೆಳೆಗಳಿಗೆ ಕ್ರಿಮಿಕೀಟಗಳಿಂದ ಉಂಟಾಗುತ್ತಿರುವ ರೋಗಗಳನ್ನು ತಡೆಗಟ್ಟಲು ನಾವು ಹೇರಳವಾಗಿ ಹಣವನ್ನು ಖರ್ಚುಮಾಡುತ್ತಿದ್ದರೂ ವ್ಯವಸಾಯದ ಇಲಾಖೆ ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸುತ್ತಿಲ್ಲ. ಆದುದರಿಂದಲೇ ಈ ದಿವಸ ಸಹಸ್ರಾರು ಎಕರೆಗಳಲ್ಲಿ ಜೋಳದ ಮತ್ತು ರಾಗಿಯ ಪೈರಿಗೆ ಹುಳಹತ್ತಿ ಬೆಳೆಯಲ್ಲಾ ಹಾಳಾಗುತ್ತಿದೆ. ಸರ್ಕಾರದವರು ರೈತರಿಗೆ ಒಳ್ಳೆಯ ಬಿತ್ತನೆ ಬೀಜ ಮತ್ತು ಗೊಬ್ಬರಗಳನ್ನು ಕೊಟ್ಟಿದ್ದಾರೆ. ಆದರೆ ಅದರಿಂದೇನೂ ಪ್ರಯೋಜನವಾಗುತ್ತಿಲ್ಲ. ಬೆಳೆಗಳೆಲ್ಲಾ ಹಾಳಾಗುತ್ತಿವೆ. ಒಂದುವೇಳೆ ಇಲಾಖೆಯವರಲ್ಲಿ ಈ ರೋಗವನ್ನು ತಡೆಗಟ್ಟಲು ಔಷಧಿಯ ಪುಡಿ ಇದೆಯೋ ಇಲ್ಲವೋ ಗೊತ್ತಿಲ್ಲ, ಒಂದು ವೇಳೆ ಅವರಲ್ಲಿ ಪುಡಿ ಇದ್ದರೂ ಅವರಿಗೆ ಅದನ್ನು ಉಪಯೋಗ ಮಾಡುವುದಕ್ಕೆ ಗೊತ್ತಿಲ್ಲದೇ ಇದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಇಂಥ ಭೀಕರ ಕ್ಷಾಮದಲ್ಲಿ ಕೈಗೆ ಬರತಕ್ಕ ಬೆಳೆಗಳು ನಾಶವಾಗುತ್ತಿರುವುದು ಬಹಳ ಚಿಂತಾಜನಕ ಪರಿಸ್ಥಿತಿಯನ್ನುಂಟುಮಾಡಿದೆ. ಅದರಲ್ಲೂ ಸಹಸ್ರಾರು ಎಕರೆಗಳಲ್ಲಿರತಕ್ಕ ಬೆಳೆ ನಾಶವಾಗುತ್ತಿದೆ. ಇದನ್ನು ಮಿಲಿಟೆರಿಯವರಿಂದಲಾದರೂ ಅವರಲ್ಲಿ ಏನಾದರೂ ಔಷಧಗಳಿದ್ದರೆ ಯಂತ್ರೋಪಕರಣಗಳಿದ್ದರೆ ಅವರಿಂದಲಾದರೂ ಈ ರೋಗವನ್ನು ತಡೆಗಟ್ಟಲು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ತಕ್ಷಣ ಪರಿಹಾರ ಪ್ರಯತ್ನಗಳನ್ನು ಮಾಡಿದರೆ ಅದು ಬದುಕುತ್ತದೆ, ಇಲ್ಲದಿದ್ದರೆ ಇಲ್ಲ, ಲಕ್ಷಾಂತರ ಟನ್ ಧಾನ್ಯ ಹಾಳಾಗುತ್ತದೆ. ಅಲ್ಲದೆ ಈ ರೋಗ ಬಹಳ ವೇಗವಾಗಿ ಹರಡುತ್ತಿದೆ. ನಮ್ಮ ವ್ಯವಸಾಯದ ಇಲಾಖೆ ಬಹಳ ಮಂದಗಾಮಿ, ಈಗಲಾದರೂ ಸರ್ಕಾರದವರು ತೀವ್ರ ಪ್ರಯತ್ನಗಳನ್ನು ಮಾಡಿ ಬೆಳೆಯನ್ನು ಉಳಿಸುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಇದೇ ಡಿಮ್ಯಾಂಡಿನಲ್ಲಿ ಐಟಂ 9ರಲ್ಲಿ ಮಲ್ಪೆಯಲ್ಲಿ ಒಂದು ಫಿಷಿಂಗ್‌ಹಾರ್ಬರನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಹಣವನ್ನು ಕೇಳಿದ್ದಾರೆ. ಅಲ್ಲಿ ಒಂದು ಫಿಷಿಂಗ್ ಹಾರ್ಬರನ್ನು ಕಟ್ಟತಕ್ಕ ಬಗ್ಗೆ ಒಬ್ಬ ಪ್ರವೀಣರು ಇಲ್ಲಿಗೆ ಬಂದಿದ್ದಾರಂತೆ. ಅವರು ಅವರ-ಸರ್ವೆ ಮತ್ತು ಪ್ಲಾನನ್ನು ಮಾಡುತ್ತಾರೆಂದು ಹೇಳಿ ಅವರಿಗೆ ಟಿ.ಎ. ಮತ್ತು ಡಿ.ಎ. ಇತ್ಯಾದಿಗಳಿಗಾಗಿ ಈಗಾಗಲೇ ಒಂದು ಲಕ್ಷ ರೂಪಾಯಿಗಳು ಖರ್ಚಾಗಿದೆ. ಅಲ್ಲಿ ಕಟ್ಟಡ ವಗೈರೆ ಇನ್ನೂ ಯಾವುದೂ ಆಗಿಲ್ಲ. ಆದರೂ ಅಪಾರವಾಗಿ ಹಣ ಖರ್ಚಾಗಿದೆ. ಸರ್ಕಾರದವರು ಇನ್ನೂ ಹಣ ಖರ್ಚುಮಾಡಲು ಎಂಥೆಂಥ ಒಳ್ಳೆಯ ಕಾರ್ಯಗಳಿವೆಯೋ ಅದಕ್ಕೆ ಅವರು ಹಣವನ್ನು ವಿನಯೋಗ ಮಾಡುವುದಿಲ್ಲ. ಅನಗತ್ಯವಾದ ಬಾಬಿಗೆ ನಮ್ಮ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವಾಗ ಹೀಗೆ ಖರ್ಚುಮಾಡತಕ್ಕದ್ದು ಯಾವ ವಿವೇಚನೆಯೋ ನಾನು ಕಾಣೆ. ಒಬ್ಬ ವ್ಯಕ್ತಿಗಾಗಿ ಇಷ್ಟೊಂದು ಹಣವನ್ನು ಖರ್ಚುಮಾಡಿದರೆ ನಮ್ಮಲ್ಲಿ ಇನ್ನು ಮಿತವ್ಯಯ ಎಂಬುದೆಲ್ಲಿ ಬಂತು ? ಹೀಗಿರುವಾಗ ನಮ್ಮಲ್ಲಿ ಹಣವನ್ನು ಬಿಗಿಯಾಗಿ ಹಿಡಿದಿಡತಕ್ಕ ನೀತಿ ಎಲ್ಲಿದೆ ?

ಇನ್ನು ಇಲ್ಲಿ ಹೇಳಿರತಕ್ಕ ಕೋ-ಆಪರೇಟಿವ್ ಬಾಬಿಗೆ ಬಂದರೆ ನಾನಾಗಲೇ ಹೇಳಿದಂತೆ—ಇಲ್ಲಿ ಹೇಳಿರತಕ್ಕ ಹೊಸ ಹುದ್ದೆ ಒಂದು ತಲೆಶಿರೋಭಾರ ಎನ್ನುವಂತಿದೆ. ಈಗ ಒಂದು ಜಾಯಿಂಟ್ ರಿಜಿಸ್ಟ್ರಾರ್ ಆಫ್ ಕೋಆಪರೇಟಿವ್ ಸೊಸೈಟಿ ಹುದ್ದೆಯನ್ನು ನಿರ್ಮಾಣಮಾಡುವುದಕ್ಕೆ ಹೊರಟಿದ್ದಾರೆ.

(ಶ್ರೀ ಎಸ್. ಶಿವಪ್ಪ)

ಒಂದು ಕಡೆ ಸರ್ಕಾರದವರು ಸಿಬ್ಬಂದಿಯನ್ನು ಖೋತಾ ಮಾಡುತ್ತೇವೆಂದು ಹೇಳುತ್ತಾ, ಇನ್ನೊಂದು ಕಡೆಯಿಂದ ಸಿಬ್ಬಂದಿಯನ್ನು ಏರಿಸುತ್ತಾ ಹೊಗಟಿದ್ದಾರೆ. ಇಲ್ಲಿಯತನಕ ರಾಜ್ಯಕ್ಕೇನೂ ಸಹಕಾರ ಸಂಘಗಳಿಂದ ಉಪಕಾರವಾಗುತ್ತಿಲ್ಲ. ಸರ್ಕಾರದವರ ಉದ್ದೇಶ ನೆರವೇರದಿದ್ದರೂ ವ್ಯರ್ಥ ಖರ್ಚು ಮಾಡುತ್ತಿದ್ದಾರೆ. ಇಲ್ಲಿ ಇರತಕ್ಕ ಫೆಡರಲ್ ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿ, ಪ್ರೈಮರಿ ಕೋ-ಆಪರೇಟೀವ್ ಸೊಸೈಟಿಗಳು ಅಪಾರವಾಗಿ ಹಣವನ್ನು ವಿನಿಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ಹೋಲ್‌ಸೇಲ್ ವರ್ತಕರಾಗಿದ್ದಾರೆ. ಅವರು ಜೋಳ ಬತ್ತ ಇತ್ಯಾದಿಗಳನ್ನು ಒಟ್ಟಾಗಿ ಖರೀದಿಮಾಡುತ್ತಿದ್ದಾರೆ. ಆದರೆ ಅವರಲ್ಲಿರತಕ್ಕ ದಾಸ್ತಾನೆಷ್ಟು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇಲ್ಲಿ ಆ ಥೇರ್ಮನ್ನರ ಒಂದು ಚೀಟಿಯ ಮೇಲೆ ಜೋಳ, ರಾಗಿಯನ್ನು ಹಂಚುತ್ತಿದ್ದಾರೆ. ಒಂದೊಂದು ಮೂಟೆಯಲ್ಲೂ 4-5 ಕೇಜಿ ಧಾನ್ಯವನ್ನು ಕೊಳಪೆಯಿಂದ ತೆಗೆದುಬಿಟ್ಟಿದ್ದಾರೆಂದು ಪ್ರತಿಯೊಬ್ಬ ಅವರಲ್ಲಿ ಧಾನ್ಯ ಕೊಳ್ಳತಕ್ಕ ವರ್ತಕರೂ ಹೇಳುತ್ತಾರೆ. ಇವರಲ್ಲಿ ಹಾಗೆ ಕಡಮೆ ಅಳತೆ ಮೇಲೆ ಕೊಂಡವರು ಅದನ್ನು ಇನ್ನಾರ ತಲೆಯಮೇಲಾದರೂ ಹಾಕಿಬಿಡುತ್ತಾರೆ. ಹೀಗಿದೆ ಸಹಕಾರ ಪದ್ಧತಿಯ ಲಕ್ಷಣ! ಅಂತೂ ಈ ದಿವಸ ಸಹಕಾರ ಸಂಘಗಳು ಮಾಡುತ್ತಿರುವಷ್ಟು ಅನ್ಯಾಯವನ್ನು ಇನ್ನಾವ ವರ್ತಕನೂ ಮಾಡುತ್ತಿಲ್ಲ. ಇದು ಎಲ್ಲಾ ವರ್ತಕರನ್ನೂ ಮೀರಿಸಿದೆ. ಆದರೆ ಇಷ್ಟು ಧೈರ್ಯವಾಗಿ ಮೋಸಮಾಡತಕ್ಕ ವಿದ್ಯೆ ವರ್ತಕರಿಗಿಲ್ಲ. ಈ ದಿವಸ ಒಬ್ಬ ತಾಶೀಲ್ದಾರನು ಈ ಹೋಲ್ಸೇಲ್ ಸಹಕಾರ ಸಂಘದ ಕಾರ್ಯದರ್ಶಿಯಿಂದ ದಾಸ್ತಾನು ಎಷ್ಟಿದೆ ಎಂಬುದನ್ನು ತಿಳಿಯಲು ಸಾಧ್ಯವಿಲ್ಲ. ಅವರು ಹೇಳುವುದಿಲ್ಲ. ಅಲ್ಲಿ ಒಬ್ಬ ಕೋ ಆಪರೇಟೀವ್ ಶಾಖೆಯ ಇನ್‌ಸ್ಪೆಕ್ಟರೇ ಕಾರ್ಯದರ್ಶಿಗಳಾಗಿರುತ್ತಾರೆ. ಸಣ್ಣ ಪುಟ್ಟ ಸೊಸೈಟಿಗಳಿಗೆಲ್ಲಾ ಬಾಕಿ ಗುಮಾಸ್ತರನ್ನು ಹಾಕಿರುತ್ತಾರೆ. ನೀವು ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ದೊಡ್ಡ ದೊಡ್ಡ ಹೋಲ್‌ಸೇಲ್ ಕೋ-ಆಪರೇಟೀವ್ ಸೊಸೈಟಿಗಳಿಗಾಗಿ ಆಹಾರ ಪದಾರ್ಥಗಳನ್ನು ಹಂಚಲು ಕೊಟ್ಟಿದ್ದೀರಿ. ಸರಕಾರ ಇದನ್ನು ಸರಿಯಾಗಿ ತನಿಖೆ ಮಾಡದೇ ಇರುವುದರಿಂದ ಇಲ್ಲಿ ಬೇಕಾದಷ್ಟು ಅನ್ಯಾಯಗಳು ನಡೆಯುತ್ತಿವೆ. ಇದನ್ನು ನಮ್ಮ ಆಹಾರ ಮಂತ್ರಿಗಳು ಮಾಡಿರುವ ಸೆಲ್ ಮುಖಾಂತರ ಇನ್‌ವೆಸ್ಟಿಗೇಟ್ ಮಾಡಿಸಿ ತಪ್ಪಿತಸ್ಥರಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಕಷ್ಟವಾಗುತ್ತದೆ; ಈ ಸೊಸೈಟಿಗಳಿಗಾಗಿ ಕೊಟ್ಟಿರುವ ಪದಾರ್ಥಗಳಲ್ಲಿ ಸುಮಾರು ಅರ್ಧ ಭಾಗದಷ್ಟು ಅನ್ಯಾಯವಾಗಿ ಹಾಳಾಗಿ ಹೋಗುತ್ತಿದೆ. ಅಲ್ಲದೆ ನೂರು ಮೂಟೆಗಳನ್ನು ಸೊಸೈಟಿಗಾಗಿ ಕೊಟ್ಟರೆ ಇದರಲ್ಲಿ ಸುಮಾರು 50 ಮೂಟೆಗಳಷ್ಟು ಬ್ಲಾಕ್‌ಮಾರ್ಕೆಟ್ಟಾಗಿ ಹೋಗಿಬಿಡುತ್ತದೆ. ಈಚೆಗೆ ಸರಕಾರದವರು ಅಮೆರಿಕಾದಿಂದ ಮಿಲೋ ಜೋಳ ಎನ್ನುವುದು ಸರಕಾರಿ ಡಿಪೋಗಳಲ್ಲಿ ಇಲ್ಲವೇ ಸೊಸೈಟಿಗಳಲ್ಲಿ ಮಾತ್ರ ಮಾರಾಟ ಆಗುತ್ತಿದ್ದುದು ಈಚೆಗೆ ಸಂತೆಗಳಲ್ಲಿ ತಂದು ಅಲ್ಲಲ್ಲಿ ಜನ ಮಾರುತ್ತಿದ್ದಾರೆ. ಇಂತಹ ಹೋಲ್‌ಸೇಲ್ ಕನ್‌ಸ್ಯೂಮರು ಕೋ-ಆಪರೇಟೀವ್ ಸೊಸೈಟಿಗಳನ್ನು ಏತಕ್ಕಾಗಿ ಮಾಡುತ್ತಿದ್ದಾರೆಂದರೆ ತಮಗೆ ಬೇಕಾದವರೊಬ್ಬರಿಗೆ ಒಂದು ಸ್ಥಾನವನ್ನು ಕೊಡುವುದಕ್ಕಾಗಿ ಮಾಡುತ್ತಿದ್ದಾರೆಯೇ ಹೊರತು ಬೇರೇನಿಲ್ಲ. ಈಗ ಸರಕಾರದವರು ಅನೇಕ ರೀತಿಯ ಕಾರ್ಪೊರೇಷನ್ನುಗಳನ್ನು ಮಾಡುತ್ತಿದ್ದಾರೆ. ಅದರಂತೆ ಇಂತಹ ಹೋಲ್‌ಸೇಲ್ ಕೋ-ಆಪರೇಟೀವ್ ಸೊಸೈಟಿಗಳನ್ನು ಮಾಡಿ ಆದಷ್ಟೂ ಬ್ಲಾಕ್‌ಮಾರ್ಕೆಟ್ಟನ್ನು ಕಡಿಮೆ ಮಾಡಬೇಕೆಂದು ಮಾಡುವ ಉದ್ದೇಶವೇನೋ ಒಳ್ಳೆಯದು. ಆದರೆ ಈ ಕೋ-ಆಪರೇಟೀವ್ ಸೊಸೈಟಿಗಳು ಈಗ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ನೋಡಿದರೆ ನನಗೇನೋ ಈ ಸೊಸೈಟಿಗಳಿಂದ ಅಷ್ಟು ಮಟ್ಟಿನ ಕೆಲಸವಾಗುವುದಿಲ್ಲ ಎಂದು ತೋರುತ್ತದೆ. ನಿಮಗೆಲ್ಲಾ ತಿಳಿದಂತೆ ಬೆಂಗಳೂರಿನಲ್ಲಿರುವ ಒಂದು ದೊಡ್ಡ ಹೋಲ್‌ಸೇಲ್ ಸೊಸೈಟಿಯವರು ಜಾಂಜಿಬಾರ್‌ನಿಂದ ಒಳ್ಳೆಯ ಲವಂಗವನ್ನು ತಂದು ಆಮೇಲೆ ಅದು ಎಲ್ಲಿಗೆ ಹೋಯಿತು ಎನ್ನುವುದು ಇಲ್ಲಿಯವರೆಗೂ ಯಾರಿಗೂ ಗೊತ್ತಾಗಲಿಲ್ಲ. ಇದರ ಬಗ್ಗೆ ಯಾರಾದರೂ ವಿಚಾರಣೆ ಮಾಡಿದರೇ ಇಲ್ಲವೇ ಎನ್ನುವುದೂ ತಿಳಿಯಲಿಲ್ಲ. ಹೀಗೆ ಸಾಮಾನ್ಯ ಜನಗಳ ಅನುಕೂಲಕ್ಕಾಗಿ ಎಂದು ಸೊಸೈಟಿಗಳನ್ನು ಮಾಡಿ ಅದರ ಮೂಲಕ ಭೋಗ್ಯ ವಸ್ತುಗಳನ್ನು ತರಿಸಿ ಅದೊಂದು ದೊಡ್ಡ ವರ್ತಕರಂತೆ ವ್ಯಾಪಾರ ಮಾಡಲು ಅವಕಾಶ ಕೊಟ್ಟ ಹಾಗಾಯಿತು. ಇಂತಹ ಹೋಲ್‌ಸೇಲ್ ಕೋ-ಆಪರೇಟೀವ್ ಸೊಸೈಟಿಗಳನ್ನು ಮಾಡಿ ಅಲ್ಲಿ ಒಬ್ಬರಿಗೆ ಒಂದು ಹುದ್ದೆಯನ್ನು ಕೊಡುವುದಕ್ಕಾಗಿ ಮಾಡುತ್ತಿದ್ದಾರೆಯೇ ಹೊರತು ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗುತ್ತಿಲ್ಲ. ಇಲ್ಲಿ ಬರುವ ಜನಕ್ಕೆ ಇದೊಂದು ಎಸ್ಟೇಟು ರೀತಿಯಾಗುತ್ತಿದೆ. ಇವರಿಗೆ ಬೇರೆ ಕಾಫಿ ಹಾಗೂ ಟೀ ಎಸ್ಟೇಟುಗಳು ಎಂದು ಮಾಡುವುದೇ ಬೇಡ. ಸೊಸೈಟಿಗಳಲ್ಲಿ ಬಂದು ಹುದ್ದೆಯಲ್ಲಿ ಕುಳಿತುಕೊಂಡು ದೊಡ್ಡ ವ್ಯಾಪಾರಸ್ಥರಂತೆ ವ್ಯಾಪಾರ ಮಾಡಲು ಅನುಕೂಲ

ಮಾಡಿಕೊಟ್ಟಂತಾಗಿದೆ. ಸರಕಾರಕ್ಕೇನಾದರೂ ಈ ಕನ್‌ಸ್ಯೂಮರ್ ಹೋಲ್‌ಸೇಲ್ ಸೊಸೈಟಿಗಳಿಂದ ಜನಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಭಾವನೆ ಇದ್ದರೆ ಅದು ಖಂಡಿತ ಸಾಧ್ಯವಿಲ್ಲ ಎಂದು ನಾನು ಇಲ್ಲಿ ಹೇಳುತ್ತೇನೆ. ಇತ್ತೀಚೆಗೆ ನಮಗೆ ಸೊಸೈಟಿಗಳಲ್ಲಿ ನಂಬಿಕೆ ಕಡಿಮೆಯಾಗುತ್ತಾ ಬಂದಿದೆ. ಸೊಸೈಟಿಗಳಲ್ಲಿ ಮಾರುವಂತೆಯೇ ಇತರ ವರ್ತಕರುಗಳಿಗೂ ಮಾರಲು ಅವಕಾಶ ಮಾಡಿದರೆ ಆಗ ಪೇಟೆಯಲ್ಲಿ ಒಂದು ತರಹದ ಕಾಂಪಿಟಿಷನ್‌ಗೆ ಅವಕಾಶವಾಗಿ ಅನುಕೂಲವಾಗುತ್ತದೆ. ಈಗ ಬರೀ ಸೊಸೈಟಿಗಳಿಗಾಗಿ ಎಂದು ಕೊಟ್ಟರೆ ಒಂದು ಮನಾಪಲಿಯಾಗಿ ಇಲ್ಲಿನ ಆಡಳಿತ ಚೆನ್ನಾಗಿ ಆಗದೆ ಹಾಳಾಗಿ ಹೋಗುತ್ತಿದೆ. ನಾನಾಗಲೇ ಹೇಳಿದಂತೆ ಮಿಲೋಜೋಳ ಸಂತೆಯಲ್ಲಿ ಎಲ್ಲರಿಗೂ ಸಿಗುವಂತೆ ಮಾರಾಟವಾಗುತ್ತಿದೆ.

2-30 P.M.

ಇನ್ನು ಡಿಮ್ಯಾಂಡು 33ರಲ್ಲಿ ಫ್ಯಾಮಿನ್ ರಿಲೀಫ್ ವರ್ಕ್ಸ್‌ಗಳಿಗೋಸ್ಕರವಾಗಿ ಸುಮಾರು ಒಂದು ಲಕ್ಷ ಚಿಲ್ಲರೆ ಹಣ ಖರ್ಚು ಮಾಡಿದ್ದೀರಿ. ಮೈಸೂರು ಡಿವಿಜನ್ನಿಗೆ ಫ್ಯಾಮಿನ್ ರಿಲೀಫ್ ಕೆಲಸಗಳಿಗಾಗಿ ಸುಮಾರು ಎರಡು ಕೋಟಿಯಷ್ಟು ಬಂದಿದೆ. ಹಾಗೂ ಸಾಯಿಲ್ ಕನ್‌ಸರ್‌ವೇಷನ್‌ಗಾಗಿ ಎಂದು 44 ಲಕ್ಷ ಇದೆ. ಈ ರೀತಿ ಬೇರೆ ಬೇರೆ ಬಾಬುಗಳಿಗಾಗಿ ಎಂದು ಹೇಳಿ ಒಟ್ಟು 1,14,00,000 ರೂಪಾಯಿಗಳನ್ನು ಹಂಚಿದ್ದೀರಿ. ನಾನಾದರೂ ಹೇಳುವುದು, ಬೆಂಗಳೂರು ಹಾಗೂ ಮೈಸೂರು ಡಿವಿಜನ್ನುಗಳಲ್ಲಿ ಕ್ಷಾಮ ಪರಿಸ್ಥಿತಿ ಇತ್ತು. ಇದರಲ್ಲಿ ಮೈಸೂರು ಡಿವಿಜನ್ನಿನಲ್ಲಿ ಹೆಚ್ಚು ಜಿಲ್ಲೆಗಳು ಬರುವುದರಿಂದ ಅಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕಾಗಿತ್ತು. ಇದರಲ್ಲೇಕೆ ತಾರತಮ್ಯ ಮಾಡಿದ್ದೀರಿ ? ಬೆಂಗಳೂರು ಡಿವಿಜನ್ನಿಗೆ 36 ಲಕ್ಷ ಮೈಸೂರು ಡಿವಿಜನ್ನಿಗೆ 22 ಲಕ್ಷ ಎಂದು ಇರುವುದು ಸರಿಯಲ್ಲ. ಇದರ ಕಡೆಗೆ ಇನ್ನೂ ಹೆಚ್ಚು ಲಕ್ಷ್ಯ ಕೊಟ್ಟು ಹೆಚ್ಚು ಹಣ ಕೊಡಬೇಕಾದ ಅಗತ್ಯವಿದೆ ಮತ್ತು ಒಂದೇ ಸಮನಾಗಿ ಎಲ್ಲ ಕಡೆಗೂ ಹಂಚುವ ವ್ಯವಸ್ಥೆ ಮಾಡಬೇಕು. ಸ್ಕೇರ್ಸಿಟಿ ವರ್ಕ್ಸ್‌ಗಳಿಗಾಗಿ ಕೆಲವು ಹಣಗಳನ್ನು ಇದರಲ್ಲಿ ಒದಗಿಸಿದ್ದಾರೆ. ಈ ರೀತಿ ಖರ್ಚು ಮಾಡುವುದೇನೋ ಒಳ್ಳೆಯದು. ಆದರೆ Emergency feeding programmeಗಾಗಿ ಇಡೀ ದೇಶಕ್ಕೆ ಹತ್ತು ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿದರೆ ಹಳ್ಳಿಗಾಡಿನ ಅಭಿವೃದ್ಧಿ ಮಾಡಲು ಎಷ್ಟು ಮಟ್ಟಿಗೆ ಸಾಧ್ಯ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಈಗ ನಿರುದ್ಯೋಗಿಗಳಾಗಿ ಜನ ಎಷ್ಟು ತೊಂದರೆಪಡುತ್ತಿದ್ದಾರೆ ಎನ್ನುವುದನ್ನು ತಾವು ಹಳ್ಳಿಯ ಕಡೆ ಹೋಗಿ ನೋಡಿದರೆ ತಮಗೇ ಗೊತ್ತಾಗುತ್ತದೆ. ಸುಮಾರು 50 ಲಕ್ಷ ಜನರು ಈಗ ನಿರುದ್ಯೋಗಿಗಳಾಗಿದ್ದಾರೆ. ಇವರಿಗೆಲ್ಲಾ ಕೆಲಸಗಳು ಬೇಕು, ಅನ್ನ ಬೇಕು, ಉದ್ಯೋಗವನ್ನು ಒದಗಿಸಿಕೊಡಬೇಕು. ಹಳ್ಳಿಗಳಲ್ಲಿರುವ ಜನ ತಮ್ಮಲ್ಲಿದ್ದ ಆಕಳು ಹಾಗೂ ಬೇರೆ ದನ ಎಲ್ಲವನ್ನೂ ಮಾರಿಕೊಂಡಿದ್ದಾರೆ, ಅವರುಗಳಲ್ಲಿದ್ದ ಕೋಳಿಗಳನ್ನೂ ಕೂಡ ಮಾರಾಟ ಮಾಡಿಕೊಂಡಿದ್ದಾರೆ. ಹಳ್ಳಿಗಾಡಿನ ಬಡ ಜನ ಬಹಳ ಕಷ್ಟಪಡುತ್ತಿದ್ದಾರೆ. ಅವರಲ್ಲಿ ಇದ್ದುಬದ್ದುದನ್ನೆಲ್ಲಾ ಮಾರಿ ಇಂದು ಅವರು ಅವರ ಮಕ್ಕಳನ್ನೂ ಮಾರಾಟ ಮಾಡುವ ಸ್ಥಿತಿಗೆ ಬಂದಿದ್ದಾರೆ. ಆದರೆ ಮಕ್ಕಳನ್ನು ತೆಗೆದುಕೊಳ್ಳುವವರು ಮಾತ್ರ ಇಲ್ಲ. ಹೀಗೆ ದುಡ್ಡಿಲ್ಲದೆ ಬಹಳ ಜನ ಕಷ್ಟಪಡುತ್ತಿದ್ದಾರೆ. ಸುಮಾರು 50 ಲಕ್ಷ ಜನ ವ್ಯವಸಾಯ ಮಾಡಲು ಏನೇನೂ ಅನುಕೂಲವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು. ಈಗ ಏನಾಗಿದೆಯೆಂದರೆ, ಎಲ್ಲಾ ಜನಗಳಿಗೆ ಕೆಲಸ ಕೊಡುವುದಿಲ್ಲ ತಾಲ್ಲೂಕ್ ಬೋರ್ಡಿನಲ್ಲಿ ಅವರಿಗೆ ಬೇಕಾದವರಿಗೆ 100-150 ಜನಕ್ಕೆ ಕೊಡುತ್ತಾರೆ. ಸಾರ್ವಜನಿಕರಿಗೆ ಈ ದಿವಸ ಸೌಲಭ್ಯ ಸಿಗುತ್ತಿಲ್ಲ. ಸಾವಿರಾರು ಜನ ನಿರ್‌ಗತಿಕರಿದ್ದಾರೆ. ಅವರಿಗೆ ಕೆಲಸ ಕೊಡಿಸುವ ಕಾರ್ಯಕ್ರಮವನ್ನು ಸರ್ಕಾರದವರು ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಕ್ಷಾಮ ಪರಿಸ್ಥಿತಿ ಯಾವಾಗಲೂ ಸಾರ್ವತ್ರಿಕವಾಗಿ ಬರತಕ್ಕದ್ದಲ್ಲ, 50-60 ವರ್ಷಕ್ಕೆ ಒಂದು ಸಾರಿ ಬರುತ್ತದೆ. ಅನೇಕ ಶತಮಾನಗಳಿಂದ ರೈತ ದೇಶವನ್ನು ಕಾಪಾಡಿದ್ದಾನೆ. ಮಳೆ ಬಂದಾಗ ದೇಶಕ್ಕೆಲ್ಲಾ ಅನ್ನವನ್ನು ಕೊಟ್ಟಿದ್ದಾನೆ. ಈಗ ಒಂದೆರಡು ವರ್ಷಗಳಿಂದ ಮಾತು ಕಷ್ಟ ಬಂದಿರುವುದು. ಆತನನ್ನು ಒಂದೆರಡು ವರ್ಷ ಕಾಪಾಡಬೇಕಾದುದು ಸರ್ಕಾರದ ಜವಾಬ್ದಾರಿಯೆಂದು ಹೇಳುತ್ತೇನೆ. ಇವತ್ತು ನೀವು ಹಣಕಾಸು ಸಾಕಷ್ಟು ಇಲ್ಲವೆಂದು ಹೇಳುತ್ತೀರಿ. ಹಣ ಬೇಕು ಎಂದು ಬರೀ ಬಾಯಲ್ಲಿ ಹೇಳಿದರೆ ಸುಖವಿಲ್ಲ. ಬಹಳ ಪ್ರಾಮುಖ್ಯವಾದ ಬಾಬುಗಳಿಗೆ ಹಣವನ್ನು ಒದಗಿಸಬೇಕು. ಅನಗತ್ಯ ಬಾಬುಗಳಿಗೆ ಹಣ ಒದಗಿಸುವುದನ್ನು ಸ್ವಲ್ಪ ಕಾಲ ತಡೆಯಬಹುದು. ಇದರಲ್ಲಿ ಯಾವುದಕ್ಕೆ ಹೆಚ್ಚು ಆದ್ಯತೆ ಇದೆಯೋ ಅದಕ್ಕೆ ಹೆಚ್ಚು ಹಣವಿಲ್ಲ. ವ್ಯವಸಾಯ ಅಭಿವೃದ್ಧಿಗಾಗಿ ಹೆಚ್ಚು ಬೆಳೆಯಬೇಕು. ವ್ಯವಸಾಯದ ಉತ್ಪತ್ತಿ ಜಾಸ್ತಿಯಾಗಬೇಕಾದರೆ ನೀರು ಬೇಕು. ಅದಕ್ಕೆ ಹೆಚ್ಚು ಹಣ ಒದಗಿಸಿಲ್ಲ. ಕಾಳಿ ನದಿ ಯೋಜನೆಗೆ 5 ಲಕ್ಷ ರೂಪಾಯಿಗಳ ಪ್ರಾವಿಷನ್ ಮಾಡಿದ್ದೀರಿ. ಲೈನ್ ಎಳೆಯುವುದಕ್ಕೆ 15-20 ಲಕ್ಷ ರೂಪಾಯಿ ಪ್ರಾವಿಷನ್ ಮಾಡಿದ್ದೀರಿ. ಇದು ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಬರತಕ್ಕದ್ದಲ್ಲ.

(ಶ್ರೀ ಎಸ್. ಶಿವಪ್ಪ)

ಇವತ್ತು ಜನ ಕೆಲಸವಿಲ್ಲದೆ ಕಷ್ಟದಲ್ಲಿದ್ದಾರೆ. ಅವರಿಗೆ ಜಾಗ್ರತೆ ಅನ್ನ ಸಿಗತಕ್ಕಂಥ ಕಾರ್ಯಕ್ರಮವನ್ನು ಇದರಲ್ಲಿ ಸೇರಿಸಿಲ್ಲ. ಯಾವ ಬಾಬಿಗೆ ಅವಶ್ಯಕವಾಗಿ ಹಣ ಒದಗಿಸಬೇಕಾಗಿತ್ತೋ ಅದಕ್ಕೆ ಒದಗಿಸಿಲ್ಲ ವೆಂದು ಹೇಳಬಯಸುತ್ತೇನೆ. ಒಂದೆರಡು ಉದಾಹರಣೆಯನ್ನು ಕೊಟ್ಟು ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಈ ಸಭೆಯ ಮುಂದೆ ತಂದಿದ್ದಾರೆ. ಶಾಸ್ತ್ರೀಯವಾದ ರೀತಿಯಲ್ಲಿ ತರಬೇಕಾಗಿತ್ತು. ವರ್ಷದ ಆರಂಭದಲ್ಲಿ ಬಡ್ಜೆಟ್ ತಯಾರು ಮಾಡುವಾಗ ಯಾವುದನ್ನು ಅನಿರೀಕ್ಷಿತವಾಗಿ ಮಾಡುವುದಕ್ಕೆ ಸಾಧ್ಯ ವಿರಲಿಲ್ಲವೋ ಅಂತಹ ಬಾಬುಗಳನ್ನು ಸಪ್ಲಿಮೆಂಟರಿಯಲ್ಲಿ ಸೇರಿಸಬೇಕಾಗಿತ್ತು.

ಬಡ್ಜೆಟ್ ಸಮಯದಲ್ಲಿಯೇ ಸೇರಿಸಬಹುದಾಗಿದ್ದ ಕೆಲವು ಬಾಬುಗಳನ್ನು ಈ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಅನಿರೀಕ್ಷಿತ ಪರಿಣಾಮಗಳಿಂದ ಉಂಟಾದಂತಹ ಕೆಲವು ಬಾಬುಗಳಿಗೆ ಹಣವನ್ನು ಒದಗಿಸಲು ಇಂತಹ ಸಪ್ಲಿಮೆಂಟರಿ ಬಡ್ಜೆಟ್ ತಯಾರಿಸಬೇಕೇ ಹೊರತು, ಈಗ ತಂದಿರು ವುದು ಕಾನೂನು ರೀತ್ಯ ಹಣಕಾಸಿನ ಮಸೂದೆಯಲ್ಲ. ಹಣಕಾಸಿನ ಪರಿಸ್ಥಿತಿಯಲ್ಲಿ ಏರುಪೇರಾಗ ಬಾರದು. ಎಂದು ಈ ಒಂದೆರಡು ಬಾಬುಗಳನ್ನು ಸೇರಿಸಿಕೊಂಡಿದ್ದೀರಿ. ಹಿಂದೆ ಈ ರೀತಿ ಮಾಡಬಾರ ದೆಂದು ಹೇಳಿದ್ದೇನೆ. ಹಾಗಿದ್ದರೂ ಏತಕ್ಕಾಗಿ ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ತರಬೇಕಾಗಿತ್ತು ಎಂದು ಹಣಕಾಸಿನ ಸಚಿವರನ್ನು ಕೇಳುತ್ತೇನೆ. ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿಯನ್ನು ತಾವು ಮೊನ್ನೆ ಹೇಳುವಾಗ 49 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟನ್ನು ಪೂರ್ಣವಾಗಿ ತೀರಿಸಿ ದ್ದೇವೆಂದು ಹೇಳಿದಿರಿ. ಯಾವ ರೀತಿಯಿಂದ ತೀರಿಸಿದಿರಿ ಎಂಬುದು ಮುಖ್ಯವಾದುದು. ಸೆಕ್ಯೂರಿಟಿ ಗಳನ್ನು ಮಾರಿ, ಕೇಂದ್ರ ಸರ್ಕಾರದಿಂದ ಸಾಲ ಪಡೆದು ಓವರ್‌ಡ್ರಾಫ್ಟ್ ತೀರಿಸಿದ್ದೀರಿ. ಇದರಲ್ಲಿ ಸಂತೋಷದ ವಿಚಾರವೇನೂ ಇಲ್ಲ. ಓವರ್‌ಡ್ರಾಫ್ಟ್ ಇತ್ತು, ರಿಜರ್ವ್ ಬ್ಯಾಂಕಿನವರು ಒತ್ತಾಯ ಮಾಡಿದರು, ಅವರಿಗೆ ಹಣ ಕೊಡಬೇಕಾಗಿತ್ತು, ಕೇಂದ್ರ ಸರ್ಕಾರದಿಂದ ಸಾಲ ಮಾಡಿ ಇದನ್ನು ತೀರಿ ಸಿದ್ದೀರಿ. ಇದರಿಂದ ಮುಂದೆ ವ್ಯವಹಾರ ಮಾಡುವುದಕ್ಕೆ ಒಂದು ಅವಕಾಶವಾಯಿತು. ಇದು ಸಂತೋಷ ಪಡುವ ವಿಚಾರವೇನಲ್ಲ ಹಣಕಾಸಿನ ಮಿತವ್ಯಯದಿಂದ, ಹಣಕಾಸಿನ ಪರಿಸ್ಥಿತಿ ಉತ್ತಮ ಗೊಂಡು ಓವರ್‌ಡ್ರಾಫ್ಟ್ ತೀರಿಸಿದ್ದರೆ ಸಂತೋಷಪಡಬಹುದಾಗಿತ್ತು. ಓವರ್‌ಡ್ರಾಫ್ಟ್ ತೀರಿತು, ಸಾಲ ಹೆಚ್ಚಿತು. ಬಡ್ಡಿ ಕೊಡಬೇಕಾಗಿ ಬಂತು. ಈ ರೀತಿ ಒಂದು ಕೈಯಿಂದ ತೆಗೆದುಕೊಂಡು, ಮತ್ತೊಂದು ಕೈಯಲ್ಲಿ ಕೊಡುವುದು ಶ್ಲಾಘನೀಯವಾದ ಹಣಕಾಸಿನ ನೀತಿಯಲ್ಲವೆಂದು ಹೇಳ ಕಾಗಿದೆ. ಮಿತವ್ಯಯ ಮಾಡಬೇಕೆಂದು ಹೇಳುವ ನೀವು ಆ ಮಾತನ್ನು ಅನುಷ್ಠಾನಕ್ಕೆ ತಂದಿಲ್ಲ. ಹೊಸ ಹೊಸ ಸಿಬ್ಬಂದಿಗಳನ್ನು ನೇಮಕ ಮಾಡಿದ್ದೀರಿ. ಹೊಸ ಹೊಸ ಇಲಾಖೆಗಳನ್ನು ಪ್ರಾರಂಭ ಮಾಡಿದ್ದೀರಿ. ಮೂರು ಜನ ಜಾಯಿಂಟ್ ರಿಜಿಸ್ಟ್ರಾರ್‌ಗಳನ್ನು ನೇಮಕ ಮಾಡಿದ್ದೀರಿ. ಸರ್ವೆ ಸೆಟಲ್ ಮೆಂಟ್ ಇಲಾಖೆಗೆ ಡೆಪ್ಯೂಟಿ ಕಮೀಷನರ್‌ಗಳನ್ನು ನೇಮಕ ಮಾಡಿದ್ದೀರಿ. ಹೊಸದಾಗಿ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಲು ಅನುಮತಿ ಕೊಡುತ್ತಿದ್ದೀರಿ. ಮಿತವ್ಯಯ ಸಾಧನೆ ಆಗದಿದ್ದರೆ ನಿಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲ. ಮಿತವ್ಯಯ ಸಾಧನೆ ಆಗದೇ ಹೋದರೆ ಹಣಕಾಸಿನ ಪರಿಸ್ಥಿತಿ ಲಂಗುಲಗಾಮು ಇಲ್ಲದಂತಾಗುತ್ತದೆ. ತಕಾವಿ ಲೋನ್ಸ್, ಲ್ಯಾಂಡ್ ಇಂಪ್ರೂವ್‌ಮೆಂಟ್ಸ್ ಲೋನ್ಸ್ ಕೊಡುವುದಕ್ಕೋಸ್ಕರ ಎರಡು-ಮೂರು ಕೋಟಿ ರೂಪಾಯಿ ಗಳನ್ನು ಇಟ್ಟಿದ್ದೀರಿ. ಇದನ್ನು ಮೊದಲೇ ಕೊಡಬೇಕಾಗಿತ್ತು. ಚುನಾವಣೆ ದೃಷ್ಟಿಯಿಂದ ಈಗ ಮಾಡಿದ್ದೀರಿ. ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಾತ್ಕಾಲಿಕ ಪರಿಹಾರ ಕೊಡಬೇಕೆನ್ನುವ ಒಂದು ದೃಷ್ಟಿ ಇದರಲ್ಲಿ ಕಾಣುತ್ತಿದೆ. ಜನರ ದುಡ್ಡಿನಿಂದ 1967ನೇ ಇಸವಿಯ ಎಲೆಕ್ಷನ್ ಮಾಡಬೇ ಕೆಂದಿರುವ ಹಾಗೆ ಕಾಣುತ್ತದೆ. ಇದನ್ನು ನೋಡಿದರೆ ಚುನಾವಣೆಯ ಒಂದು ವೈಖರಿ ಎದ್ದು ಎದ್ದು ಕಾಣಿಸುತ್ತದೆ. ಇದನ್ನು ಆದಷ್ಟು ಕಡಿಮೆ ಮಾಡಿದರೆ ದೇಶಕ್ಕೆ ಕ್ಷೇಮ. ಚುನಾವಣೆಯಾದ ಮೇಲೆ ನಾವು ಮತ್ತು ನೀವು ಈ ಶಾಸನ ಸಭೆಗೆ ಬರಬೇಕು. ದೇಶದ ಹಣಕಾಸಿನ ಪರಿಸ್ಥಿತಿ ಏನಿದೆ ಅದನ್ನು ಸರಿದೂಗಿಸಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ. ಚುನಾವಣೆಗೋಸ್ಕರ ಈ ರೀತಿ ಮಾಡಿರು ವುದು ತಪ್ಪು. ನಾಲ್ಕನೆ ಯೋಜನೆಯು ಇನ್ನೂ ಜಾರಿಗೆ ಬಂದಿಲ್ಲ. ನಾಲ್ಕನೆ ಯೋಜನೆಯ ಮೊದಲನೆಯ ವರ್ಷಕ್ಕೆ ಕಾಮಗಾರಿಗಳಿಗಾಗಿ ಹಣ ಒದಗಿಸಿಲ್ಲವೆಂದು ಹೇಳಿದ್ದೀರಿ. ನಾಲ್ಕನೆ ಯೋಜನೆಯ ರೂಪರೇಖೆ ಏನು ಎನ್ನುವುದು ಗೊತ್ತಿಲ್ಲ. ಅಮೇರಿಕಾದವರು, ವಿಶ್ವ ಬ್ಯಾಂಕಿನವರು, ರಷ್ಯಾದವರು ನಾಲ್ಕನೆ ಯೋಜನೆಗೆ ಏನು ಕೊಡುತ್ತಾರೆ ಎನ್ನುವುದು ಇನ್ನೂ ಇತ್ಯರ್ಥವಾಗಿಲ್ಲ. ನಾಲ್ಕನೇ ಯೋಜನೆಗೆ ಎಷ್ಟು ಹಣ ಖರ್ಚು ಮಾಡಬೇಕು ಎನ್ನುವುದು ಗೊತ್ತಿಲ್ಲ. ನಾಲ್ಕನೆ ಯೋಜನೆಯು ಕಾರ್ಯಗತವಾಗುತ್ತದೋ ಇಲ್ಲವೋ, ಗೊತ್ತಿಲ್ಲ. ನಾಲ್ಕನೇ ಯೋಜನೆಯು 5 ವರ್ಷ ದಲ್ಲಿ ಮುಗಿಯುತ್ತದೋ, 7 ವರ್ಷದಲ್ಲಿ ಮುಗಿಯುತ್ತದೋ ಗೊತ್ತಿಲ್ಲ. ನಾಲ್ಕನೇ ಯೋಜನೆಯ ಸ್ವರೂಪ ಇನ್ನೂ ಸರಿಯಾಗಿ ಗೊತ್ತಿಲ್ಲದಿದ್ದರೂ ಕೂಡ ಅದಕ್ಕಾಗಿ ಹಣವನ್ನು ತೆಗೆದಿಟ್ಟಿರುವುದನ್ನು

ನೋಡಿದರೆ ಚುನಾವಣೆಗೋಸ್ಕರವೆಂದು ನನಗೆ ಸಂಶಯವಿದೆ. ಆದ್ದರಿಂದ ಚುನಾವಣೆಯನ್ನು ಗಮನಕ್ಕೆ ತೆಗೆದುಕೊಳ್ಳದೆ, ಅತ್ತ ಕಡೆ ತಮ್ಮ ಗಮನವನ್ನು ಹರಿಸದೆ, ನ್ಯಾಯವಾಗಿ ದೇಶದ ಸಂಪತ್ತನ್ನು ಉತ್ಪತ್ತಿ ಮಾಡತಕ್ಕ ರೈತನಿಗೆ ಈ ಹಣ ದೊರೆಯಬೇಕು. ಇಲ್ಲದಿದ್ದರೆ ಸರ್ಕಾರದ ನೀತಿ ವ್ಯರ್ಥವಾಗುತ್ತದೆ; ಸರ್ಕಾರದ ಹಣವು ವ್ಯರ್ಥವಾಗುತ್ತದೆಂದು ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಅಧ್ಯಕ್ಷರೆ, ಈಗ ತಾನೆ ವಿರೋಧ ಪಕ್ಷದ ನಾಯಕರು ಮೈಸೂರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಮತ್ತು 1966-67ರ ಆಯವ್ಯಯದ ಪಟ್ಟಿ ಅಂಗೀಕೃತವಾಗಿ ಇನ್ನೂ ಮೂರು ತಿಂಗಳಾಗುವುದಕ್ಕೆ ಮುಂಚೆ 3,18,22,000 ರೂಪಾಯಿಗಳ ಸಪ್ಲಿಮೆಂಟರಿ ಫಸ್ಟ್ ಇನ್‌ಸ್ಟಾಲ್‌ಮೆಂಟ್ ಸಭೆಯ ಮುಂದೆ ತಂದಿರುವ ಬಗ್ಗೆ ಹೇಳಿದರು. ಈ ಸಭೆಯಲ್ಲಿ ನನ್ನ ಸ್ನೇಹಿತರಾದಂತಹ ಶ್ರೀಮಾನ್ ಹೆಗ್ಗಡೆಯವರು ಏನು ಉತ್ತರ ಹೇಳಿದರು ಎಂದರೆ, ಮೈಸೂರು ಸರ್ಕಾರ ಸಾಲವನ್ನೆಲ್ಲಾ ತೀರಿಸಿದೆ ಎಂದು. ಆ ಕೈಯಿಂದ ಈ ಕೈಗೆ, ಈ ಕೈಯಿಂದ ಆ ಕೈಗೆ ಲೆಡ್ಜರ್‌ನಲ್ಲಿ ಬದಲಾವಣೆ ಮಾಡಿ ಓವರ್‌ಡ್ರಾಫ್ಟ್ಸ್ ಎಲ್ಲಾ ವಾಪಸ್ಸು ಕೊಟ್ಟಿದ್ದಾರೆ. 50 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಸಹಾಯ ಮಾಡಿದ್ದಾರೆಂದು ಹೇಳಿದರು. ಇವತ್ತು ದೇಶದಲ್ಲೆಲ್ಲಾ ಅನ್ನದ ಕ್ಷೋಭೆಯಲ್ಲಿ ಸಿಕ್ಕಿ ಜನರು ಮತ್ತು ಜಾನುವಾರುಗಳು ಪ್ರಾಣ ಬಿಡುತ್ತಿರುವಾಗ ಎಷ್ಟರಮಟ್ಟಿಗೆ ಹಣಕಾಸಿನ ಸಚಿವರು ಕೆಲಸ ಕಾರ್ಯದ ಸಾಧನೆ ಮಾಡಿದ್ದಾರೆ ಅನ್ನತಕ್ಕಂಥವನ್ನು ಈ ಸಪ್ಲಿಮೆಂಟರಿ ಬಡ್ಜೆಟ್ ನಿವೇದನೆ ಮಾಡುತ್ತಿದೆ. ಏತಕ್ಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ : Land Revenue, General Administration, Police, Medical and Public Health, Agriculture, Co-operation, Industries, CDB, NES and LD Works, I.N.E. and D. Works (Non-Commercial)—Famine Relief— ಈ 10 ಇಲಾಖೆಗಳಿಗಾಗಿ ಸುಮಾರು ಮೂರೂಕಾಲು ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಇದನ್ನು ನಾನು ಸರ್ಕಾರದವರಿಗೆ ಕಿವಿ ಮಾತಿನಲ್ಲಿ ಹೇಳಲು ಪ್ರಯತ್ನ ಮಾಡುತ್ತೇನೆ.

ಯಾರೋ ಒಬ್ಬರು ಸಿವಿಲ್ ಸೂಟ್‌ನ್ನು 1956 ರಲ್ಲಿ ಹಾಕಿದ್ದಕ್ಕೆ 5 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಡಬೇಕಾಗಿದೆ. 1966 ರ ಬಡ್ಜೆಟ್‌ನಲ್ಲಿ ಅದನ್ನು ಸೇರಿಸದೆ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಈ ವಿಚಾರವಾಗಿ ಶ್ರೀಮಾನ್ ಶಿವಪ್ಪನವರು ಬಹಳ ಖಂಡಿತವಾಗಿ ಹೇಳಿದ್ದಾರೆ. ಸರ್ಕಾರದವರು ಆ ಸೂಟನ್ನು ಗೆಲ್ಲಬೇಕೆಂದು ಪ್ರಯತ್ನ ಮಾಡಿದರು. ಆದರೆ ಈ ಕೇಸನ್ನು ಗೆಲ್ಲುವುದಕ್ಕೆ ಅಪೀಲನ್ನು ಏತಕ್ಕೆ ತೆಗೆದುಕೊಂಡು ಹೋಗಲಿಲ್ಲ ಚುನಾವಣೆಗೋಸ್ಕರ ಯಾರು ಡಿಕ್ರಿ ಹೋಲ್ಡರ್ ಇದ್ದಾರೆ, ಅವರನ್ನು ಉಪಯೋಗಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಇವರು ಚುನಾವಣೆಯ ಕುತಂತ್ರಕ್ಕೋಸ್ಕರವಾಗಿ ಇದನ್ನು ಉಪಯೋಗಮಾಡಿಕೊಳ್ಳಬೇಕೆಂದು ಇವತ್ತಿನ ದಿವಸ ಅವರನ್ನು 6 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಹಣಕಾಸಿನ ಪರಿಸ್ಥಿತಿ ಬಹಳ ಇಕ್ಕಟ್ಟಿನಲ್ಲಿರುವಾಗ, ಕೇಂದ್ರ ಸರ್ಕಾರದವರು ಈಗ ರೂಪಾಯಿಯ ಅಪಮೌಲ್ಯದ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿರುವಾಗ ಇಷ್ಟು ಹಣವನ್ನು ಅವರಿಗೆ ಕೊಡಬೇಕು ಎಂಬುದಾಗಿ ಇಲ್ಲ ಒಂದು ಬೇಡಿಕೆಯನ್ನು ತಂದಿರುವುದನ್ನು ನೋಡಿದರೆ ಇವರು ಅಲ್ಲಲ್ಲಿ ಕೆಲವು ಜನಗಳನ್ನು ಚುನಾವಣೆಗೋಸ್ಕರ ಇಟ್ಟುಕೊಳ್ಳಲು ಈ ರೀತಿ ಮಾಡಿದ್ದಾರೆಂದು ನನಗೆ ತೋರುತ್ತದೆ. ಇವರಿಗೆ ಸುಮಾರು 6 ಲಕ್ಷ ರೂಪಾಯಿಗಳ ಬಗ್ಗೆ ಅಪೀಲನ್ನು ಏಕೆ ಮಾಡಲಿಲ್ಲ? ಇವರಿಗೆ ಲಾ ಡಿಪಾರ್ಟ್‌ಮೆಂಟು ಈ ಬಗ್ಗೆ ಏನು ಅಭಿಪ್ರಾಯವನ್ನು ಕೊಟ್ಟಿತ್ತು? ಮುನ್ಸೀಫ್ ಕೋರ್ಟಿನಿಂದ ಬೇರೆ ಇನ್ನಾವ ಕೋರ್ಟಿಗೂ ಇವರು ಹೋಗಲಿಕ್ಕಾಗಲಿಲ್ಲವೇ? ಇದನ್ನು ನ್ಯೂ ಸರ್ವಿಸ್ ಎಂಬುದಾಗಿ ಬೇರೆ ಹೇಳುತ್ತಾರೆ. ಇದು ಯಾವಾಗ ಇವರಿಗೆ ಗೋಚರವಾಯಿತು ನ್ಯೂ ಸರ್ವಿಸ್ ಏನು ಎನ್ನುವುದನ್ನು ಇಲ್ಲಿ ಅವರು ಅನೇಕ ಸಾರಿ ವ್ಯಾಖ್ಯಾನ ಮಾಡಿದ್ದಾರೆ. ಇವರು ಯಾರ್‍ಯಾರು ಎಷ್ಟೆಷ್ಟು ಸಾಲ ಕೊಡಬೇಕು; ಯಾವ್ಯಾವ ಕೋರ್ಟಿನಲ್ಲಿ ಇವರಿಗೆ ಎಷ್ಟೆಷ್ಟು ಡಿಕ್ರಿಗಳಿವೆ? ಸಿವಿಲ್ ಕೋರ್ಟಿನಲ್ಲಿ ಇವರು ಯಾವುದಾದರೂ ಕೇಸುಗಳಲ್ಲಿ ಅಪೀಲು ಹೋಗಿದ್ದಾರೆಯೇ? ಯಾವುದಾದರೂ ಕೇಸುಗಳನ್ನು ಗೆದ್ದಿದ್ದಾರೆಯೇ? ಇಲ್ಲಿ ಪಾರ್ಟಿಗೆ ಅರ್ಧ ದುಡ್ಡನ್ನು ಕೊಡಿ ಎಂದು ಹೇಳಿದ್ದೀರಿ. ಇದರಿಂದೇನು ತೋರಿಸುತ್ತದೆಂದರೆ, ಲೀಗಲ್ ಅಡ್ವೈಜರ್ಸ್ ಜಿಲ್ಲಾ ಮಟ್ಟದಲ್ಲಿ ಯಾರ್‍ಯಾರು ಇದ್ದಾರೋ ಅವರಿಗೆ ಅರ್ಹತೆ ಇಲ್ಲದಿದ್ದರೂ ಪಬ್ಲಿಕ್ ಪ್ಲೇಸಸ್ ಕೊಡಬೇಕೆಂದು ಕೊಟ್ಟಿದ್ದೀರಿ. ವಸೂಲಿ ಬಾಬಿಗೆ ಒಳಗಾಗಿ ಅವರಿಗೆ ನ್ಯಾಯ ಶಾಸ್ತ್ರದಲ್ಲಿ ಅನುಭವ ಇಲ್ಲದೆ ಇದ್ದರೂ ಅವರನ್ನು ಗರ್ವಮೆಂಟ್ ಪ್ಲೀಡರ್ ಆಗಿ ಮಾಡಿದ್ದೀರಿ. ಅವರಿಗೆ ಅನುಭವ ಕಡಿಮೆ ಇರುವುದರಿಂದಲೇ ಅವರು ಅಂತಹ ಕೇಸುಗಳಲ್ಲಿ ಕಂಟೆಸ್ಟ್ ಮಾಡದೆ ಅಡಿಷನಲ್ ಸಿವಿಲ್ ಜಡ್ಜ್ ಮುಂದೆ ಅಪೀಲು ಹೋಗಬೇಕಾಗಿದೆ. ಈಗ ಸುಮಾರು ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೋಸ್ಕರ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ತೆಗೆದುಕೊಂಡು ಬಂದಿದ್ದೀರಿ ಇದು ನ್ಯಾಯವೇ? ಇವರಿಗೂ ಔಚಿತ್ಯಕ್ಕೂ ಬಹಳ ದೂರವಿದೆ. ಎಷ್ಟು ಹಣವನ್ನು ಯಾವ ರೀತಿ ಖರ್ಚುಮಾಡಬೇಕೆಂಬ ಬಗ್ಗೆ ಅವರಿಗೆ ವಿಮರ್ಶಾತ್ಮಕ ದೃಷ್ಟಿಕೋಣ ಮಂದವಾಗಿದೆ.

ಇನ್ನೊಂದು ವಿಷಯ ಜನರಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡಿನಲ್ಲಿ ಇನಾಂ ಅಬಾಲಿಷನ್ ಡೆಪ್ಯೂಟಿ ಕಮಿಷನರ್ ಆಫೀಸಿನಲ್ಲಿ ಒಬ್ಬ ಡೆಪ್ಯೂಟಿ ಕಮಿಷನರ್, ಗೆಜೆಟೆಡ್ ಅಸಿಸ್ಟೆಂಟ್, ಎನ್.ಇ.ಎಸ್. ಅಕೌಂಟೆಂಟ್, ಫಸ್ಟ್ ಡಿವಿಜನ್ ಕ್ಲಾರ್ಕ್, ಸೆಕೆಂಡ್ ಡಿವಿಜನ್ ಕ್ಲಾರ್ಕ್, ಸ್ಟೆನೋಗ್ರಾಫರ್ ಅಟೆಂಡರ್, ಜವಾನ—ಇವರಿಗೋಸ್ಕರ ಹಣವನ್ನು ಇಲ್ಲಿ ಕೇಳಿದ್ದಾರೆ. ಇನಾಮ್ ಅಬಾಲಿಷನ್ ಡೆಪ್ಯುಟಿ ಕಮಿಷನರ್ ಆಫೀಸಿಗೆ ಸಂಬಂಧಪಟ್ಟಹಾಗೆ ಇಷ್ಟು ಹಣವನ್ನು ಏಕೆ ಖರ್ಚುಮಾಡಬೇಕು? ಅಲ್ಲಿಗೆ ಎಷ್ಟು ಡಿಸ್‌ಪ್ಯೂಟ್ಸ್ ಬರುತ್ತವೆ ಎಂಬುದನ್ನು ವಿಚಾರ ಮಾಡಬೇಕು. ಯಾರಿಗೋ ಒಬ್ಬರಿಗೆ ಐ. ಎ. ಎಸ್. ಮಾಡಿಕೊಂಡು ಬಂದಿರುವವರಿಗೆ ಒಂದು ಜಾಗವನ್ನು ಕಲ್ಪಿಸಿ ಕೊಡುವುದಕ್ಕೋಸ್ಕರ ಈ ರೀತಿ ಮಾಡಿದ್ದಾರೆಂದು ಗೊತ್ತಾಗುತ್ತದೆ. ಪ್ರತಿ ವರ್ಷವೂ ಇವರನ್ನು ಕಂಟಿನ್ಯೂ ಮಾಡಿಕೊಂಡು ಹೋಗುತ್ತಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿರತಕ್ಕ ಇನಾಂ ಅಬಾಲಿಷನ್ ಡೆಪ್ಯುಟಿ ಕಮಿಷನರ್ ಇದುವರೆಗೆ ಎಷ್ಟು ಕೇಸುಗಳನ್ನು ಡಿಸ್‌ಪೋಸ್ ಮಾಡಿದ್ದಾರೆ. ಎಷ್ಟು ಕೇಸುಗಳು ಎಂದಿನಿಂದ ಪೆಂಡಿಂಗ್‌ನಲ್ಲಿವೆ? ಇನ್ ಎಫಿಷಿಯೆಂಟ್ ಆಫೀಸರನ್ನು ತೆಗೆದುಕೊಂಡು ಹೋಗಿ, ಅಲ್ಲಿಟ್ಟು ಅವರನ್ನು ದೊಡ್ಡವರು ಮಕ್ಕಳು ಎಂದು ಅವರಿಗೋಸ್ಕರ ಖರ್ಚುಮಾಡಿದರೆ ಹೇಗೆ? ರೆವಿನ್ಯೂ ಇನಾಂ ಅಬಾಲಿಷನ್ ಕೇಸಿನಲ್ಲಿ ಇವರು ಒಂದು ಜಡ್ಜ್‌ಮೆಂಟ್ ಕೊಟ್ಟರೆ ಅದನ್ನು ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಚೇರ್‌ಮನ್ ಅವರು ಒಪ್ಪುವುದಿಲ್ಲ. ಹೀಗಾಗಿ ಆ ಡೆಪ್ಯುಟಿ ಕಮಿಷನರಿಗೂ ಮತ್ತು ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಚೇರಮನ್ನರ ತೀರ್ಮಾನಕ್ಕೆ ಒಂದಕ್ಕೊಂದು ಸಂಬಂಧವೇ ಇರುವುದಿಲ್ಲ. ಇದು ಅನೇಕರಿಗೆ ಗೊತ್ತಿದೆ. ಇದರಿಂದಲೇ ಎಷ್ಟೋ ವರ್ಷಗಳಿಂದ ಇನಾಂ ಕೇಸುಗಳು ಹಾಗೆಯೇ ಉಳಿದಿವೆ. ಸುಮ್ಮನೆ ಇದಕ್ಕಾಗಿ ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ವೆಚ್ಚ ಮಾಡುತ್ತಿದ್ದಾರೆ. ಇವರಿಗೆ ದೂರದೃಷ್ಟಿ ಇದೆಯೇ? ಯಾವ್ಯಾವ ಅಧಿಕಾರಿ ಎಷ್ಟೆಷ್ಟು ಕೆಲಸ ಮಾಡಬೇಕೆಂದು ತೂಕ ಹಾಕಿದ್ದಾರೆಯೇ ಅದರ ಬಗ್ಗೆ ತಾಳೆ ಮಾಡಿನೋಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಜನ ಈಗ ಅನ್ನ, ಅನ್ನ, ಕೆಲಸ, ಕೆಲಸವೆಂದು ಎಲ್ಲೆಲ್ಲೂ ಕೇಳುತ್ತಿರುವಾಗ ಇಷ್ಟು ಅನ್ಯಾಯವಾಗಿ ಹಣವನ್ನು ಏಕೆ ಖರ್ಚುಮಾಡಬೇಕು. ಒಂದು ಸಾರಿ ನನ್ನ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರೇ ಒಂದು ಕಡೆ ಕ್ಷಾಮದ ದೆಸೆಯಿಂದ ಮಕ್ಕಳನ್ನೇ ಮಾರಾಟ ಮಾಡುತ್ತಿದ್ದಾರೆಂದು ಹೇಳುತ್ತಿದ್ದರು. ಈ ಐ. ಎ. ಎಸ್. ಆಫೀಸರಿಗೆ ಒಂದು ದೊಡ್ಡ ಬಂಗಲೇ, ಟೆಲಿಫೋನ್, ಕಾರ್, ಇದರಮೇಲೆ ಅವರಿಗೆ ಬೇಕಾದಷ್ಟು ಹಣವನ್ನು ಖರ್ಚುಮಾಡಬೇಕೆಂದು ಈಗ ಹೊರಟಿದ್ದಾರೆ. ಇದು ಸರ್ವಥಾ ಸರಿಯೇ ಎಂದು ನಾನು ಕೇಳುತ್ತೇನೆ. ನನ್ನ ತರುಣ ಸ್ನೇಹಿತರಾದಂತ ಹಣ ಕಾಸಿನ ಸಚಿವರಾದರೂ ಇದನ್ನು ಕಣ್ಣು ಬಿಟ್ಟು ನೋಡಬೇಡವೇ? ನಿಜವಾಗಿ ಈ ಅಧಿಕಾರಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಆ ಇಲಾಖೆಗೆ ನಿಜವಾಗಿ ಚುರುಕು ಆಫೀಸರನ್ನು ಕೂಡಲೇ ನೇಮಕ ಮಾಡಬೇಕು. ಈ ರೀತಿಯಾಗಿ ಹಣವನ್ನು ಅಪವ್ಯಯ ಮಾಡುವುದು ಸರ್ಕಾರಕ್ಕೆ ಖಂಡಿತವಾಗಿ ನ್ಯಾಯವಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 13. ಒಂದೊಂದು ಬ್ರಾಂಚಿಗೆ ಒಂದೊಂದು ಪ್ರಿಟಿಂಗ್ ಪ್ರೆಸ್ ಎಂದು ಮಾಡಿದ್ದಾರೆ. ಇನ್‌ಫರ್‌ಮೇಷನ್ ಆಫೀಸಿಗೊಂದು ಪ್ರೆಸ್, ಪೋಲೀಸ್ ಡಿಪಾರ್ಟ್‌ಮೆಂಟಿಗೊಂದು ಪ್ರೆಸ್, ಆಹಾರ ಮಂತ್ರಿಗಳಿಗೊಂದು ಪ್ರೆಸ್, ಹಣಕಾಸಿನ ಮಂತ್ರಿಗಳಿಗೊಂದು ಪ್ರೆಸ್, ಹೀಗೆ ಅವರಿಗೊಂದು ಪ್ರೆಸ್ ಇವರಿಗೊಂದು ಪ್ರೆಸ್ ಎಂದು ಎಷ್ಟೋ ಪ್ರೆಸ್‌ಗಳನ್ನು ತೆಗೆಯುತ್ತಿದ್ದಾರೆ.

MR. DEPUTY SPEAKER.—The House will now rise for lunch to meet after half-an-hour.

---

*The House adjourned at Three of the Clock to meet again at Thirty-five Minutes past Three of the Clock.*

---

[Mr. Deputy Speaker in the Chair].

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಈಗತಾನೆ ಹೇಳಿದೆ ಒಂದೊಂದು ಖಾತೆಗೆ ಒಂದೊಂದು ಪ್ರೆಸ್ ಇಡುತ್ತಾರೋ ಏನೋ ಎಂದು. 7,700 ರೂಪಾಯಿಗಳಿಗೆ ಎಂತಹ ಪ್ರೆಸ್ ಬರುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಪ್ರೆಸ್ ಸೆಕ್ಷನ್.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಏನು ಅರ್ಥವಾಯಿತು ಎಂದರೆ, ಪ್ರೆಸ್ ಇಡುವುದಕ್ಕೋಸ್ಕರ ಒಂದು ಸೆಕ್ಷನ್ ತೆಗೆಯುತ್ತಾರೆ, ಅದು ಒಂದು ದೊಡ್ಡ ಪ್ರಾಜೆಕ್ಟ್ ಆಗುತ್ತದೆ ಎಂದು. ಈಗ ಇದರಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ ಸಿ. ಐ. ಡಿ. ಯಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್ ಸೆಕ್ಷನ್ ಇದೆ. ಸಿ. ಐ. ಡಿ. ಗೆ ಪ್ರತ್ಯೇಕವಾದ ಒಂದು ಸೆಕ್ಷನ್ ಇದೆ, ಸಿಬ್ಬಂದಿ ಇದ್ದಾರೆ. ಮತ್ತೆ ಇದಕ್ಕೆ ಹಣ ಏತಕ್ಕೆ ಬೇಕು ? ಅಲ್ಲಿ ಏನಾದರೂ ಅಡಿಷನಲ್ ಡಿ. ವೈ. ಎಸ್. ಪಿ. ಇದ್ದಾರೆಯೇ ? ಎಸ್. ಪಿ. ಇದ್ದಾರೆಯೇ, ಅಥವಾ ಪೋಲೀಸಿನವರು ಇದ್ದಾರೆಯೇ? ಅವರಿಗೆ ಟಿ. ಎ. ಡಿ. ಎ. ಕೊಡುವುದಕ್ಕೋಸ್ಕರವಾಗಿ ಏನಾದರೂ ಈ 7,700 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆಯೇ ಹೇಗೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಪಾಕಿಸ್ಥಾನದವರು ಮತ್ತು ಚೀನಿಯರು ನಮ್ಮದೇಶದ ಮೇಲೆ ದಂಡೆತ್ತಿಬಂದಾಗ ನಮಗೆ ಹೆಚ್ಚಿಗೆ ಪೋಲೀಸು ಸಿಬ್ಬಂದಿ ಬೇಕು ಎಂದು ಕೇಳಲಿಲ್ಲ. ಆಗ ಇದ್ದಂತಹ ಸಿಬ್ಬಂದಿಯಿಂದಲೇ ಕೆಲಸವನ್ನು ನಡೆಸಿದರು. ಈಗ ಏತಕ್ಕೆ ಹೆಚ್ಚು ಸಿಬ್ಬಂದಿ ಬೇಕು ? 1955ನೇ ಇಸವಿಯಲ್ಲಿ ಈ ಪೋಲೀಸು ಖಾತೆಯನ್ನು ವಹಿಸಿಕೊಂಡಂತಹ ಗೃಹ ಸಚಿವರು ತಲೆ ಬಾಲ ಎಲ್ಲಕ್ಕೂ ಒಂದೊಂದಕ್ಕೂ ಒಬ್ಬೊಬ್ಬ ಅಧಿಕಾರಿಗಳನ್ನು ಇಟ್ಟುಕೊಂಡು ಸರ್ಕಾರದ ಹಣವನ್ನು ಖರ್ಚು ಮಾಡತಕ್ಕದ್ದು ಸರಿಯಲ್ಲ. ಪೋಲೀಸು ಖಾತೆಗೆ ಇಷ್ಟು ಹಣ ಏತಕ್ಕೆ ? ಸತ್ಯಕ್ಕೆ ದೂರವಾದ ವರ್ತಮಾನಗಳನ್ನು ಕೊಡುವುದಕ್ಕೋಸ್ಕರ ಪೋಲೀಸು ಖಾತೆಗೆ ಹಣವನ್ನು ಖರ್ಚು ಮಾಡಿದ್ದಾರೆ. ಇವೊತ್ತು ಪ್ರಶ್ನೋತ್ತರ ಕಾಲದಲ್ಲಿ ಒಂದು ಪ್ರಶ್ನೆಗೆ ಮಾನ್ಯ ಗೃಹಸಚಿವರು ಉತ್ತರ ಕೊಡುತ್ತಾ ದಾವಣಗೆರೆಯಲ್ಲಿ ಒಬ್ಬರು ಮರ್ಯಾದಸ್ಥರನ್ನು ಪೋಲೀಸಿನವರು ದಸ್ತಗಿರಿ ಮಾಡಿದಾಗ, ಅವರಿಗೆ ಅದರ ಅನುಭವ ಇರಲಿಲ್ಲ, ಆದ್ದರಿಂದ ಅವರಿಗೆ ಲೂಸ್ ಮೋಷನ್ ಆಯಿತು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇಂಥಾ ಹಗುರವಾದ ಉತ್ತರವನ್ನು ಹೇಳತಕ್ಕ ಒಬ್ಬರು ಸಚಿವರು ನಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ ಎಂದರೆ ಇದಕ್ಕಿಂತಲೂ ಹೀನವಾದದ್ದು ಮತ್ತೊಂದಿಲ್ಲ. ಇನ್ನು ಮೇಲಾದರೂ ಕೂಡ ಜನತೆ ಎಚ್ಚೆತ್ತುಕೊಳ್ಳಬೇಕು. ದಸ್ತಗಿರಿ ಮಾಡಿದ ಮನುಷ್ಯರಿಗೆ ಜೈಲಿಗೆ ಹೋದ ಅನುಭವ ಇರಲಿಲ್ಲ, ಅವರು ಹೊಸದಾಗಿ ಜೈಲಿಗೆ ಹೋಗಿದ್ದರು, ಆದ್ದರಿಂದ ಅವರಿಗೆ ಲೂಸ್ ಮೋಷನ್ ಆಯಿತು ಎಂದು ಹೇಳಿದರು. ಇಂಥಾ ಉತ್ತರವನ್ನು ಹೇಳತಕ್ಕಂಥಾದ್ದಕ್ಕೆ ಈಗ ಹಣವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಇದಕ್ಕೆ ಒಂದು ಇಲಾಖೆ ! ಈ ಪೋಲೀಸು ಇಲಾಖೆಯಿಂದ ಜನಗಳ ಜೀವ ಮತ್ತು ಆಸ್ತಿ ಪಾಸ್ತಿಗಳಿಗೆ ಸಿಕ್ಯೂರಿಟಿ ಸಿಕ್ಕುತ್ತದೆಯೇ ? ಇವರು ಲಾ ಅಂಡ್ ಆರ್ಡರ್ ಮೆಂಟೇನ್ ಮಾಡುತ್ತಾರೆಯೇ ? ಗುಲ್ಬರ್ಗಾದಲ್ಲಿ ಲೂಟಿ ನಡೆದ ಸಂಬಂಧದಲ್ಲಿ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಗೃಹಸಚಿವರು ಮನಸ್ಸಿಗೆ ಬಂದಹಾಗೆ ಉತ್ತರವನ್ನು ಹೇಳಿದ್ದಾರೆ. ಆದ್ದರಿಂದ ಈ ಮಂತ್ರಿಗಳ ಕೈಯಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಕೊಡಲು ನಾವು ತಯಾರಿಲ್ಲ ಎಂದು ಖಂಡ ತುಂಡಾಗಿ ಹೇಳಬೇಕಾಗಿದೆ. 1955 ನೇ ಇಸವಿಯಲ್ಲಿ ಈ ಖಾತೆಯನ್ನು ವಹಿಸಿಕೊಂಡಂತಹ ಈ ಗೃಹ ಸಚಿವರು ಒಂದು ವರ್ಷದಲ್ಲಿ ಯಾರು ಯಾರನ್ನು ಹಿಡಿಯುವ ವ್ಯವಸ್ಥೆ ಮಾಡಬೇಕು. ಯಾರು ಯಾರಿಗೆ ಅವಮಾನ ಮಾಡಬೇಕು ಎನ್ನುವ ಹವ್ಯಾಸಕ್ಕೆ ಕೈ ಹಾಕಿದ್ದಾರೆ. ಹಿಂದೆ ಮುನಿಯಮ್ಮನ ಪ್ರಕರಣ ಬಂದಾಗ ಒಂದು ಸಾರಿ ಶ್ರೀಮಾನ್ ನಿಜಲಿಂಗಪ್ಪನವರು ಅಧಿಕಾರವನ್ನು ಬಿಟ್ಟು ಕೆಳಗಿಳಿಯಬೇಕಾಯಿತು. ಅದೇರೀತಿ ಈಗಲೂ ಕೂಡ ಗೃಹಸಚಿವರಿಂದ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಅಧಿಕಾರವನ್ನು ಬಿಟ್ಟು ಕೆಳಗೆ ಇಳಿಯಬೇಕಾದ ಪರಿಸ್ಥಿತಿ ಒದಗಬಹುದು ಅದಕ್ಕೋಸ್ಕರ ಅವರು ಗೃಹ ಸಚಿವರನ್ನು ಸ್ವಲ್ಪ ಹದ್ದುಬಸ್ತಿನಲ್ಲಿಟ್ಟುಕೊಳ್ಳಬೇಕು. ಇಲ್ಲದೇ ಹೋದರೆ ಅವರಿಂದ ಅನಾಹುತವಾಗುತ್ತದೆ.

ಇನ್ನು ವ್ಯವಸಾಯ ಇಲಾಖೆಯಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಮಾಡಿಸುವುದಕ್ಕೋಸ್ಕರ 19,37,000 ರೂಪಾಯಿಗಳನ್ನು ಕೇಳಿದ್ದಾರೆ. ಈ ಹಣವನ್ನು ಕೇಳಿರುವುದು ಸರಿಯಾಗಿದೆ. ಒಂದು ದೃಷ್ಟಿಯಲ್ಲಿ ವ್ಯವಸಾಯ ಇಲಾಖೆಯನ್ನು ಕಾಂಪ್ಲಿಮೆಂಟ್ ಮಾಡಿದರೂ ಇನ್ನೊಂದು ರೀತಿಯಲ್ಲಿ ಅದನ್ನು ಕಾಂಪ್ಲಿಮೆಂಟ್ ಮಾಡುವುದಕ್ಕೆ ನಾನು ತಯಾರು ಇಲ್ಲ. 1959 ನೇ ಇಸವಿಯಲ್ಲಿ ಶ್ರೀಮಾನ್. ಕೆ. ಎಫ್. ಪಾಟೀಲರು ಸಾಯಿಲ್ ಕನಸರ್‌ವೇಷನ್ನಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಈ ಸಭೆಯ ಮುಂದೆ ತಂದಾಗ ನಾನು ಅದನ್ನು ವಿರೋಧ ಮಾಡಿದ್ದೆ. ಆಗ ಆದ್ದರಿಂದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಜನಗಳಿಗೆ ತೊಂದರೆಯಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆವು. ಸಾಯಿಲ್ ಕನ್‌ಸರ್‌ವೇಷನ್ನಿನಿಂದ ಇಷ್ಟೊಂದು ಜನಗಳಿಗೆ ಅನಕೂಲವಾಗುತ್ತದೆ ಎಂದು ನಾವು ನಿರೀಕ್ಷಣೆ ಮಾಡಿರಲಿಲ್ಲ. ಇವೊತ್ತಿನದಿವಸ ದೇಶದಲ್ಲಿ ಜನಗಳು ಅನ್ನದ ಕ್ಷಾಮಕ್ಕೆ ತುತ್ತಾಗಿ ಪ್ರಾಣವನ್ನು ಬಿಡುತ್ತಾ ಇರತಕ್ಕ ಸಮಯದಲ್ಲಿ ವ್ಯವಸಾಯ ಇಲಾಖೆಯವರು ಈ ಸಾಯಿಲ್ ಕನ್‌ಸರ್‌ವೇಷನ್ನಿನ ಕೆಲಸವನ್ನು ಮಾಡಿಸಿ ಜನಗಳಿಗೆ ಕೂಲಿಯನ್ನು ಕೊಟ್ಟು ಅವರಿಗೆ ಅನ್ನಕ್ಕೆ ಮಾರ್ಗ ಮಾಡಿಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಸಾಯಿಲ್ ಕನ್‌ಸರ್‌ವೇಷನ್ ಸಬ್‌ಡಿವಿಜನ್ ತೆರೆದಿದ್ದಾರೆ. ಕಷ್ಟಕ್ಕೆ ಒಳಗಾಗಿರತಕ್ಕ ಇನ್ನೂ ಕೆಲವು ಜಿಲ್ಲೆಗಳಲ್ಲಿ ಒಂದೊಂದು ಸಾಯಿಲ್ ಕನ್‌ಸರ್‌ವೇಷನ್ ಸಬ್ ಡಿವಿಜನ್ ತೆರೆದಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಒಂದು ಸಾಯಿಲ್ ಕನ್‌ಸರ್‌ವೇಷನ್ ಸಬ್ ಡಿವಿಜನ್ ತೆರೆಯುವುದಕ್ಕೆ ಮಾನ್ಯ ವ್ಯವಸಾಯ ಮಂತ್ರಿಗಳು ನಾನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು, ಎಂದು ಹೇಳಿದರು. ಇಂಥಾ ಹೀನಪರಿಸ್ಥಿತಿ ಬಂದಿದೆ. ಈ ರೀತಿ ಅವರು ಹೇಳುವುದಾದರೆ, ಅವರು ಮಂತ್ರಿಯಾಗಿ ಏತಕ್ಕೆ ಇರಬೇಕೋ ನನಗಂತೂ ಅರ್ಥವಾಗುವುದಿಲ್ಲ. ಈಗ ಸಾಯಿಲ್ ಕನ್‌ಸರ್‌ವೇಷನ್, ಅಸಿಸ್ಟೆಂಟ್ಸ್ ಮತ್ತು ಸಾಯಿಲ್ ಕನ್‌ಸರ್‌ವೇಷನ್ ಡೆಮಾನ್‌ಸ್ಟ್ರೇಟರ್ಸ್‌ಗಳು ಇದ್ದಾರೆ. ಅವರ ಜಾಗದಲ್ಲಿ ಲೈಸೆನ್ಸಿಯೇಟ್ ಸಿವಿಲ್ ಇಂಜಿನಿಯರ್ಸ್ ಮತ್ತು ಡಿಪ್ಲೋಮಾ ಹೋಲ್ಡರುಗಳು ಏನಿದ್ದಾರೆಯೋ ಅವರುಗಳಿಗೆ ತರಪೇತಿಯನ್ನು ಕೊಟ್ಟು ನೇಮಕ ಮಾಡಿದರೆ ಅವರು ಅದಷ್ಟು ಚೆನ್ನಾಗಿ, ಜಾಗ್ರತೆಯಾಗಿ ಕೆಲಸವನ್ನು ಮಾಡುತ್ತಾರೆ. ಅವರಿಗೆ ಸರ್ವೆ ಎಂದರೆ ಏನು, ಎಸ್ಟಿಮೇಟ್ ಎಂದರೆ ಏನು ಎಂಬುದು ಗೊತ್ತಿರುತ್ತದೆ. ಆದ್ದರಿಂದ ಸಾಯಿಲ್ ಕನ್‌ಸರ್‌ವೇಷನ್ ಕೆಲಸಕ್ಕೆ ಅವರನ್ನು ನೇಮಕ ಮಾಡಿದರೆ ಒಳ್ಳೆಯದು. ಚಿತ್ರದುರ್ಗ ಜಿಲ್ಲೆಯಲ್ಲಿ ತಾಲ್ಲೂಕಿಗೆ ಒಂದೊಂದು ಸಾಯಿಲ್ ಕನ್‌ಸರ್‌ವೇಷನ್ ಸಬ್ ಡಿವಿಜನ್ ಇದೆ. ಆದರೆ ತುಮಕೂರು ಡಿವಿಜನ್‌ನಲ್ಲಿ ಏಳು ತಾಲ್ಲೂಕುಗಳಿಗೆ ಒಂದು ಇದೆ. ನನ್ನ ತಾಲ್ಲೂಕಿನಲ್ಲಿ 40 ಸಾವಿರ ಜನಕ್ಕೆ ಕೆಲಸ ಒದಗಿಸುವುದಾದರೆ, ಭೂಮಿ ಮೇಲೆ ಕೆಲಸ ಮಾಡಲು ಸಿದ್ಧರಾಗಿದ್ದಾರೆ. ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ 3 ಜನ ಡೆಮಾನುಸ್ಟ್ರೇಟರನ್ನು ಟೆಂಪೊರರಿ ಆಗಿ ಪ್ರಮೋಟ್ ಮಾಡಿ ಸಾಯಿಲ್ ಕನ್‌ಸರ್ವೇಷನ್ ಸಬ್ ಡಿವಿಷನ್ ಕೊಡುತ್ತೇವೆಂದು 8 ತಿಂಗಳ ಹಿಂದೆ ಮಾತು ಕೊಟ್ಟರು. ಈಗ ಏತಕ್ಕೆ ಬೇಕು ಎಂದು ಕೇಳುತ್ತಿದ್ದಾರೆ. ಇದರ ಹಿಂದುಗಡೆ ಪೊಲಿಟಿಕಲ್ ಪ್ರೆಶರ್ ಏನು ಇದೆಯೋ ನನಗೆ ತಿಳಿಯಲಿಲ್ಲ! ಇಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಸ್ಟಾಫ್ ಜಾಸ್ತಿಮಾಡುವುದಕ್ಕೋಸ್ಕರ ಹಣ ಕೇಳುತ್ತಿದ್ದೀರಿ. ಅಸಿಸ್ಟೆಂಟ್ಸ್ ತಯಾರುಮಾಡಿ, ಡೆಮಾನ್‌ಸ್ಟ್ರೇಟರ್ ತಯಾರುಮಾಡಿ ಕೊಡುವಾಗ ಬಹಳ ಸಮಯ ಹಿಡಿಯುತ್ತದೆ. ಮಳೆ ಎರಡು ತಿಂಗಳಿಂದ ಬಂದಿಲ್ಲ. ಅನೇಕ ಕಡೆ ಭೂಮಿಯನ್ನು ಉಳುಮೆ ಮಾಡಲಿಲ್ಲ. ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್ ಸರ್ವೆಮಾಡಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸ ತೆಗೆದುಕೊಳ್ಳದೇ ಹೋದರೆ ಸ್ಟಾಫ್‌ಗೆ ಟ್ರೈನಿಂಗ್ ಕೊಡುವ ಹೊತ್ತಿಗೆ ಜನ ಸತ್ತು ಹೋಗುತ್ತಾರೆ. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ಪಿ. ಡಬ್ಲ್ಯು. ಡಿ. ಕೆಲಸ ತುಮಕೂರು ತಾಲ್ಲೂಕಿನಲ್ಲಿ ಆಗಿರುವುದು ದೊಡ್ಡ ಸೊನ್ನೆ ನೀವು ನವಂಬರ್‌ನಿಂದ ಮಾಡುತ್ತಿದ್ದ ಕೆಲಸ ಮಾರ್ಚಿ 31 ರಲ್ಲಿಯೇ ಮುಗಿದುಹೋಯಿತು. ಈಗ ಒಂದು ಕೆಲಸವೂ ಇಲ್ಲ. ಅಸಿಸ್ಟೆಂಟ್ ಇಂಜನಿಯರನ್ನು ಮತ್ತು ಸಬ್‌ಡಿವಿಜನ್ ತೆಗೆದು ಬಿಡಿ. ಸರ್ಕಾರದಲ್ಲಿ ಹಣ ಇಲ್ಲ ಎಂದರೆ, ಬರೇ ಸಬ್‌ಡಿವಿಷನ್ ಇಟ್ಟು ಹಣ ಖರ್ಚು ಮಾಡಬೇಡಿ. ಸಬ್ ಡಿವಿಷನ್ ಇಟ್ಟು ಹಣ ಖರ್ಚು ಮಾಡಬೇಕಾದರೆ ಅವರಿಂದ ಕೆಲಸ ತೆಗೆದುಕೊಳ್ಳಿ. ಕೆಲಸ ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದರೆ ಒಂದು ಖಾತೆಗೆ ಅಸಿಸ್ಟೆಂಟ್ ಇಂಜನೀಯರು, ಸರ್ವೇಯರ್ಸ್, ಎಸ್ಟಾಬ್ಲಿಷ್‌ಮೆಂಟ್ ಇಟ್ಟುಕೊಂಡು ಏನು ಪ್ರಯೋಜನ? ಅಲ್ಲಿ ಒಂದು ರೂಪಾಯಿನ ಕೆಲಸ ಕೂಡ ಇಲ್ಲ ಎಂದು ಹೇಳುತ್ತೇನೆ. Soil coservation is a boon to the agriculturist. The Agricultural Department is really feeding him to-day. ಇದನ್ನು ಏತಕ್ಕೋಸ್ಕರ ಒತ್ತಿ ಹೇಳುತೇನೆ ಎಂದರೆ ಹೆಚ್ಚಿನ ರೀತಿಯಲ್ಲಿ ಎಲ್ಲಿ ಕ್ಷಾಮದಿಂದ ಜನ ನರಳುತ್ತಿದ್ದಾರೋ ಅಲ್ಲಿ ಪಿ. ಡಬ್ಲ್ಯು. ಡಿ. ಯಲ್ಲಿ ಇರತಕ್ಕ ಸಿವಿಲ್ ಡಿಪ್ಲೊಮಾ ಹೋಲ್ಡರ್ಸ್‌ನ್ನು ಹಾಕಿ ಅವರಿಂದ ಕೆಲಸ ಮಾಡಿಸಬೇಕು. ಇವೊತ್ತಿನ ದಿವಸ ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟ್ ಮನಸ್ಸು ಮಾಡದೇ ಹೋದರೆ ರೆವಿನ್ಯೂ ಡಿಪಾರ್ಟ್‌ಮೆಂಟಿನವರಾಗಲಿ ಅಥವಾ ಯಾವುದೇ ಡಿಪಾರ್ಟ್‌ಮೆಂಟಿವರಾಗಲಿ ರಾಜ್ಯದಲ್ಲಿ ಇರತಕ್ಕ ಬರಗಾಲದ ಪೀಡಿತ ಜನಕ್ಕೆ ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿನವರು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ. ಎಲ್ಲಾ ಜನ ಅನ್ನಕ್ಕೆ ಬೇಡುತ್ತಾ ಇದ್ದಾರೆ. ಆದ್ದರಿಂದ ಅವರಿಗೆ ಕೆಲಸ ಒದಗಿಸುವುದಕ್ಕೋಸ್ಕರ, ಸಾಯಿಲ್‌ಕನ್‌ಸರ್ವೇಷನ್ ಕೆಲಸ ಕೊಡಲೇ ತೆಗೆದುಕೊಳ್ಳಬೇಕು. ನಾನಾದರೂ ಕೂಡ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿಗೆ 1 ಲಕ್ಷ 3 ಸಾವಿರ 600 ರೂಪಾಯಿಗೆ ಬದಲಾಗಿ 10

ಲಕ್ಷರೂಪಾಯಿ ಕೊಡಬೇಕೆಂದರೂ ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ತಯಾರಿದ್ದೇನೆ. ಹೆಚ್ಚಿಗೆ ಹಣ ಖರ್ಚುಮಾಡಿ, ಹೆಚ್ಚಿಗೆ ಜನ ಅಸಿಸ್ಟೆಂಟ್ಸ್ ಮತ್ತು ಡೆಮಾನ್ಸ್ಟ್ರೇಟರ್ಸ್ ತಯಾರು ಮಾಡಿ ಹೆಚ್ಚಿಗೆ ಸಬ್ ಡಿವಿಷನ್ ತೆರೆದು ಸಾಯಿಲ್ ಕನ್ಸರ್ವೇಷನ್ ಮಾಡುವುದರಿಂದ ಆಗಾಗ ಬರತಕ್ಕ ಬರಗಾಲ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕಾಗಿ ಹೆಚ್ಚಿಗೆ ಹಣ ಒದಗಿಸದೇ ಇರುವುದನ್ನು ನೋಡಿದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ಹಣಕಾಸಿನ ಸಚಿವರಿಗೆ ಈ ಹಣವನ್ನು ಮೂರರಷ್ಟು ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನರಿಗೆ ಮನೆಗಳನ್ನು ಕಟ್ಟುವುದಕ್ಕೋಸ್ಕರ ಹಣ ಒದಗಿಸಿದ್ದಾರೆ. ಇದರಿಂದ ಶ್ರೀ ಹೆಗಡೆಯವರು ಹರಿಜನರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಈ ಹೊಸ ಖಾತೆಗೆ ಒಬ್ಬ ಜಾಯಿಂಟ್ ಡೈರೆಕ್ಟರ್, ಒಬ್ಬ ಸೂಪರಿಂಟೆಂಡೆಂಟ್, ಒಬ್ಬ ಫಸ್ಟ್ ಡಿವಿಷನ್ ಕ್ಲಾರ್ಕ್, ಒಬ್ಬ ಸೆಕೆಂಡ್ ಡಿವಿಜನ್ ಕ್ಲಾರ್ಕ್, ಸ್ಟೆನೋಗ್ರಾಫರ್, ಟೈಪಿಸ್ಟ್, ಜವಾನ ಇತ್ಯಾದಿ ಸ್ಟಾಫ್ ಒದಗಿಸಿದ್ದಾರೆ. ಇದೆಲ್ಲಾ ಹರಿಜನರಿಂದ ಓಟು ತೆಗೆದುಕೊಳ್ಳುವ ಉಪಾಯ ಈ ಬರೆಯಲ್ಲಿ ಯಾವ ಯಾವ ತಿಮಿಂಗಿಲಗಳು ಬೀಳುತ್ತವೋ ಗೊತ್ತಿಲ್ಲ. ಶ್ರೀ ಹೆಗಡೆಯವರು ಮಹಾ ಚಾಣಕ್ಯರು. ಶ್ರೀ ನಿಜಲಿಂಗಪ್ಪನವರು ರಾಜಕೀಯ ಚತುರರು. ಶ್ರೀ ಹೆಗಡೆಯವರಿಗೆ ಏನು ಏನು ಮಾಡಬೇಕು ಎನ್ನುವುದು ಗೊತ್ತಿದೆ.

ಈ ಡಿಮ್ಯಾಂಡ್‌ನಲ್ಲಿ ಇನ್ನು ಕನ್ಸ್ಯೂಮರ್ಸ್ ಕೋ ಆಪರೇಟೀವ್ ಸೊಸೈಟಿಗಳು ಮತ್ತು ಹೋಲ್‌ಸೇಲ್ ಕೋಆಪರೇಟೀವ್ ಸ್ಟೋರ್ಸ್, ಅದಕ್ಕೆ ಒಂದೊಂದು ಬ್ಯಾಂಡಿಕೂಟ್ ಇರಬೇಕು ಎಂದು ಮಾಡುತ್ತಾ ಇದ್ದಾರೆ. ಪಂಜಾಬಿನಲ್ಲಿ ಬ್ಲ್ಯಾಕ್ ಮಾರ್ಕೆಟ್ ಮಾಡಿದ ವರ್ತಕರನ್ನು ಬೀದಿಯಲ್ಲಿ ಮೆರವಣಿಗೆ ಮಾಡಿದ್ದಾರೆ. ಇಲ್ಲಿ ಅಂತಹ ಒಬ್ಬ ವರ್ತಕರನ್ನು ಧೈರ್ಯವಾಗಿ ಹಿಡಿಯುವುದಕ್ಕೆ ಶಕ್ತಿ ಇದೆಯೇ? ಮಧುಗಿರಿ ಕೋಆಪರೇಟೀವ್ ಸೊಸೈಟಿಯಲ್ಲಿ 450 ಮೂಟೆ ಅಕ್ಕಿ ಹಿಡಿದರೆ, ಅವರ ಹೆಸರು, ಕುಲ ಗೋತ್ರವೇ ಇಲ್ಲ. ಅವರನ್ನು ಹಾಗೆಯೇ ಬಿಟ್ಟುಬಿಟ್ಟರು. ಶ್ರೀ ಕೃಷ್ಣಪ್ಪನವರ ಕೈಯಲ್ಲಿ ಆಹಾರ ಖಾತೆ ಸರಿಯಾಗಿ ನಡೆಯುವುದಿಲ್ಲ, ಅವರ ಕೈಯ್ಯಲ್ಲಿ ಬ್ಲಾಕ್ ಮಾರ್ಕೆಟ್ ಆಗುತ್ತದೆ. ಅವರ ಕೈಯಲ್ಲಿ ಅಧಿಕಾರ ಕೊಟ್ಟರೆ ದುರುಪಯೋಗವಾಗುತ್ತದೆ ಎಂದು ಹೇಳಿ ಶ್ರೀ ಜತ್ತಿಯವರ ಕೈಯಲ್ಲಿ ಆ ಖಾತೆಯನ್ನು ಕೊಟ್ಟರು. ಅವರು ತುಮಕೂರಿಗೆ ಬಂದು ಬಸವ ಜಯಂತಿಗೆ ಧಾನ್ಯವರ್ತಕರ ಸಂಘದವರಿಂದ ಒಂದು ಲಕ್ಷ ರೂಪಾಯಿ ವಸೂಲು ಮಾಡಿಕೊಂಡು ಬಂದರು. ನನಗಾದರೂ ಅನ್ನಿಸುತ್ತದೆ 'ಶ್ರೀ ಜತ್ತಿಯವರು ಆಹಾರ ಸಚಿವರು ಅವರು ಹೋಗಿದ್ದ ಜಾಗ ವರ್ತಕರ ಸಂಘ. ವಸೂಲುಮಾಡಿದ್ದು ಬಸವಜಯಂತಿಗೆ. ವರ್ತಕರು ಎಲ್ಲಿದ್ದಾರೆ? ವರ್ತಕರು ಜತ್ತಿಯವರ ಭುಜದ ಮೇಲೆ ಇದ್ದಾರೋ ಅಥವಾ ಜತ್ತಿಯವರು ಅವರ ಪಾಕೆಟ್‌ನಲ್ಲಿ ಇದ್ದಾರೋ ಅರ್ಥವಾಗುವುದಿಲ್ಲ. ಇದಕ್ಕೆ ಒಬ್ಬ ಜಾಯಿಂಟ್ ಡೈರೆಕ್ಟರ್ ಅಸಿಸ್ಟೆಂಟ್ ಡೈರೆಕ್ಟರ್, ಮಾಡಿ ತುಪ್ಪ ಮಾರುವುದಕ್ಕೆ ಒಂದು ಸೊಸೈಟಿ, ಇದ್ದಲು ಮಾರುವುದಕ್ಕೆ, ಬೆಣ್ಣೆ ಮಾರುವುದಕ್ಕ ಸೌದೆ ಮಾರುವುದಕ್ಕೆ ಒಂದೊಂದು ಸೊಸೈಟಿ ಮಾಡುವುದಕ್ಕೆ ಹೊರಟಿದ್ದೀರಿ ಸೊಸೈಟಿ ಇನ್‌ಸ್ಪೆಕ್ಟರ್‌ನ್ನು ನೀವು ಟ್ರಾನ್ಸ್‌ಫರ್ ಮಾಡಿದರೆ, 7 ತಿಂಗಳು ಆದರೂ ಅವರು ರಿಲೀವ್ ಆಗುವುದಿಲ್ಲ. ಸಿರಾ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಸೆಕ್ರೆಟರಿಯವರನ್ನು ಟ್ರಾನ್ಸ್‌ಫರ್ ಮಾಡಿ ಮೂರು ತಿಂಗಳು ಆಯಿತು. ಆದರೆ ಅವರು ತುಮಕೂರಿನಲ್ಲಿ ಇರತಕ್ಕ ಮಲ್ಲಿಕಾರ್ಜುನ ಎಲೆಕ್ಟ್ರಿಕ್ ಸ್ಟೋರ್ಸ್ ಪಾರ್ಟ್‌ನರ್, ಡಿಸ್ಟ್ರಿಕ್ಟ್ ಬ್ಯಾಂಕ್ ಛೇರ್ಮನ್. ಆದ್ದರಿಂದ ಇಂತಹ ಆಫೀಸುಗಳನ್ನು ಹೆಚ್ಚುಹೆಚ್ಚಾಗಿ ಕ್ರಿಯೇಟ್ ಮಾಡುವುದರಿಂದ ಆಡಳಿತ ಸೂತ್ರ ನಿಮ್ಮ ಕೈಯಿಂದ ಕಳಚಿ ಬೀಳುತ್ತದೆ. ನಾನು ಮೇಲೆ ಹೇಳಿದ ಆಫೀಸರನ್ನು ಇವೊತ್ತಿನವರೆಗೂ ಟ್ರಾನ್ಸ್‌ಫರ್ ಮಾಡುವುದಕ್ಕೆ ಆಗಲಿಲ್ಲ. ಮೊದಲು ಗೋಡನ್ ಓಪನ್ ಮಾಡುತ್ತೇವೆ; ಅದಕ್ಕೋಸ್ಕರ ಇಟ್ಟುಕೊಳ್ಳುತ್ತೇವೆ ಎಂದರು. ಕಟ್ಟಡವನ್ನು ಓಪನ್ ಮಾಡಿ ಒಂದು ತಿಂಗಳು ಆಯಿತು. ಮತ್ತೆ ಟ್ರಾನ್ಸ್‌ಫರ್ ಮಾಡಿದರು. ಆಗ ಮುಖ್ಯಮಂತ್ರಿಗಳೂ, ಶ್ರೀ ಎಂ. ವಿ. ರಾಮರಾಯರು ಬರುತ್ತಾರೆ, ಅವರು ಓಪನ್ ಮಾಡಲಿ ಆಮೇಲೆ ರಿಲೀವ್ ಮಾಡುತ್ತೇವೆ ಎಂದರು. ಅವರು ಬಂದ ಮೇಲಾದರೂ ರಿಲೀವ್ ಮಾಡುತ್ತಾರೆ ಎಂದರೆ ಅದೂ ಇಲ್ಲ. ಲೆಕ್ಕ ಪತ್ರಗಳ ಪ್ರಶ್ನೆ ಇತ್ಯರ್ಥ ಆಗಲಿಲ್ಲ. ಲೆಕ್ಕಪತ್ರ ಕೊಟ್ಟಾದ ಮೇಲೆ ರಿಲೀವ್ ಮಾಡುತ್ತೇವೆ ಎಂದು ಹೇಳುತ್ತಾರೆ. ಲೆಕ್ಕಪತ್ರ ಸಾಯುವವರೆಗೆ ಟೈಮು ಕೊಟ್ಟರೂ ಪೂರ್ತಿ ಆಗುವುದಿಲ್ಲ. 5 ಲಕ್ಷ ದುಡ್ಡನ್ನು 3—4 ಜನ ಹಂಚಿಕೊಂಡಿದ್ದಾರೆ. ವಸೂಲು ಮಾಡುವುದಕ್ಕಾಗಲಿಲ್ಲ. ಮುಖ್ಯಮಂತ್ರಿಗಳನ್ನೂ, ರಿಜಿಸ್ಟ್ರಾರ್‌ನ್ನೂ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಎಷ್ಟು ಜನ ಅಧಿಕಾರಿಗಳು ನಿಮ್ಮ ಕೈಕೆಳಗೆ ಕೆಲಸ ಮಾಡುತ್ತಾರೆ, ಅವರ ಮೇಲೆ ಸರಿಯಾದ ಹತೋಟಿ ಇಲ್ಲದೇ ಹೋದರೆ ಸರಿಯಾದ ಅಧಿಕಾರ ಮಾಡದೇ ಹೋದರೆ, ಹೊಸ ಹೊಸ ಪೋಸ್ಟ್ ಏತಕ್ಕೆ ಕ್ರಿಯೇಟ್ ಮಾಡುತ್ತೀರಿ? ಹೊಸ ಹುದ್ದೆಗಳನ್ನು ಕ್ರಿಯೇಟ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುವುದನ್ನು ವಿರೋಧಿಸುತ್ತೇನೆಂದಲ್ಲ. ಇರತಕ್ಕ ಅಧಿಕಾರಿಗಳನ್ನು ಇಟ್ಟುಕೊಳ್ಳುವುದಕ್ಕೆ ಶಕ್ಯವಿಲ್ಲವೇ ಇರುವಾಗ ಸಿಕ್ಕಾಪಟ್ಟೆ ಅಧಿಕಾರಿಗಳನ್ನು ಉತ್ಪನ್ನ ಮಾಡಿದರೆ, ಕೌರವರ ಸೇನೆಯ ಮೇಲೆ ಭೀಷ್ಮ, ದ್ರೋಣರನ್ನು ಹಾಕಿದರೂ, ಯಾರ ಮಾತು ಕೇಳುತ್ತಾರೆ?

ಪುಟ 20—ಡಿಮಾಂಡ್ 33 ರಲ್ಲಿ ತಾವು ಏನು ಹೇಳಿದ್ದೀರಿ? "C-Emergency Feeding Programme for vulnerable sections of the population in the scarcity affected areas—(1) Bangalore Division and (2) Mysore Division—5,00,000 each have been provided." ಈ ಹಣ ಹೇಗೆ ಖರ್ಚಾಯಿತು, ಇಲ್ಲಿ ಹೇಗೆ ಕೊರತೆ ಆಯ್ತು ಎಂಬುದನ್ನು ಏನಾದರೂ ತಿಳಿದುಕೊಂಡಿದ್ದೀರಾ? ಇವತ್ತಿನ ದಿವಸ ಎಷ್ಟೋ ಜನ ಕೂಲಿ ಕೆಲಸ ಮಾಡಲು ತಯಾರಾಗಿದ್ದಾರೆ. ಆದರೆ ಅವರನ್ನು ಇಂದು ನಿರ್ಗತಿಕರನ್ನಾಗಿ ಮಾಡಿದ್ದಾರೆ. ಅವರು ಗರ್ಭದಲ್ಲಿರುವ ಪಿಂಡವನ್ನು ತಿನ್ನುವ ಪ್ರಸಂಗ ಬಂದೊದಗಿದೆ. ಇಂಥ ಕಡೆ ತಾವು ಸರಿಯಾದ ಕೆಲಸಕಾರ್ಯಗಳನ್ನು ಒದಗಿಸದೆ ಹೋದರೆ, ಅವರ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಆದ್ದರಿಂದ ಎಮರ್ಜೆನ್ಸಿ ರಿಲೀಫ್ ವರ್ಕ್ಸ್ ಹೆಚ್ಚು ಮಾಡಿ, ಸಾಯಿಲ್ ಕನ್‌ಸರ್ವೇಶನ್ ಯೋಜನೆ ಮುಂತಾದ ಕಡೆ ಹೆಚ್ಚು ಕೆಲಸ ಜನರಿಗೆ ಒದಗುವಂತೆ ಮಾಡಬೇಕೇ ವಿನಾ ಇದಕ್ಕೆಲ್ಲಾ ಈ ರೀತಿ ದುರ್ವಿನಿಯೋಗ ಮಾಡುವ ರೀತಿಯಲ್ಲಿ ಸರ್ಕಾರದವರು ಖರ್ಚು ಮಾಡಬಾರದು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair.]

SRI M. Y. GHORPADE (Sandur).—Mr. Speaker, Sir, while offering some remarks on the Supplementary Estimates, I hope I will be permitted to make a few general remarks regarding the general tendency in all the Legislatures in our country to bring forth Supplementary Demands sometimes justified and sometimes not so clearly justified. So, I would like to preface my remarks by saying that this tendency is diluting budgetary control while bringing Supplementary Demands—Government sho uld make it quite clear why certain things could not be anticipated when the budget was drawn up. It should not be a sort routine normal procedure that after the budget, the Supplementary Budget and then another budget. In the Supplementary Budget I must say there are several items of expenditure for which sufficient reason has been stated, though of course there is scope for these Supplementary Demands to be more precise. I would emphasise that a time has come when we, just like the other States in the country, just cannot afford to continue all the various schemes which used to form part of the Five-Year Plans because money is not just there. Therefore, the time has come when we have to make up our mind clearly as to which are the pertinent schemes now from the point of view of the emergency we are facing and from the point of view of what the people at the village level consider important and we should set an example to the rest of the country by clearly setting forth which are the schemes which are to be thrown out and which are the schemes of very great importance on which we should concentrate our attention. Take for instance Rural Electrification. I have several times in this House stated that Mysore has not put sufficient emphasis on Rural Electrification. If we had given it top priority from the First Plan onwards come what may, I have no doubt that by the end of the Third Plan at least 75%, of the villages, if not all, in Mysore, would have been celectrified. This has

happened in Madras and what is possible for Madras should be possible for Mysore also. Even now I would appeal to the Government to give top priority to this and to make a positive declaration, now that we have sufficient power, that all the villages will be definitely electrified at least by the end of the Fifth Plan, if not earlier.

I would like to speak only about two or three Demands in the Supplementary Estimates. Before I do that, I would like to emphasise that only yesterday a very important conference of the Taluk Board Presidents of this Statemet and they have given certain uneqivocal indications of what is the popular will in Mysore State. I request the Government to consider some of these suggestions which have been unanimously recommended to the Government by almost all the Taluk Presidents of this State. I shall take only a few of those suggestions which were made to emphasise in this House to seek the support of M.L.As. on both sides for those suggestions in order to strengthen the hands of the Government in implementing them. Emphasis has been laid on agricultural credit stabilisation. No doubt it is a good idea to convert short-term loans to medium-term loans in order to relieve the agriculturists but I firmly belief that the short-term credits, if they are to function properly, must be given in terms of inputes such as improved seed, fertilizers and insecticides and not so much in terms of cash. We have the high-yeilding programme in the State and let us make up our minds to work this programme efficiently. Whatever short-term credit we give let us give in the form of inputs such as high-yielding seeds, fertilizer and insecticides which people do not get. I go a step further and say that while giving these scarce inputs to the people there is nothing wrong in asking them to repay the cost of those inputs in grain. I have said this before here and the Conference yesterday also unanimously endorsed it because, if you do that Mysore State can achive self-sufficiency in no time. If you do so in the next season we need not depend upon the Centre for our food. Every time the Prime Minister cannot go to America and ask for 9–10 million tons of food. America herself has told us that she does not have enough food to give us. Mysore is only marginally deficit compared to several other States and if only we take the trouble of procuring grain in return for inputs and stocking it at the taluk level and distributing to the people on family card system, there will be no food problem at all in Mysore State. It is very essential that we make the farmer give a certain portion of his crop at least to the extent of the loan he borrows, at a reasonable price. It should be fair both to the consumer and the producer. The price of jowar was Rs. 40 . It became Rs. 50 and the agriculturists were thinking how such good fortune came to them. Then it became Rs. 70 and now they are not satisfied with Rs. 100. Rs. 0-90 paise per kg. is clearly outside the purchasing power of the common man. As a matter of fact, the Mysore Government should be complimented for having introduced the family card system in the rural areas because the rural people are today guaranteed 5 kg . per head per month including wheat and jowar. They are selling jowar at 70 p. per kg. and even at 70 P. per kg. it is outside the purchasing capacity of the

(SRI M. Y. GHORPADE)

poor people and so they are not lifting that much because it is just too expensive for them. Therefore, I say that if the price is beyond that level they cannot afford to buy. Whereas if you tell the cultivator: "I am giving you fertilize seeds and pesticides which others do not easily get, in return for which please give us a part of your grains at procurement rate of say 55 or 60 P. per kg." then you will be able to solve the problem by selling it at about 70 p. per K. G. calculating about 10 P. per kg. for keeping the grain for 6 months in the godown. This is something which can be done, which we the cultivators of Mysore State will be happy to do because if the State enables us to grow 20 to 30 quintals per acre by the use of modern inputs, then it is not harsh on us farmers to part with a portion of the grain to Government at procurement price so that our fellow-beings the poor people may be able to get the grains at a reasonable price from Government.

4-00 P.M.

[MR. SPEAKER in the Chair]

I request Government to kindly take these suggestions seriously because it is no longer only my suggestion. It is a suggestion which has been accepted by all the Taluk Boards and it is only to be implemented by the State.

I also wish to emphasize two other things which the Government could very well do. Government is talking of consumer stores. It is a very good idea, but I would say that this idea could be very much improved if Government accepted the principle of giving essential commodities on credit to the consumers on the strength of the grain that they may deposit in the godown. For instance, even when most of the articles are available in the consumer stores at a little lower price than in the shops, as I said, the poor man who does not have the purchasing capacity to make cash purchases, does not go to the consumer stores but goes to the shop. So if you can tell him that for the additional grain that he grows in the harvest and which he may deposit, against that security to a specified extent, he would be able to draw consumer articles or essential commodities from the consumer stores on credit. If this is done, I personally feel that the consumer stores movement will be greatly strengthened. This has an additional advantage of linking up the consumer movement with storing of grains in godowns. I am also happy that the Government is also feeling the need for more storage facilities not only in the State and district levels but also at the taluk levels and at the firka levels for storing grains and inputs.

These are some of the suggestions which I would like Government to take rather seriously and if possible to try and give a definite reply as to what can be done because we have no time to be lost. I wish to

emphasize the input programe and if it is to succeed it must be ensured that seeds, fertilizers and insectisides are brought to the place of distribution at least 2 months in advance of the sowing season. If we are not able to do that, then the farmer is not going to have any confidence in our capacity to supply him the modern inputs in time.

Then crop insurace scheme is extermely important. Today we are talking of crop loan. What is actully given cannot be called crop loan because it is not agaist the crop but against various other types of security. In the case of sugarcane and coffee, it is purely a crop loan which is recovered as soon as the crop is raised and there is no risk. But in the crucial food sector it is difficult to do this unless you have a crop insurance scheme. If you give a crop loan of Rs. 200 and tell the farmer to use inputs, in case the crops fail for reasons beyond his control, the insurance scheme would help him and from this insurance you should be able to meet at least the cost of the inputs. Thus the crop loan also would be secured. This crop insurance scheme can be easlly worked and Mysore should be the pioneer in that respect. This is not a new idea. This idea has been accepted at the Planning Commission level and at the Central Government level and now it is only a question of who is to implement it. This is a very essential scheme and if only you introduce this scheme you will be able to give genuine crop loan on a wide enough scale. Otherwise your short term credit will go to the rich farmers who have assets to take such loans and who actually do not need such loans. So if your short term loans are to be of any benefit to the poor farmers for using modern inputs then you must think of a crop insurance scheme. If a State like Mysore works it out, I think it can be a big success. It can be introduced on a restricted scale in a Division and then on the basis of that experience it can be extended to other Divisions in the State.

In conclusion, I would like to repeat in brief my three suggestions First, the Government should take a policy decision to supply modern inputs and take grains in return. This idea has been accepted. even by the Prime Minister in her address to the Chief Ministers where she said that this is not a new idea, but was tired successfully in Taiwan and Japan and also it was in keeping with the psychological structure, culture and behaviour of our people. I want Mysore to be the first to implement this scheme. Then the next idea is to link the new idea of consumer stores for supply of essential commodities on credit to the farmers against deposit of grains. And thirdly crop insurance.

MR. SPEAKER.—I hope half an hour will be enough for the Government for the reply.

SRI RAMAKRISHNA HEGDE —.Yes.

MR. SPEAKER.—Then the debate will go up to 5-30 P.M. and at 5-30 the Finanace Minister will begin the reply. I will put the Demands to vote at 6 O'clock. Thereafter it may take about 10 minutes for all the demands to be put.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷರೇ ಈ ದಿವಸ ಸಭೆಯ ಮುಂದಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. 10ನೆಯ ಡಿಮಾಂಡ್ ಸಂಬಂಧದಲ್ಲಿ ಸುಮಾರು ಮೂರು ಕೋಟಿ ಇಪ್ಪತ್ತು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಇದಕ್ಕೆ ಕೊಟ್ಟಿರುವ ವಿವರಣೆಯೆಂದರೆ, ಸುಪ್ರೀಮ್ ಕೋರ್ಟಿಗೆ ಹೋಗುವ ಕೆಲವು ಅಪೀಲುಗಳಿಗೆ ಮುಂಚೆ ಮಾಡಿದ್ದ ಬಡ್ಜೆಟ್ಟು ಸಾಕಾಗಿಲ್ಲದ್ದರಿಂದ ಹೆಚ್ಚುವರಿ ಹಣವನ್ನು ಕೇಳಬೇಕಾಗಿದೆಯೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದಂಶವನ್ನು ತಿಳಿಯಬಯಸುತ್ತೇನೆ. ಮಾನ್ಯ ಅರ್ಥ ಸಚಿವರು ಅಧಿಕಾರಕ್ಕೆ ಬಂದಮೇಲೆ ಹೈಕೋರ್ಟಿನವರು 'ರಿಟ್' ಮೇಲೆ ಕೊಟ್ಟ ತೀರ್ಪಿನ ಮೇಲೆ ಎಷ್ಟು ಸಂದರ್ಭಗಳಲ್ಲಿ ಸರ್ಕಾರದವರು ಅಪೀಲ್ ಹೋಗಬೇಕಾಗಿ ಬಂದಿದೆ, ಎಷ್ಟು ಸಂದರ್ಭಗಳಲ್ಲಿ ಸರ್ಕಾರಕ್ಕೆ ವ್ಯತಿರಿಕ್ತವಾಗಿ ಹೈಕೋರ್ಟಿನಲ್ಲಿ ತೀರ್ಮಾನಗಳಾದುವೆಂಬುದನ್ನು ತಾವು ಉತ್ತರ ಕೊಡುವಾಗ್ಗೆ ತಿಳಿಸಬೇಕೆಂದು ಕೇಳುತ್ತೇನೆ. ಸರಕಾರಕ್ಕೆ ವಿರೋಧವಾಗಿ ಎಷ್ಟು ಕೇಸುಗಳಲ್ಲಿ ಹೈಕೋರ್ಟು ತೀರ್ಪು ಕೊಟ್ಟಿದೆ ಎಂದು ನಾನು ಕೇಳಿದ ಒಂದು ಪ್ರಶ್ನೆಗೆ ಇದುವರೆಗೆ ಉತ್ತರವೇ ಬಂದಿಲ್ಲ. ಮೈಸೂರು ಸಂಸ್ಥಾನದಲ್ಲಿ ಲಾ ಡಿಪಾರ್ಟಮೆಂಟು ಇದೆಯೇ ಯಾವ ರೀತಿ ಕೆಲಸ ಮಾಡುತ್ತದೆ, ಎಂದು ಕೇಳಬೇಕಾಗಿದೆ. ಅಲ್ಲಿ ಕೂಡ ರಾಜಕಾರಣ ಇದೆಯೇ, ಎಂದು ಪ್ರಶ್ನೆ ಕೇಳಬೇಕಾಗಿದೆ. ಈ ಲಾ ಡಿಪಾರ್ಟ್‌ಮೆಂಟಿಗೆ ಖರ್ಚು ಮಾಡತಕ್ಕ ಹಣ ವ್ಯರ್ಥವಾಗಿದೆ ಎಂದು ನನ್ನ ವೈಯುಕ್ತಿಕ ಅಭಿಪ್ರಾಯವಾಗಿದೆ. ಯಾಕೆಂದರೆ, ಯಾವದೇ ಒಂದು ತೀರ್ಮಾನ ಸರಕಾರ ತೆಗೆದುಕೊಂಡರೂ ಕೂಡ ಹೈಕೋರ್ಟಿನಲ್ಲಿ ಅದಕ್ಕೆ ವಿರೋಧವಾಗಿ ತೀರ್ಪು ಕೊಡುತ್ತಾರೆ. ಅಲ್ಲಿ ಏನೋ ಒಂದು ಲೋಪ ಅಧಿಕಾರಿಗಳಲ್ಲಿ ಇದೆ ಎಂದು ಅನ್ನಿಸುತ್ತದೆ. ಹೈ ಕೋರ್ಟಿನಿಂದ ಬರುವ ವಿರೋಧ ತೀರ್ಪುಗಳ ಮೇಲೆ ಎಷ್ಟು ಕೇಸುಗಳಲ್ಲಿ ಸರಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದೆ ಎಂಬುದಕ್ಕೆ ವಿವರಣೆ ಕೊಡಬೇಕು. ಕೆಲವು ಸಮಯ ಅಧಿಕಾರಿಗಳಗೋಸ್ಕರ ಅಪೀಲು ತೆಗೆದುಕೊಂಡು ಹೋಗುತ್ತಾರೆ. ಸಾರ್ವಜನಿಕರ ಹಣ ಏತಕ್ಕಾಗಿ ಹೀಗೆ ವ್ಯರ್ಥವಾಗಿ ಖರ್ಚು ಮಾಡಲಾಗುವುದು ? ಆದುದರಿಂದ ಈ ರೀತಿ ಸಪ್ಲಿಮೆಂಟರಿ ಡಿಮ್ಯಾಂಡ್ ತಂದು ಹಣ ಕೇಳುವುದು ಸರಿಯಲ್ಲ. ಸಾರ್ವಜನಿಕರ ಹಣ ಹೀಗೆ ಲಘುವಾಗಿ ಖರ್ಚು ಮಾಡಬಾರದು. ಒಂದು ಕಡೆಯ ಸಾಲ ತೀರಿಸುವುದಕ್ಕೆ ಇನ್ನೊಂದು ಕಡೆ ಸಾಲ ಮಾಡಿ ಹಣ ಕೊಡುವುದು ಹಾಸ್ಯಾಸ್ಪದವಾದ ವಿಷಯ. ಇದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಪಾವರ್ ಪ್ರೊಜೆಕ್ಟುಗಳಿಗೆ ಹಣ ಖರ್ಚು ಮಾಡತಕ್ಕಂಥಾದ್ದನ್ನು ಕಡಿಮೆ ಮಾಡುವ ಹವ್ಯಾಸಕ್ಕೆ ಹೋಗುವುದಿಲ್ಲ ಎಂದು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಅವರು ತಿಳಿಸಿದ್ದಾರೆ. ಆದರೆ ಹಣ ಕಾಸಿನ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ನೀರಾವರಿ ಯೋಜನೆಗೆ ಹತ್ತು ಕೋಟಿ ರೂಪಾಯಿ ಹೆಚ್ಚು ಒದಗಿಸುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಯಾವ ಸೂಚನೆಯಿಲ್ಲ. ಇದಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬಹುದಾಗಿತ್ತು. ಹೇಮಾವತಿ ಮತ್ತು ಹಾರಂಗಿ ಯೋಜನೆ ಕೆಲಸಕ್ಕಾಗಿ ಟೆಂಡರ್ಸ್ ಕಾಲ್‌ಫಾರ್ ಮಾಡಿ ಅನೇಕ ದಿವಸಗಳಾದರೂ ಕೂಡ ಕೆಲಸ ಮುಂದುವರೆಯುತ್ತಿಲ್ಲ. ಹೇಮಾವತಿ ಯೋಜನೆಯ ವಿಚಾರದಲ್ಲಿ ಟೆಂಡರ್ಸ್ ಒಪ್ಪಿಕೊಂಡಿದ್ದರೂ ಕೂಡ ಅಧಿಕಾರಿಗಳಿಂದ ಟೆಕ್ನಿಕಲ್ ಲೋಪದೋಷಗಳಿವೆ ಎಂದು ರಿಪೋರ್ಟ್ ತರಿಸಿ ಕಾರ್ಯ ನಿಲ್ಲಿಸಬೇಕು ಎಂದು ಸರಕಾರ ಪ್ರಯತ್ನ ಮಾಡುತ್ತಿದೆ ಎಂದು ತಿಳಿದು ಬಂದಿದೆ. ಇದರ ಬಗ್ಗೆ ವಿವರ ಕೊಟ್ಟು ತಿಳಿಸಬೇಕು. ಈ ಯೋಜನೆಯ ಬಗ್ಗೆ ಈ ಸಭೆಯಲ್ಲಿ ಅನೇಕ ಸಲ ಒತ್ತಾಯ ಮಾಡಿದ್ದೇವೆ. ಆದುದರಿಂದ ಕೆಲಸ ನಿಲ್ಲಿಸುವುದು ಸರಿಯಲ್ಲ. ಇದರ ಬಗ್ಗೆ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹಣ ಒದಗಿಸಿಲ್ಲ. ಹಣ ಇಲ್ಲದೆ ಕೆಲಸ ಹೇಗೆ ನಡೆಯುತ್ತದೆ ? ಏತಕ್ಕಾಗಿ ಈ ಯೋಜನೆಯ ಬಗ್ಗೆ ಇಷ್ಟು ಉದಾಸೀನ ಮಾಡುತ್ತಾರೆ ?

ಇನ್ನು ಲಿಫ್ಟ್ ಇರಿಗೇಶನ್ ವಿಚಾರದ ಬಗ್ಗೆ ಅನೇಕ ಸಲ ಪ್ರಶ್ನೋತ್ತರ ಕಾಲದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕೇಂದ್ರ ಸರಕಾರದವರು ಲಿಫ್ಟ್ ಇರಿಗೇಷನ್ ಅಪ್ರೂವ್ ಮಾಡತಕ್ಕ ಕಾಲದಲ್ಲಿ ಐವತ್ತು ಅಡಿಗಿಂತ ಹೆಚ್ಚು ಎತ್ತರವಾದರೆ ಮತ್ತು ಒಂದು ಎಕರೆಗೆ 300 ರೂಪಾಯಿಗಿಂತ ಪರ್‌ಕ್ಯಾಪಿಟಾ ಖರ್ಚು ಹೆಚ್ಚಾದರೆ ಟೆಕ್ನಿಕಲ್ ಫೀಜಿಬಿಲಿಟಿ ಬರುವುದಿಲ್ಲ ಮತ್ತು ಅದನ್ನು ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರಕಾರದವರು ನಮಗೆ ತಿಳಿಸಿದ್ದಾರೆ ಎಂದು ಈ ಮಾನ್ಯ ಸಭೆಯಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಕೇಂದ್ರ ಸರಕಾರ ಅಪ್ರೂವ್ ಮಾಡಿದ ಲಿಸ್ಟ್ ನೋಡಿದರೆ 31 ಕೆಲಸಗಳ ಪೈಕಿ 21 ಕೆಲಸಗಳನ್ನು ತೆಗೆದುಕೊಂಡಿದೆ ಎಂದು ಹೇಳುವುದು ನಿಜವಾಗಿಯೂ ಸತ್ಯಕ್ಕೆ ದೂರವಾಗಿದೆ ಎಂಬುದು ಕಂಡುಬರುತ್ತದೆ. 350 ರೂಪಾಯಿ ಕಾಸ್ಟ್‌ಪರ್ ಏಕರ್‌ದಿಂದ 600 ರೂಪಾಯಿ ಪರ್ ಏಕರ್ ಬರತಕ್ಕಂಥ ಸ್ಕೀಂ ಕೇಂದ್ರದವರು ಅಪ್ರೂವ್ ಮಾಡಿದ್ದಾರೆ. ಇದು ಯಾವ ನೀತಿಗೆ ಅನುಗುಣವಾಗಿದೆ ಎಂಬುದು ಅರ್ಥವಾಗುವುದಿಲ್ಲ. ಇದರ ಬಗ್ಗೆ ವಿವರ ಕೊಟ್ಟು ಉತ್ತರ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಏನೋ ರಾಜಕೀಯ ಇದೆ ಎಂದು ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—75-80 ಸ್ಕೀಮ್ಸ್ ನಾವು ಕಳಿಸಿದ್ದೆವು. ಅವುಗಳಲ್ಲಿ 31 ಸ್ಕೀಮ್ಸ್ ಅಪ್ರೂವ್ ಮಾಡಿ ಕಳಿಸಿದ್ದಾರೆ.

ಶ್ರೀ ಎಚ್ ಡಿ. ದೇವೇಗೌಡ.—ನಮ್ಮ ತಾಲ್ಲೂಕಿನಲ್ಲಿ ಎರಡು ಲಿಫ್ಟ್ ಇರಿಗೇಷನ್ ಬಗ್ಗೆ 1962ನೇ ಇಸವಿಯಲ್ಲಿ ಅಧಿಕಾರಿಗಳು ಅಂದಾಜು ಮಾಡಿ ಕಳಿಸಿದ್ದನ್ನು ಈ ಸಭೆಯಲ್ಲಿ ಚರ್ಚೆ ನಡೆದು ಆ ಕಾಲದಲ್ಲಿ ಮಂಜೂರು ಮಾಡುತ್ತೇವೆಂದು ಉತ್ತರ ಹೇಳಿದರು. 1962ನೇ ಇಸವಿಯಲ್ಲಿ ಪ್ರಥಮವಾಗಿ ಮೈಸೂರು ಸಂಸ್ಥಾನದಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬೇಕು ಎಂದು ಇರುವಾಗ್ಗೆ ಹೊಳೆನರಸೀಪುರ ಜಿಲ್ಲಾಧಿಕಾರಿಗಳು ಒಂದು ಸ್ಕೀಂ ಕಳಿಸಿದರು. ಅದರ ಬಗ್ಗೆ ಚರ್ಚೆ ನಡೆದಿದೆ. ಈ ಯೋಜನೆ ಬಗ್ಗೆ ಅನುಮಾನ ವ್ಯಕ್ತ ಪಡಿಸಿದರು. ಆದರೆ ಇದನ್ನು ಕೋ-ಆಪರೇಟಿವ್ ಬೇಸಿಸ್ ಮೇಲೆ ನಡೆಸಬಹುದು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದರು ಎಂದು ಕೇಳಿದ್ದೆವು. ಅದೇ ಒಂದು ಗೈಡ್ ಲೈನ್ ಆಗಿ ಇಟ್ಟುಕೊಂಡು, ಆಗ ಇದ್ದ ಜಿಲ್ಲಾಧಿಕಾರಿಗಳು ಸರ್ಕಾರದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಸೆಕ್ರೆಟರಿಗಳಾದ ಮೇಲೆ ಈ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಧೋರಣೆಯನ್ನು ತಾಳಿತು. ನಾಲ್ಕು ವರ್ಷಗಳ ಹಿಂದೆ ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ತಯಾರು ಮಾಡಿದ್ದಂಥ ಯೋಜನೆಗಳು ಇದರಲ್ಲಿ ಸೇರಲಿಲ್ಲ. ಏಕೆ ಹೀಗಾಯಿತು ಎಂದು ಸರ್ಕಾರವನ್ನು ಕೇಳುತ್ತೇನೆ.

ಲಿಫ್ಟ್ ನೀರಾವರಿ ಬಗ್ಗೆ ಎರಡನೆಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಸರ್ಕಾರ ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದೆ. ಆ ಪಟ್ಟಿಯಲ್ಲಿ ಒಂದು ಕೆಲಸವೂ ಸೇರಿಲ್ಲ. ಈ ಪಟ್ಟಿಯನ್ನು ನೋಡಿದರೆ 50 ಅಡಿಗಿಂತ ಆಳ, ಮತ್ತು ಎಕರೆಗೆ 350 ರೂಪಾಯಿಗಳಿಗೆ ಹೆಚ್ಚಾಗುವ ಕೆಲಸಗಳಿವೆ. ಇಂಥ 26 ಯೋಜನೆಗಳನ್ನು ಅಪ್ರೂವ್ ಮಾಡಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ರಾಜ್ಯ ಸರ್ಕಾರ ಮಾಡಿದ್ದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು. ನಾನು ಮತ್ತು ಹಣಕಾಸಿನ ಮಂತ್ರಿಗಳು ಎಲ್ಲ ಕಡೆಗೂ ಹೋದಾಗ, ಕೆಲವು ಕಡೆ ಕೆರೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ ಅಂಥ ಕಡೆ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬೇಕೆಂದು ಜನಗಳು ಹೇಳಿದಾಗ ಒಂದೆರಡು ಜಿಲ್ಲೆಗಳಲ್ಲಿ 'ಸ್ಪಿಲ್ ಓವರ್ ವರ್ಕ್ಸ್' ನೋಡಿಕೊಂಡು, ಹೊಸ ಕಾರ್ಯಗಳನ್ನು ಪ್ರಾರಂಭ ಮಾಡಲು ಸಾಧ್ಯವಾಗದೆ ಇರುವುದನ್ನು ನೋಡಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಕೆರೆಗಳನ್ನು ನಿರ್ಮಿಸುವುದಕ್ಕೆ ಅವಕಾಶವಿಲ್ಲ, ನಮ್ಮಲ್ಲಿ ನದಿಗಳು ಹರಿಯುವುದರಿಂದ ಲಿಫ್ಟ್ ಇರಿಗೇಷನ್ನಿಗೆ ನಮ್ಮಲ್ಲಿ ಹೆಚ್ಚು ಅವಕಾಶ ಕೊಡಬೇಕೆಂದು ಕೇಳಿದಾಗ ಅಂಥವರಿಗೆ ಹೆಚ್ಚು ಕೊಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಬಳ್ಳಾರಿ ಜಿಲ್ಲೆಯಲ್ಲಿ ಕೆರೆ ಕಟ್ಟುವುದಕ್ಕೆ ಅವಕಾಶವಿಲ್ಲ. ತುಂಗಭದ್ರ ಫೋರ್‌ಷೋರ್‌ನಲ್ಲಿ ಡಿಸ್‌ಪ್ಲೇಸ್ಡ್ ಮತ್ತು ರೀಹ್ಯಾಬಿಲಿಟೇಟೆಡ್ ಜನರಿದ್ದಾರೆ, ಅಲ್ಲಿಗೆ ಲಿಫ್ಟ್ ಇರಿಗೇಷನ್ ಕೊಡಿ ಎಂದು ಕೇಳಿದಾಗ ಬಳ್ಳಾರಿ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಅಂಥ ಕಡೆ ಲಿಫ್ಟ್ ಇರಿಗೇಷನ್ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಬಳ್ಳಾರಿ ಜಿಲ್ಲೆಯಲ್ಲಿ ತೆಗೆದುಕೊಳ್ಳತಕ್ಕದ್ದು, ಇನ್ನೊಂದು ಜಿಲ್ಲೆಯಲ್ಲಿ ತೆಗೆದುಕೊಳ್ಳುವುದು ಎನ್ನುವುದರ ಬಗ್ಗೆ ನಾನು ಅಡ್ಡಿ ಬರುತ್ತಿಲ್ಲ. ಯಾವ ನೀತಿಯ ಮೇಲೆ ಈ ಯೋಜನೆಗಳನ್ನು ಮಂಜೂರು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಪ್ರಶ್ನೆ ಮಾಡಿದೆ. ಎಲ್ಲಿ ಕೆರೆಗಳು ಇಲ್ಲ ಅಂಥ ಕಡೆ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಂಜೂರು ಮಾಡುವುದು ಅವಶ್ಯಕವೆಂದು ಹೇಳಿದರೂ, ಅದನ್ನು ತಾತ್ವಿಕವಾಗಿ ಒಪ್ಪುವುದಾದರೂ ಕೂಡ ಪಟ್ಟಿಯಲ್ಲಿರತಕ್ಕ ಅಂಕಿ ಅಂಶಗಳ ಕಡೆಗೆ ಗಮನವನ್ನು ಸೆಳೆಯುವುದಾದರೆ ಚಿತ್ರದುರ್ಗ ಜಿಲ್ಲೆಯಲ್ಲಿ 14 ಯೋಜನೆಗಳು, ಚಿಕ್ಕಮಗಳೂರಿನಲ್ಲಿ ನಾಲ್ಕೈದು ಯೋಜನೆಗಳು ಹೀಗೆ ಅಪ್ರೂವ್ ಮಾಡಿದ್ದಾರೆ. ಇಂಥ ಕಡೆ ಕೊಟ್ಟಿದ್ದಾರೆ ಎಂದು ನಾನು ಆರೋಪ ಮಾಡುತ್ತಿಲ್ಲ. ಹಾಸನ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಆಗಬೇಕೆಂದು ಮಾನ್ಯ ಸಚಿವರಿಗೂ ಮತ್ತು ಮುಖ್ಯ ಮಂತ್ರಿಗಳಿಗೂ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಹಳ್ಳಿಮೈಸೂರು ಹೋಬಳಿಯಲ್ಲಿ ಎಷ್ಟು ಮೇಜರ್ ಪ್ರಾಜೆಕ್ಟ್ಸ್......

ಶ್ರೀ ವೀರೇಂದ್ರ ಪಾಟೀಲ್.—ಹಾಸನ ಜಿಲ್ಲೆಯಲ್ಲಿ 22 ಲಕ್ಷ ರೂಪಾಯಿಗಳ ಹೊಸ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಒಂದು ವೇಳೆ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಲೇಬೇಕು ಎಂದು ಹೇಳುವುದಾದರೆ, ಕೆಲವು ಕೆಲಸಕಾರ್ಯಗಳನ್ನು ಬಿಟ್ಟು ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕೆರೆಗಳನ್ನು ಕಟ್ಟಿ ಫ್ಲೋ ಇರಿಗೇಷನ್ ಕೊಡುವುದಕ್ಕೆ ಬದಲಾಗಿ ಲಿಫ್ಟ್ ಇರಿಗೇಷನ್‌ಗೆ ಖರ್ಚು ಮಾಡುವುದಕ್ಕೆ ಒಪ್ಪಿಗೆಯನ್ನು ಕೊಡುವುದಾದರೆ ಮಾಡುತ್ತೇವೆ ಎನ್ನುವ ವಾದಕ್ಕೆ ನಾನು ಹೇಳುವುದಾದರೆ ಸರ್ಕಾರದವರು ಕೊಟ್ಟಿರತಕ್ಕ ಹಣದಲ್ಲಿ ಎರಡು ಮೂರು ಲಕ್ಷ ರೂಪಾಯಿ ಕೆಲಸಗಳು ನಮ್ಮ ಭಾಗದಲ್ಲಿ ನಡೆಯಬಹುದು. ಒಂದೊಂದು ಲಿಫ್ಟ್ ಇರಿಗೇಷನ್

(ಶ್ರೀ ಹೆಚ್. ಡಿ. ದೇವೇಗೌಡ)

ಯೋಜನೆಗೂ ಒಂದೆರಡು ಲಕ್ಷ ರೂಪಾಯಿ ಖರ್ಚಾಗುವ ಕಾಲದಲ್ಲಿ ಜನರಲ್ ಸ್ಕೀಮ್‌ನಲ್ಲಿ ಮೈನರ್ ಇರಿಗೇಷನ್ ವರ್ಕ್ಸ್ ತೆಗೆದುಕೊಳ್ಳಬೇಕೇ ಹೊರತು ಅದನ್ನು ಕಡಮೆ ಮಾಡಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳುತ್ತೇವೆನ್ನುವುದು ಆಗದ ಪ್ರಶ್ನೆ. ಜನ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿರುವಾಗ ಅದನ್ನು ಪರಿಹರಿಸುವುದಕ್ಕೆ ಲಿಫ್ಟ್ ಇರಿಗೇಷನ್ ಸ್ಕೀಂ ಕಾರ್ಯಗತ ಮಾಡುವುದಾದರೆ ಅದಕ್ಕೆ ಹಣದ ಕೊರತೆ ಇದ್ದರೆ ಅದನ್ನು ಮುಂದೆ ಒಪ್ಪುವುದಾದರೆ ಕೆಲವು ಯೋಜನೆಗಳನ್ನು ಮಾಡುವುದರ ಬಗ್ಗೆ ಬಹಳ ಜಾಗ್ರತೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅರಕಲಗೂಡು ಮತ್ತು ಹೊಳೆ ನರಸೀಪುರ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ನಾಲ್ಕೈದು ವರ್ಷಗಳಿಂದ ಪೆಂಡಿಂಗ್ ಇರತಕ್ಕ ಯೋಜನೆಗಳನ್ನು ಸರ್ಕಾರದವರು ತೆಗೆದುಕೊಳ್ಳಲಿಲ್ಲ ಎಂದು ಪ್ರಸ್ತಾಪ ಮಾಡಿದೆ. ಮುಂದಿನ ಕೆಲವು ಅಂದಾಜುಗಳನ್ನು ಮಂಜೂರು ಮಾಡತಕ್ಕ ಸನ್ನಿವೇಶದಲ್ಲಿ ಈ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದೆ. ಈ ಯೋಜನೆಗಳನ್ನು ಮಂಜೂರು ಮಾಡಿ ನಮ್ಮ ಭಾಗಕ್ಕೆ ಪ್ರಾತಿನಿಧ್ಯ ಕೊಡುವಂತೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕೇಂದ್ರ ಸರ್ಕಾರದವರು ರೂಪಾಯಿಯ ಬೆಲೆಯನ್ನು ಅಪಮೌಲ್ಯ ಮಾಡಿದ್ದರಿಂದಾಗಿ ಇದುವರೆಗಾದರೂ ಸರ್ಕಾರದ ಅಂದಾಜು ಪತ್ರಿಕೆಗಳಲ್ಲಿ ಮತ್ತು ವ್ಯವಹಾರದಲ್ಲಿ ಬಹಳಷ್ಟು ಏರುಪೇರಾಗಿದೆ. ರಾಜ್ಯ ಸರ್ಕಾರದವರು ಹೇಳಿದ ಹಾಗೆ ತಮ್ಮ ಆಯವ್ಯಯದಲ್ಲಿ 10 ಕೋಟಿ ವ್ಯತ್ಯಾಸವಾಗಬಹುದು ಎಂದು ಊಹೆ ಮಾಡಿದ್ದಾರೆ. ಮೊದಲು ಆರು ಕೋಟಿ ಎಂದು ಹೇಳಿದ್ದರು. ಇತ್ತೀಚೆಗೆ ಯಾರೋ 10 ಕೋಟಿ ಆಗುತ್ತದೆ ಎಂದು ಹೇಳಿದರು. ಅದೇ ರೀತಿ ಕೇಂದ್ರ ಸರ್ಕಾರದ ಆಯವ್ಯಯದಲ್ಲಿಯೂ ವ್ಯತ್ಯಾಸವಾಗುತ್ತದೆ. ಅದು ಕರಡು ಯೋಜನೆಯ ಮೇಲೆ ಪರಿಣಾಮ ಮಾಡಿದೆ ಮತ್ತು ಕೈಗಾರಿಕೆಗಳ ಮೇಲೆ ಹಾಗೂ ಯಾವ ಕೈಗಾರಿಕೆ ಅಥವಾ ವ್ಯವಹಾರದಲ್ಲಿ ವಿದೇಶಿ ವಿನಿಮಯಕ್ಕೆ ಸಂಬಂಧಪಟ್ಟ ವಸ್ತುಗಳು ಅಥವಾ ಹಣ ಒಳಗೊಂಡಿದೆಯೋ ಅಲ್ಲೆಲ್ಲ ಪರಿಣಾಮವಾಗುತ್ತದೆ. ಆದರೆ ಅದರ ಪರಿಣಾಮವಾಗಿ ದೇಶದಲ್ಲಿ ಎಲ್ಲ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಾಗಿದೆ. ಕೊಂಡು ತಿನ್ನತಕ್ಕವರ ಸ್ಥಿತಿ ಅದರಲ್ಲಿಯೂ ಗೊತ್ತಾದ ಆದಾಯ ಇರತಕ್ಕ ಜನರ ಸ್ಥಿತಿ ಬಹಳ ಉಲ್ಬಣಾವಸ್ಥೆಗೆ ಹೋಗುತ್ತಿದೆ. ಇತ್ತೀಚೆಗೆ ಸರ್ಕಾರದ ಉಪಸಚಿವರು ಎಲ್ಲೋ ಒಂದು ಕಡೆ ಭಾಷಣ ಮಾಡುತ್ತ ನಮ್ಮ ಅಂದಾಜು ವೆಚ್ಚಗಳನ್ನೆಲ್ಲ ಪುನರ್ವಿಮರ್ಶೆ ಮಾಡಬೇಕಾಗುತ್ತದೆ ಎಂದು ಹೇಳಿದ್ದರು. ನಾನು ಈ ಬಗ್ಗೆ ಪ್ರಶ್ನೆ ಹಾಕಿದಾಗ ನೇರವಾದ ಉತ್ತರವನ್ನು ಕೊಡಲಿಲ್ಲ. ಈಗಲಾದರೂ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ನಮಗೆ ಸಮಾಧಾನ ಹೇಳಬೇಕು. ಇದರ ಪರಿಣಾಮ ಯಾವ ರೀತಿ ಆಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಈ ವರ್ಷದ ಯೋಜನೆಗೆ ವಿರಾಮ ಹಾಕಿದ್ದಾರೆ, ಕರಡು ತಯಾರು ಮಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಯೋಜನೆಯ ರೂಪ ಏನಾಗುತ್ತದೆ, ಎಷ್ಟು ಬೆಲೆಯಾಗುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ. ಬಹುಶಃ ಚುನಾವಣೆಗಳು ಕಳೆದ ನಂತರ ಅವರೇ ಅಧಿಕಾರಕ್ಕೆ ಬಂದರೆ ಈ ಯೋಜನೆಗಳನ್ನು ಅದೇ ರೀತಿ ಮುಂದುವರಿಸಿಕೊಂಡು ಹೋಗುತ್ತಾರೋ ಏನೋ ಗೊತ್ತಿಲ್ಲ. ಅದು ಬೇರೆ ವಿಷಯ.

ಸ್ವಾಮಿ, ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ತರುವ ಸಂಪ್ರದಾಯ ಅಥವಾ ಒಂದು ಉಪಾಯ ಸರ್ಕಾರಕ್ಕೆ ಬಹಳಷ್ಟು ಅವಕಾಶಗಳನ್ನು ಕೊಡುತ್ತದೆ, ಈ ಶಾಸಕಾಂಗ ಏನು ಹಣಕಾಸಿನ ಮೇಲೆ ಹತೋಟಿಯನ್ನು ಕಾನೂನುಬದ್ಧವಾಗಿ ಹೊಂದಿದೆ ಅದನ್ನು ಹೊಸ ಹೊಸ ಸೇವೆಗಳು (ನ್ಯೂ ಸರ್ವಿಸ್) ಎಂದು ಮಾಡಿಕೊಂಡಿದ್ದಾರೆ. ಅದಕ್ಕೆ ಏನೂ ಅರ್ಥವೇ ಇಲ್ಲ. ಬಜೆಟ್ಟಿನಲ್ಲಿ ಸೇರಿಸದೆ ಇದ್ದರೂ ಅದು ನ್ಯೂ ಸರ್ವಿಸ್, 1965ನೆ ಇಸವಿಯಲ್ಲಿ ಮಂಜೂರಾಗಿ ಕೆಲಸವಾಗದೆ ಇದ್ದರೆ ಅದು ಒಂದು ಸರ್ವಿಸ್, ಕಂಟಿನ್‌ಜೆನ್ಸಿ ಫಂಡಿನಿಂದ ಮೊದಲು ದುಡ್ಡು ಕೊಟ್ಟಿದ್ದು ಅದನ್ನು ರೀಕೂಪ್ ಮಾಡುವುದೂ ನ್ಯೂ ಸರ್ವಿಸ್, ಹೀಗೆ ನ್ಯೂ ಸರ್ವಿಸ್ ಎನ್ನುವ ಮಂತ್ರ ಬಂದಿದೆ. ಅಧಿಕಾರದಲ್ಲಿರುವ ಸರ್ಕಾರವು ವಿಚಕ್ಷಣೆಯಿಂದ ಇದೆಯೇ, ಎಷ್ಟು ದುಡ್ಡು ಉಳಿದಿದೆ, ಇನ್ನು ಎಷ್ಟು ದುಡ್ಡು ಬೇಕು, ಅದನ್ನು ಹೇಗೆ ಹೊಂದಿಸಿಕೊಳ್ಳಬೇಕು ಎಂದು ಬಜೆಟ್ಟನ್ನು ತಯಾರು ಮಾಡುವಾಗ ನಿದ್ರೆ ಬಂದಿರುತ್ತದೆ; ಅದಕ್ಕೆ ಗಮನ ಕೊಟ್ಟಿರುವುದಿಲ್ಲ. ಈಗ ಬೇರೆ ಮಾತಿನಲ್ಲಿ ಹೇಳಬೇಕು ಎಂದರೆ ಕಂಟಿಂಜೆನ್ಸಿ ಫಂಡಿಗೆ ಅಪಾರವಾದ ದುಡ್ಡು ಇಟ್ಟುಕೊಂಡು ಕುಳಿತಿದ್ದಾರೆ. ವಾಸ್ತವವಾಗಿ ದುಡ್ಡಿಲ್ಲ. ಯಾವುದಾದರೂ ಕೆಲಸಕೆ ದುಡ್ಡು ಬೇಕಾದಾಗ ಕಂಟಿಂಜೆನ್ಸಿ ಫಂಡಿನಿಂದ ಕೊಡುತ್ತಿರುತ್ತಾರೆ. ಅದನ್ನು ಆಮೇಲೆ ರೀಕೂಪ್ ಮಾಡಿಕೊಳ್ಳುತ್ತಾರೆ. ಇದರಿಂದ ದುಷ್ಪರಿಣಾಮವಾಗುತ್ತದೆ, ಹತೋಟಿ ಕಡಮೆಯಾಗುತ್ತದೆ, ಆದ ಖರ್ಚನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ. ಈ ಪರಿಪಾಠವನ್ನು ಕಡಮೆ ಮಾಡಬೇಕು. ಎಸ್ಟಿಮೇಟ್ಸ್

ಕಮಿಟಿ, ಪಬ್ಲಿಕ್ ಅಕೌಂಟ್ಸ್ ಕಮಿಟಿ, ಅಕೌಂಟೆಂಟ್ ಜನರಲ್ ಇವರು ಕೊಟ್ಟ ಸಲಹೆಗಳನ್ನು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಇವುಗಳು ಕೊಟ್ಟಂಥ ತೀರ್ಮಾನಗಳನ್ನು ಕೂಡ ಸರ್ಕಾರವು ಕ್ಷುಲ್ಲಕವಾಗಿ ಕಾಣುತ್ತ ಇರುತ್ತದೆ. ಇದರ ಪರಿಣಾಮ ಕೇವಲ ಆಡಳಿತ ಪಕ್ಷದಮೇಲೆ ಆಗುವುದಿಲ್ಲ, ಸಂಪೂರ್ಣ ಹಣಕಾಸಿನ ವ್ಯವಹಾರದಮೇಲೆ ಆಗುತ್ತದೆ, ಇದರ ಪರಿಣಾಮವಾಗಿ ಜನರಿಗೆ ಬಹಳ ದೊಡ್ಡ ಕಷ್ಟ ಉಂಟಾಗುತ್ತದೆ. ಇದನ್ನು ವಿಚಾರಮಾಡಬೇಕು.

4-30 P.M.

ಸ್ವಾಮಿ, ಡಿಮ್ಯಾಂಡ್ ಎರಡರಲ್ಲಿ ಯಾರಿಗೋ 5 ಲಕ್ಷ ಚಿಲ್ಲರೆ ಹಣ ಕೊಟ್ಟ ವಿಚಾರವಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ. ಎಚ್. ಎಂ. ಬಳ್ಳಾರಿ ಎನ್ನು ವವರಿಗೆ ಸಂಬಂಧಪಟ್ಟ ಕೋರ್ಟು ವ್ಯವಹಾರವಿದು. ಮುಂದಿನ ಡಿಮ್ಯಾಂಡಿನಲ್ಲಿ ಅಂದರೆ 10ನೆಯ ನಂಬರಿನ ಡಿಮ್ಯಾಂಡಿನಲ್ಲಿ ಲಾ ಛಾರ್ಜಸ್ ವಿಚಾರವೂ ಕೂಡ ಹೀಗೆಯೇ ಇದೆ. ಸರಕಾರದ ಮೇಲೆ ತನ್ನನೌಕರರು ರಿಟ್, ಕೇಸು ಹಾಕುತ್ತಾರೆ. ನಾನು ಆ ವಿಚಾರಕ್ಕೆ ಹೋಗುವುದಿಲ್ಲ, ಅದು ಲಾ ಇಲಾಖೆಗೆ ಸಂಬಂಧಪಟ್ಟ ವಿಚಾರ. ಹಾಗೆ ಕೇಸು ವಗೈರೆ ಹಾಕಿದಾಗ ಖಾಸಗಿ ಜನರಮೇಲೆ ಪ್ರೈಪೋಟಿ ಮಾಡಿ ದೊಡ್ಡ ಲಾಯರನ್ನು ಇಟ್ಟು ಅವರಿಗೆ 10 ಸಾವಿರ ರೂಪಾಯಿಗಳನ್ನು ಕೊಟ್ಟು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವುದು, ಕೇಸು ಕಳೆದುಕೊಂಡು ಸಪ್ಲಿ ಮೆಂಟರಿ ಬಜೆಟ್ ತಂದು ಹಣ ಕೇಳುವುದು ಈ ಪರಿಪಾಠವಿದೆ. ಈಗ ಸಹಸ್ರ ಸಂಖ್ಯೆಯಲ್ಲಿ ರಿಟ್‌ಗಳು ಬರುತ್ತಿವೆ,. ಸರಕಾರ ಇದೇ ರೀತಿಯಲ್ಲಿ ದಂಡ ತೆರುತ್ತಿದೆ. ಬಳ್ಳಾರಿಯವರು ಮುಂಬಯಿ ನಮ್ಮ ರಾಜ್ಯಕ್ಕೆ 1956ರಲ್ಲಿ ಬಂದಾಗ ಬಂದರು ಬರುವಾಗ ಅಲ್ಲಿ ಒಂದು ಹುದ್ದೆ ಇತ್ತು, ಅದಕ್ಕೆ ಅಲೋ ಕೇಟ್ ಮಾಡಿ ನಮ್ಮ ಸರಕಾರ ಒಂದು ಸ್ಕೇಲ್ ನಿಗದಿಮಾಡಿ ಅವರನ್ನು ಮುಂದುವರೆಸಿತು. ಆದರೆ ಅದು ಸರಿಯಲ್ಲವೆಂದು ಹೈಕೋರ್ಟಿಗೆ ರಿಟ್ ಹಾಕಿದರು, ಆ ರಿಟ್ ಪಿಟಿಷನ್ ನಂಬರು 28559 ಎಂದು ಹೇಳಿದರು. ಅವರ ಬೇಡಿಕೆ ಸರಿಯಾಗಿದೆ ಎಂದು ಹೈಕೋರ್ಟು ಹೇಳಿ ತೀರ್ಮಾನ ಕೊಟ್ಟಿತು. ಆ ಅಧಿಕಾರಿ ಸುಮಾರು 1960ರಲ್ಲಿ ರಿಟೈರ್ ಆದರು, ಕೇಸು ಮುಂದುವರೆ ಯಿತು. ಆಮೇಲೆ ಹೈಕೋರ್ಟನ್ನು ಒಂದು ಮೆಮೋ ಆಫ್ ಸರ್ಕ್ಯುಲೇಷನ್ ಕೊಡಿ ಎಂದ ಕೇಳಿದರು. 61 ಸಾವಿರದ 60 ರೂಪಾಯಿ ಆ ಅಧಿಕಾರಿಗೆ ಸಲ್ಲಬೇಕೆಂದು ಮೆಮೋ ಹಾಕಿದರು. ಅದಾದಮೇಲೆ 3-8-62ರಲ್ಲಿ ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಹಣ ಕೊಡಬೇಕೆಂದು ಇತ್ಯರ್ಥವಾಯಿತು. ಸರಕಾರ ಅದಕ್ಕಾಗಿ 1964-65ರಲ್ಲಿ ಹಣ ತೆಗೆದುಕೊಂಡಿತು. ಆದರೆ ಇದುವರೆಗೂ ಅದನ್ನು ಪೂರ್ತಿಯಾಗಿ ಪಾವತಿಮಾಡಿಲ್ಲ. ಇದನ್ನು ಟೀಕೆ ಮಾಡಬೇಕಾದ್ದಿಲ್ಲ. ಇನ್ನೊಂದು ಹಸ್ಯಾಸ್ಪದ ವಾದ ವಿಚಾರ ತಿಳಿಸುತ್ತೇನೆ. ರಿಟೈರ್ ಆದಮೇಲೆ ಬಂದ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟಿನಲ್ಲಿ ಆ ಅಧಿಕಾರಿಯ ಹೆಸರು ಮೊದಲನೆಯದಾಗಿತ್ತು. ಈ ರಾಜ್ಯದಲ್ಲಿ ಹೀಗೆ ಆಡಳಿತ ನಡೆಯುತ್ತಿದೆ, ಒಂದು ಸಾವಿರ ರೂಪಾಯಿ ಸಂಬಳದ ಇಂಥ ಅಧಿಕಾರಿಗಳು ಎಷ್ಟು ಚೆನ್ನಾಗಿ ಕೆಲಸಮಾಡುತ್ತಾರೆ, ಸರಕಾರದ ಮನೋಭಾವ ಹೇಗಿದೆ, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟು ತೀರ್ಮಾನಗಳ ಬಗ್ಗೆ ಸರಕಾರದ ಮನೋಭಾವನೆ ಏನು ಎಂಬುದು ಈ ಸಭೆಯ ಸದಸ್ಯರಿಗೂ, ಸಾರ್ವಜನಿಕರಿಗೂ ಗೊತ್ತಾಗಬೇಕು. ಸರಕಾರ ಯಾವರೀತಿ ಕೆಲಸಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ನೋಡಿ ದರೆ ಯಾರಿಗೂ ಹೆಸರು ಬರುವಂತಿಲ್ಲ. ಸರಕಾರ ಇದನ್ನು ಪರಿಶೀಲಿಸುವುದು ಅವಶ್ಯಕ.

ಇನ್ನು ಇಲಾಖೆಗಳನ್ನು ಮುಂದುವರೆಸುವ ವಿಷಯ ಹೇಳುತ್ತೇನೆ. ಯಾವುದಾದರೂ ಒಂದು ಇಲಾಖೆಯನ್ನು ನಿರ್ಮಾಣಮಾಡಿದರೆ ಕೆಲಸವೇನು ಮಾಡಬೇಕೆಂಬುದನ್ನು ಅಧಿಕಾರಿಗಳೇ ನೋಡಿ ಕೊಳ್ಳುತ್ತಾರೆ. ಇನಾಂತಿಗಳು ರದ್ದಾಗಿ ಬಹಳ ವರ್ಷಗಳಾದರೂ ಕೂಡ ಅದಕ್ಕೆ ಸಂಬಂಧಪಟ್ಟ ಆಫೀಸುಗಳು ಕೆಲಸಮಾಡುತ್ತಿವೆ. ಮಾರ್ಚಿಯಲ್ಲಿ ಉಳಿತಾಯದ ಬಾಬುಗಳನ್ನು ಸೂಚಿಸಿದಾಗ ಇನಾಂ ಆಫೀಸುಗಳನ್ನು ರದ್ದುಮಾಡುತ್ತೇವೆ, ಅದರಿಂದ 10 ಸಾವಿರ ರೂಪಾಯಿ ಉಳಿಯಬಹುದು ಇತ್ಯಾದಿ ಹೇಳಿ ಉಳಿತಾಯದ ಬಜೆಟ್ಟನ್ನು ಮಂಡಿಸಿದರು. ಆದರೆ ಈಗ ನೋಡಿದರೆ ಮತ್ತೆ ಇನಾಂತಿ ಗಳಿಗೆ ಸಂಬಂಧಪಟ್ಟ ಆಫೀಸುಗಳು ಮುಂದುವರೆದಿವೆ. ಹೀಗೆ ಮಾಡದಿದ್ದರೆ ಅಧಿಕಾರಿಗಳಿಗೆ ತೊಂದರೆ, ಅದಕ್ಕಾಗಿ ಕಾಲತಳ್ಳುತ್ತಾರೆ. ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಅನೇಕ ಹೊಸ ಖಾತೆ ಗಳನ್ನು ಮಂಜೂರುಮಾಡಿರುವುದು ಕಂಡುಬರುತ್ತದೆ.

ಆಮೇಲೆ 23ನೆಯ ಡಿಮ್ಯಾಂಡಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರ ಹೌಸಿಂಗ್ ಪ್ರೋಗ್ರಾಂಗಾಗಿ ಒಂದು ಇಲಾಖೆ ಹೊಸದಾಗಿ ಸೃಷ್ಟಿಯಾಗಿದೆ. ಹೀಗೆ ಯೋಜನೆಯ ಕಾಲದಲ್ಲಿ ಎರದು ಯೋಜನೆ ಗಳನ್ನು ಮಾಡುವಾಗ ಎಷ್ಟೋ ಹೊಸ ಇಲಾಖೆಗಳು ಸೃಷ್ಟಿಯಾಗಿವೆ, ಇವನ್ನು ನೋಡುವುದು ಅವಶ್ಯಕ. ಡೈರೆಕ್ಟರು, ಡೆಪ್ಯುಟಿ ಡೈರೆಕ್ಟರು ಮುಂತಾದವರ ನೇಮಕ ಕೂಡ ಹೆಚ್ಚಾಗಿದೆ. ಕೋಳಿ

(ಶ್ರೀ ಎಸ್. ಗೋಪಾಲ ಗೌಡ)

ಸಾಕುವುದು, ಮೊಟ್ಟೆ ತಯಾರಿಕೆ, ಫೀಡಿಂಗ್ ಅದಕ್ಕೆ ಬೇಕಾದ್ದು ಮುಂತಾದುವುಗಳಿಗಾಗಿ ಬೇರೆ ಬೇರೆ ಇಲಾಖೆಗಳಾಗಿವೆ. ಇದರ ಜೊತೆಗೆ ಕೇಂದ್ರ ಸರಕಾರದ ಇಲಾಖೆಗಳು ಬೇರೆ ಇವೆ. ಟೆಲ್ಲಿಫೋನ್ ಡೈರೆಕ್ಟರಿ ನೋಡಿದರೆ ಎಲ್ಲವೂ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ ಬೆಂಗಳೂರಿನಲ್ಲಿ ಬೇಕಾದಷ್ಟು ಇಲಾಖೆಗಳಿವೆ, ಡೈರಿ, ಪಬ್ಲಿಸಿಟಿ ಮತ್ತು ಇನ್‌ಫರ್ಮೇಷನ್, ಪೋಲೀಸು ಮುಂತಾದುವುಗಳಿಗೆ ಸಂಬಂಧಪಟ್ಟ ಇಲಾಖೆಗಳಿಗೆ ಸಂಬಂಧಪಟ್ಟಂತ ಬೇರೆ ಇಲಾಖೆಗಳು ಸೃಷ್ಟಿಯಾಗಿವೆ. ಎಕ್ಸೈಜ್, ಫೋರೆಸ್ಟ್ ಮುಂತಾದ ನೇರವಾಗಿ ನೋಡುವ ಇಲಾಖೆಗಳ ವಿಚಾರವಿರಲಿ. ಒಂದು ಕಡೆ ಸಿಬ್ಬಂದಿ ಖೋತಾ ಮಾಡಿದರೆ ಇನ್ನೊಂದು ಕಡೆ ಬೆಳೆಯುತ್ತಾ ಹೋಗುತ್ತದೆ, ಇದಕ್ಕಾಗಿ ಕೆಲವು ಯೋಜನೆಗಳನ್ನು ಮುಂದುವರೆಸಬೇಕೆಂದು ಹೇಳುವವರೂ ಇದ್ದಾರೆ. ಹೀಗೆ ದಿನೇದಿನೇ ಇಲಾಖೆಗಳು ಬೆಳೆದು ಮಿತಿಮೀರಿದ ಖರ್ಚು ಬೆಳೆದು, ಹಾಕಿರುವ ಹಣಕ್ಕೆ ಯಾವುದೇ ಫಾಯಿದೆ ಬಾರದೆ ಸಪ್ಲಿಮೆಂಟರಿ ಬಜೆಟ್ ತಂದು ಹಣ ಕೇಳುವುದು ಸರಿಯೇ ? ಇದು ನಿರಾಶೆಗೆ ಗುರಿಯಾಗುವುದಿಲ್ಲವೇ ಎಂದು ಪ್ರಶ್ನೆಮಾಡುತ್ತೇನೆ.

ಇನ್ನು ಪಟ್ಟಣಗಳಲ್ಲಿ ಹಣ್ಣು, ತರಕಾರಿ ಬೆಳೆಯುವ ಯೋಜನೆ ಇದೆ. ಇದಕ್ಕಾಗಿ ಹಾರ್ಟಿಕಲ್ಚರರ್ ಇಲಾಖೆ ಮತ್ತು ವ್ಯವಸಾಯದ ಇಲಾಖೆ ಈ ಎರಡು ಇಲಾಖೆಗಳಿವೆ. ಅವುಗಳಲ್ಲಿ ಒಂದಕ್ಕೊಂದಕ್ಕೆ ಸಂಬಂಧವಿಲ್ಲ, ಅವು ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳುತ್ತವೆ, ಒಂದು ಹೂವಿನ ಗಿಡಗಳಿಗೆ ಗಮನಕೊಟ್ಟರೆ ಇನ್ನೊಂದು ಹಣ್ಣು, ತರಕಾರಿಗಳಿಗೆ ಗಮನಕೊಡುತ್ತದೆ. ಆ ಇಲಾಖೆಗಳಿಗೆ ಬೇರೆ ಬೇರೆ ಡೈರೆಕ್ಟರುಗಳಿದ್ದಾರೆ; ಬೇರೆ ಬೇರೆ ಸಿಬ್ಬಂದಿಯಿದೆ. ಅಕಸ್ಮಾತ್ ಹಾರ್ಟಿಕಲ್ಚರರ್ ಇಲಾಖೆಯವರಲ್ಲಿ ಗೊಬ್ಬರ ಕೇಳಿದರೆ ವ್ಯವಸಾಯದ ಇಲಾಖೆಯಲ್ಲಿ ಕೇಳಿ ಎಂದು ಹೇಳುತ್ತಾರೆ. ಇದರಿಂದ ಜನರಿಗೆ ಬಹಳ ತೊಂದರೆ. ಪಟ್ಟಣಗಳಲ್ಲಿ ಹಣ್ಣು ತರಕಾರಿ ಬೆಳೆಯುವುದಾಗಿ ಹೇಳುತ್ತಾರೆ. ಮಹಾ ಮೇಧಾವಿಗಳು ಕೆಲವರಿದ್ದಾರೆ, ಕೇಂದ್ರ ಸರಕಾರವಿದೆ.

ಯೋಜನಾ ಆಯೋಗದವರು ನವೆಂಬರ್ ತಿಂಗಳನಂತರ ಇದನ್ನು ಗೊತ್ತು ಮಾಡಿ ದುಡ್ಡು ಕೊಟ್ಟಿದ್ದಾರೆ ಅದಕ್ಕೆ ಸುಮಾರು ಹತ್ತು ಲಕ್ಷ ರೂಪಾಯಿ ಕೊಡಬೇಕಾಯಿತು, ಕೊಟ್ಟೆವು, ಗವರ್ನ್ಮೆಂಟ್ ಆಫ್ ಇಂಡಿಯಾದವರು ಸ್ಯಾಂಕ್ಷನ್ ಕೊಟ್ಟರು ಜೂನ್ ತಿಂಗಳಿನಲ್ಲಿ, ಬಡ್ಜೆಟ್ ಎಲ್ಲಾ ಆದ ಮೇಲೆ ಅದಕ್ಕೇ ಕೊಡಬೇಕಾಯಿತು, ಕೊಟ್ಟೆವು ನಾವೇನೂ ಪ್ರಶ್ನೆ ಮಾಡುವ ಹಾಗಿಲ್ಲ, ಯೋಜನಾ ಕಮಿಷನ್ ಅವರು ಮಾಡಿರುವುದು ನೋಡಿ ಎಂದು ಹೇಳತಕ್ಕ ಸನ್ನಿವೇಶ ಬಹಳವಾಗಿದೆ. ಒಂದು ಉದಾಹರಣೆ ಕೊಡುವುದಾದರೆ, ಗ್ರಾಮೀಣ ಮಾನವ ಶಕ್ತಿಯ ಉಪಯೋಗ, ರೂರಲ್ ಮ್ಯಾನ್ ಪವರ್, ಕಮ್ಯೂನಿಟಿ ಡೆವಲಪ್‌ಮೆಂಟ್ ಅಂತ ಹೀಗೆಲ್ಲಾ ಹಾಕಿಬಿಡುತ್ತಾರೆ, ಕಣ್ಣಿಗೆ ಕಾಣದ ಹಾಗೆ ಹಣ ಹೋಗಿಬಿಡುತ್ತದೆ, ಒಬ್ಬ ನಿರುದ್ಯೋಗಿಗೂ ಕೂಡ ಕೆಲಸ ಸಿಕ್ಕುವುದಿಲ್ಲ. ಲೆಕ್ಕದಲ್ಲಿ ಮಾತ್ರ ನಾವು ಹಣವನ್ನು ಕೊಡಬೇಕಾಗುತ್ತದೆ. ಇನ್ನೊಂದು ವಿಷಯ ಮಾನ್ಯ ಮಂತ್ರಿಗಳು ಚೆನ್ನಾಗಿ ಯೋಚನೆ ಮಾಡಬೇಕು. ಹೊಸ ಹೊಸ ವಿಚಾರಗಳು ಇಲ್ಲಿ ಕೊಡಲಾಗಿದೆ. ಪೈಲೆಟ್ ಪ್ರಾಜೆಕ್ಟ್ ಫಾರ್ ಯುಟಿಲೈಸೇಷನ್ ಆಫ್ ಮ್ಯಾನ್ ಪವರ್ ಎಂಬುದು ಇದು ಒಂದು ಹೊಸ ಶಬ್ದ ಬಂದಿದೆ. ಇದೇ ರೀತಿ ಕ್ರಾಷ್ ಪ್ರೋಗ್ರಾಂ ಅಂತ ಬರುತ್ತದೆ ಅದಕ್ಕೆ ಲೆಕ್ಕವೇ ಇಲ್ಲ. ಇದನ್ನು ಪ್ರಶ್ನೆ ಮಾಡುವ ಹಾಗೆಯೇ ಇಲ್ಲ. ಆಡಿಟರ್ ಜನರಲ್‌ರವರೂ ಕೂಡ ನೆಗೆದುಬಿದ್ದು ಹೋಗುತ್ತಾರೆ. ಒಂದು ಕಡೆ ಸರ್ವೇ ಆಗಬೇಕು, ಅದಕ್ಕೆ ನೂರು ಜನ ಹೋಗುತ್ತಾರೆ, ಅದು ಪೈಲೆಟ್ ಪ್ರಾಜೆಕ್ಟ್ ಆದ್ದರಿಂದ ಅಷ್ಟು ಜನ ಹೋಗಲೇಬೇಕೆಂದು ಆಯಿತು. ಅವರು ನಿಜವಾಗಿಯೂ ಹೋಗುತ್ತಾರೆಯೋ ಇಲ್ಲವೋ ಅದು ಬೇರೆ ಮಾತು. ಇದನ್ನು ವಿಚಾರ ಮಾಡಬೇಕು. ಮೊನ್ನೆ ತಾನೆ ವಿ. ಕೆ. ಆರ್. ವಿ. ರಾವ್ ಅವರು ಭಾಷಣ ಮಾಡಿದರು, ಅವರು ಆಯೋಗ ಕಮಿಷನ್‌ನಲ್ಲಿ ಇದ್ದಾರೆ, ಅವರು ಪರಿಣತರು ಇದ್ದಾರೆ, ಅವರ ಅಭಿಪ್ರಾಯಗಳನ್ನು ತಾವು ತಿಳಿದುಕೊಂಡಿದ್ದೀರಾ ? ಇದು ದೇಶವನ್ನು ಕಟ್ಟುವ ರೀತಿಯಲ್ಲಿ ಇಲ್ಲ. ದೇಶದ ಜನರು ಹಿತರಕ್ಷಣೆ ಆಗುವ ರೀತಿಯಲ್ಲಿ ಇದು ಇಲ್ಲ. ಈ ಮಾತುಗಳನ್ನು ಅವರು ಬಹಳ ಸ್ಪಷ್ಟವಾಗಿ ಕನ್ನಡದಲ್ಲಿ ಮತ್ತು ಇಂಗ್ಲೀಷ್‌ನಲ್ಲೂ ಕೂಡ ಹೇಳಿದ್ದಾರೆ. ಅವರು ಆಯೋಜನಾ ಕಮಿಷನ್‌ನ ಸದಸ್ಯರು, ಮತ್ತು ಅರ್ಥಿಕ ತಜ್ಞರು ಅಂತಹವರ ಮಾತನ್ನೂ ಕೂಡ ಕೇಳಲಾರದಷ್ಟು ನಮ್ಮ ಸರ್ಕಾರ ನಡೆಸತಕ್ಕ ಪ್ರವೃತ್ತಿ ಬಂದಿದೆ. ಜನರಿಗೆ ತೊಂದರೆಯಾಗುವ ರೀತಿಯಲ್ಲಿ ಮುಂದುವರಿಯುತ್ತಾ ಇದ್ದೀರಿ. ದೇಶವನ್ನು ಭಾರಿ ದುರವಸ್ಥೆಯ ಹೆಬ್ಬಾಗಿಲಿಗೆ ಅತಿವೇಗವಾಗಿ ಕರೆದುಕೊಂಡು ಹೋಗುತ್ತಾ ಇದ್ದೀರಿ. ದೇಶದಲ್ಲಿ ಕ್ಷಾಮವನ್ನುಂಟು ಮಾಡಿ, ಅನ್ನವನ್ನು ಅಮೆರಿಕಾದಿಂದ ತುಂಬಿಸಿಕೊಂಡು ದೇಶದ ಮಾನ ಮರ್ಯಾದೆ ಗೌರವ ಕೂಡ ಇಲ್ಲದ ರೀತಿಯಲ್ಲಿ ವರ್ತಿಸುತ್ತಾ ಜನ ಊಟ ಕೂಡ ಇಲ್ಲದೇ ಕಡೂರಿನಲ್ಲಿ ಹಸಿವೆಗೆ ತುತ್ತಾಗಿ ಮೂರು ಜನ ಮಕ್ಕಳನ್ನು ಕಟ್ಟಿಕೊಂಡು ಗರ್ಭಿಣಿ ತಾಯಿ

ಹೊಂಡಕ್ಕೆ ಬಿದ್ದಳು, ಇನ್ನೊಂದು ಕಡೆ ಮೂರು ಜನರನ್ನು ಕಟ್ಟಿಕೊಂಡು ರೈಲ್ ಕಂಬಿಗೆ ಸಿಕ್ಕಿಕೊಂಡು ಸತ್ತರು ಎಂಬ ಸಮಾಚಾರ ದಿನನಿತ್ಯ ಬರುತ್ತಾ ಇದೆ. ಇದು ನಮ್ಮ ನಿತ್ಯಸ್ಥಿತಿ, ಇದರ ಬಗ್ಗೆ ಅವರು ಕೂಲಂಕಷವಾಗಿ ವಿಚಾರ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಒಂದು ವಿಷಯ ಹೇಳಿ ಮುಗಿಸುತ್ತೇನೆ. 44ನೇ ಡಿಮ್ಯಾಂಡ್‌ನಲ್ಲಿ 55 ಲಕ್ಷ ಚಿಲ್ಲರೆ ರೂಪಾಯಿಗಳ ಬೇಡಿಕೆ ಇದೆ. ಇದರಲ್ಲಿ ಒಂದು ವಿಷಯದ ಕಡೆಗೆ ಸಭೆಯವರ ಗಮನವನ್ನು ಸೆಳೆಯುತ್ತೇನೆ. ವಲ್ಲಿಯಪ್ಪ ಟೆಕ್ಸ್‌ಟೈಲ್ಸ್ ಅಂತ ಹೇಳಿ ಅವರಿಗೆ ಸ್ವಲ್ಪ ಹಣ ಕೊಟ್ಟಿದ್ದೀರಿ. ಏಪ್ರಲ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿರತಕ್ಕ ರಾಜಾ ಮತ್ತು ಮಿನರ್ವ ಮಿಲ್‌ನವರು ತಮ್ಮ ಮಿಲ್ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಮುಚ್ಚಿಬಿಟ್ಟರು ಎಂದು ಹೇಳುವಂತಹ ಪ್ರಸ್ತಾಪ ಬಂದಿತ್ತು. ನಾನು ಆಗ ಸಭೆಯಲ್ಲಿ ಇರಲಿಲ್ಲ. ಏಪ್ರಲ್ 4ನೇ ತಾರೀಖು ಎರಡು ಮಿಲ್‌ಗಳವರೂ ಮುಚ್ಚಿಬಿಟ್ಟರು, 7,000 ಸಾವಿರ ಜನರಿಗೆ ಕೆಲಸವಿಲ್ಲದೇ ಹೋಯಿತು. ಇವು ಬಹಳ ಕಾಲದಿಂದ ನಡೆದುಕೊಂಡು ಬಂದಿರತಕ್ಕ ಟೆಕ್ಸ್‌ಟೈಲ್ ಮಿಲ್‌ಗಳು. ಇವುಗಳ ರೀತಿ ಹೀಗಾದರೆ ನಿಮ್ಮ ಯೋಜನೆ ಎಷ್ಟುಮಟ್ಟಿಗೆ ಫಲ ಕೊಟ್ಟಿದೆ ? ಹ್ಯಾಂಡ್ ಲೂಮ್ ಇಂಡಸ್ಟ್ರಿ ಇದೆ, ಟೆಕ್ಸ್‌ಟೈಲ್ ಇಂಡಸ್ಟ್ರೀ ಇದೆ. ಹೊಸ ಕೈಗಾರಿಕೆಗಳ ನಿರ್ಮಾಣವಾಗುತ್ತಾ ಇದೆ. ಒಂದು ವೇಳೆ ವಲ್ಲಿಯಪ್ಪ ಮಿಲ್ ನಡೆಯಬೇಕೆಂಬ ಅಭಿಪ್ರಾಯವಿದ್ದರೆ, ಮಿನರ್ವಾ ಮಿಲ್‌ನವರು, ರಾಜಾಮಿಲ್‌ನವರು, ಎಂ. ಎಸ್. ಕೆ. ಮಿಲ್‌ನವರು ಮುಚ್ಚುವುದಕ್ಕೆ ತಾವು ಅವಕಾಶ ಕೊಟ್ಟಿರುವುದಕ್ಕೆ ಕಾರಣವೇನು ? ಮೂರು ಯೋಜನೆಗಳನ್ನು ಮಾಡಿ ಸುಮಾರು 20 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಹ್ಯಾಂಡ್ ಲೂಮ್, ಗ್ರಾಮ ಕೈಗಾರಿಕೆ, ಟೆಕ್ಸ್‌ಟೈಲ್ ಮಿಲ್ಸ್ ಯಾವ ಫಲವನ್ನು ಕೊಡುತ್ತಾ ಇವೆ ಅವುಗಳ ಗತಿ ಏನಾಯಿತು ? ಆದ್ದರಿಂದ ನಾನು ಹೇಳುತ್ತೇನೆ ರಾಜಾ ಮತ್ತು ಮಿನರ್ವಾ ಮಿಲ್‌ನಲ್ಲಿ ರಾಜಕೀಯ ಏನೋ ನಡೆದಿದೆ. ಅದನ್ನು ಬಿಟ್ಟು, ಸರ್ಕಾರದವರು ಅವರಿಗೆ ಕೆಲವು ಹಣ ಕೊಡುತ್ತೇವೆ ಎಂದು ಹೇಳುತ್ತಾ ಇದ್ದಾರೆ, 47 ಲಕ್ಷ ರೂಪಾಯಿ ಕೊಡುತ್ತೇವೆ ಎಂದರೆ ಅವರು ಒಂದು ಕೋಟಿ ರೂಪಾಯಿ ಬೇಕೆಂದು ಕೇಳುತ್ತಾ ಇದ್ದಾರಂತೆ. ನಾಲ್ಕು ತಿಂಗಳಿನಿಂದ 7 ಸಾವಿರ ಜನರು ಬೀದಿಯ ಭಿಕಾರಿಗಳಾಗಿದ್ದಾರೆ. ಇವತ್ತಿನ ದಿನ ಅವರು ಮಿಲ್‌ನಲ್ಲಿ ನುಗ್ಗುತ್ತಾ ಇದ್ದಾರೆ ಎಂದು ಕೇಳಿದೆ. ಅಂತಹ ದುಸ್ಥಿತಿ ಇದೆ. ನಮ್ಮ ಕೈಗಾರಿಕಾ ಮಂತ್ರಿಗಳು, ಆರ್ಥಿಕ ಮಂತ್ರಿಗಳು ಇದಕ್ಕೆ ಏನು ಹೇಳುತ್ತಾರೆ ? ಈ ಒಂದು ಪರಿಸ್ಥಿತಿಯನ್ನು ಗಮನಿಸಿ ಈ ಮಿಲ್‌ಗಳ ಮಾಲೀಕರು ತಕ್ಷಣ ಮಿಲ್‌ನ್ನು ತೆಗೆದು ಕಾರ್ಮಿಕರಿಗೆ ಕೆಲಸ ಕೊಡಬೇಕು ಇಲ್ಲದೇ ಇದ್ದರೆ ಸರ್ಕಾರದವರೇ ನೇರವಾಗಿ ಅವನ್ನು ವಹಿಸಿಕೊಳ್ಳಬೇಕು. ಈ ಹೇಳಿಕೆಯನ್ನು ಕೇಂದ್ರದ ಕೈಗಾರಿಕಾ ಮಂತ್ರಿ ಮನುಭಾಯಿ ಶಾ ಅವರು ಹಿಂದೆಯೇ ಹೇಳಿದ್ದರು. ಅದು ಬರೀ ಬಾಯಿ ಮಾತು ಆಯಿತೇ ಹೊರತು ಕಾರ್ಯರೂಪಕ್ಕೆ ಬಂದಿತೇ ಎಂಬುದನ್ನು ಎಕ್ಸ್‌ಪೋರ್ಟ್, ಇಂಪೋರ್ಟ್ ಮಾಡುವವರು, ಸರ್ಕಾರ ಗಮನಿಸಬೇಕು. ಮಿಲ್ ಮಾಲೀಕರೆಲ್ಲಾ ಸೇರಿ ಒಂದು ನೀತಿಯನ್ನು ಅನುಸರಿಸುತ್ತಾ, ಕಾರ್ಮಿಕರ ಜೀವನ ಇವತ್ತು ಸಂಪೂರ್ಣ ನಾಶವಾಗುವ ರೀತಿಯಲ್ಲಿ ಮಾಡುತ್ತಾ ಇದ್ದಾರೆ ಇದು ಒಂದು ವಿಧವಾದ ಯಂತ್ರ ಎಂದು ಹೇಳಬಹುದು, ಅದು ಒಂದು ನಿರ್ಮಾಣವಾಗಿದೆ, ನಿರ್ಮಾಣವಾಗಿ ಕೆಲಸಮಾಡುತ್ತಾ ಇರುವುದಕ್ಕೆ ಇದೇ ಒಂದು ಸಾಕ್ಷಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಕೊನೆಯದಾಗಿ ಶ್ರೀಮಾನ್ ಜತ್ತಿಯವರು ಬಂದರು ಅವರ ಬಗ್ಗೆ ಮಾತಾಡುವುದಕ್ಕೆ ಸ್ವಲ್ಪ ಅವಕಾಶವನ್ನು ಮಾನ್ಯ ಸಭಾಪತಿಯವರು ಕಲ್ಪಿಸಿಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟೀಸ್ ಬಗ್ಗೆ ತನ್ನ ಅಭಿಪ್ರಾಯವೇನೆಂದು ಕೇಳಿದ್ದಾರೆ. ಶ್ರೀಮಾನ್ ಜತ್ತಿಯವರು ಬಹಳ ಹುಶಾರು ಮತ್ತು ಒಳ್ಳೆಯ ವ್ಯಾಪಾರಿ ಕೂಡ. ನಮ್ಮ ರಾಜ್ಯದಲ್ಲಿ ಕೆಲವು ಕಡೆ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿ, ರಾಗಿ, ಜೋಳ ಆಗಿರುವ ಸ್ಥಿತಿ ಬಂದಿದೆ. ಆಲ್ ಇಂಡಿಯಾ ರೇಡಿಯೋದಲ್ಲಿ ಕೆಲವು ದಿವಸಗಳಿಂದ ಪೇಟೆ ಧಾರಣೆ ಹೇಳುವ ಹವ್ಯಾಸ ಒಂದು ಪ್ರಾರಂಭವಾಗಿದೆ. ಇದು ಹಾಸ್ಯಾಸ್ಪದವಾದ ಹೇಳಿಕೆ. ಈ ಹೇಳಿಕೆ ಪ್ರಕಾರ, ಈ ಬೆಲೆ ಪ್ರಕಾರ ಯಾವ ವಸ್ತುವೂ ಅಂಗಡಿಯಲ್ಲಿ ಸಿಕ್ಕುವುದಿಲ್ಲ. ತಾವು ಹೇಳಿದ ಪ್ರಕಾರ ಇವತ್ತು ಮಳೆ ಬಂದರೆ, ಇನ್ನೊಂದು ಸುಗ್ಗಿ ಫಸಲು ಬರುವ ತನಕ ಕಾಳು ಕಡ್ಡಿ ಸಿಕ್ಕುವುದಿಲ್ಲ. ಜನಕ್ಕೆ ಉದ್ಯೋಗ ಸಿಕ್ಕುವುದಿಲ್ಲ, 3–4 ತಿಂಗಳು ಬಹಳ ಕಠಿಣ ಸ್ಥಿತಿಯಲ್ಲಿ ಜನ ಇರಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತಾವು ಗ್ರಾಮೀಣ ಪ್ರದೇಶಗಳಲ್ಲಿ ಜನತೆಗೆ ಅನ್ನ ಇತ್ಯಾದಿಗಳು ಸಿಕ್ಕುವುದಕ್ಕೆ ಏನೂ ಪ್ರಯತ್ನ ಮಾಡಿಲ್ಲ. ಜನ ಒತ್ತಾಯ ಮಾಡಿ, ಗಲಾಟೆ ಮಾಡಿ ಅಥವಾ ಇನ್ನೇನಾದರೂ ಮಾಡಿಯೇ ಮಾಡಬೇಕಾಗುತ್ತದೆ. ಅಂತಹ ದುರಂತ ಪರಿಸ್ಥಿತಿ, ಆಸ್ಫೋಟಕ ರೀತಿಯಲ್ಲಿ ಇದೆ. ಅಕ್ಕಿ, ರಾಗಿ, ಜೋಳ ನ್ಯಾಯ ಬೆಲೆಗೆ ಸಿಕ್ಕುತ್ತಾ ಇಲ್ಲ. ನೀವೇ ಮಾರತಕ್ಕ ಪರಿಸ್ಥಿತಿ ಬಹಳ ಕಡಿಮೆ. ಈಗಾಗಲೇ ಆಹಾರದ ನೀತಿಯನ್ನು ಬದಲಾಯಿಸುತ್ತೇವೆ ಎಂದು ಹೇಳಿಕೆ ಕೊಡುತ್ತಾ ಇದ್ದೀರಿ. ಒಂದು-ಒಂದೂವರೆ ವರ್ಷದಿಂದ ಹೇಳುತ್ತಾ ಬಂದಿರಿ, ಬೆಂಗಳೂರು, ಕೆ. ಜಿ. ಎಫ್. ನಲ್ಲಿ ಪಡಿತರ

(ಶ್ರೀ ಎಸ್. ಗೋಪಾಲ ಗೌಡ)

ವ್ಯವಸ್ಥೆ ಮಾಡುತ್ತೇವೆ ಎಂದು. ಅಂತೂ ಇಂತೂ, ಹಾಗೂ ಹೀಗೂ ತಾವು ನಡೆಸುತ್ತಾ ಇದ್ದರೇ ಹೊರತು ಯಾವುದನ್ನೂ ಕಾರ್ಯತಃ ಮಾಡುತ್ತಾ ಇಲ್ಲ. ಬಂಗಾಳದಲ್ಲಿ ಅಥವಾ ಕೇರಳದಲ್ಲಿ ಮಾಡಿದಂತೆ ಜನ ಆಕ್ರೋಶದಿಂದ ಚಳುವಳಿ ಮಾಡಿಲ್ಲ. ಏನೋ ಕಾರಣದಿಂದ ಬಹಳ ಸಮಾಧಾನ ದಿಂದ ಹೋಗುತ್ತಾ ಇರುವ ಹಾಗೆ ಕಾಣುತ್ತಾ ಇದೆ, ತಾವು ಹಾಗೆ ತಿಳಿದುಕೊಂಡಿದ್ದರೆ ಅದು ಬಹಳ ತಪ್ಪು ಅಭಿಪ್ರಾಯ. ಅದು ಬಹಳ ತಪ್ಪಭಿಪ್ರಾಯ ತಾವು ಆ ರೀತಿಯಾಗಿ ಎಂದೂ ಭಾವಿಸ ಬಾರದು. ಆ ರೀತಿ ತಾವು ಗ್ರಹಿಸುವುದಕ್ಕೆ ಇಲ್ಲಿ ಅಂಥ ರಾಗಿ, ಜೋಳದ ಬೆಳೆಯಿಲ್ಲ. ಜನರಿಗೆ ನಿಗದಿಯಾದ ಬೆಲೆಯಲ್ಲಿ ಆಹಾರ ಪದಾರ್ಥಗಳು ಸಿಗುತ್ತಿಲ್ಲ. ಆ ಬಂಗಾಳದಲ್ಲಿ ಎಲ್ಲಿಯೋ ಕೋಳಿ ಹಾಕಿ ಮೆರವಣಿಗೆ ಮಾಡಿದರಂತೆ. ಬಹುಶಃ ಅವರು ವಿರೋಧಪಕ್ಷಕ್ಕೆ ಸೇರಿದವರಿರಬೇಕು, ಅಥವಾ ಆ ಅಕಾಲಿದಳಕ್ಕೆ ಸೇರಿದವರಿರಬೇಕು. ಗೃಹ ಮಂತ್ರಿಗಳು ಕೊಡತಕ್ಕ ಉತ್ತರವನ್ನು ನೋಡಿದರೆ ಬಹಳ ಭಯಂಕರವಾಗಿ ಕಾಣುತ್ತದೆ. ತಮಗೆ ಇಲ್ಲಿಯ ನಿಜ ಪರಿಸ್ಥಿತಿ ಗೊತ್ತಿಲ್ಲವೆಂದಲ್ಲ, ಗೊತ್ತಿದ್ದರೂ ತಾವು ಭಾವಿಸಿರುವಷ್ಟು ಇಲ್ಲಿಯ ಸ್ಥಿತಿಗತಿಗಳು ಸುಗಮವಾಗಿಲ್ಲ. ತಾವು ಇಲ್ಲಿ ಬೇಡಿರತಕ್ಕ ಹಣವನ್ನು ತಾವು ಸಲಭವಾಗಿ ಪಾಸ್‌ಮಾಡಿಸಿಕೊಳ್ಳಬಹುದು, ಕಾರಣ ತಮಗೆ ಇಲ್ಲಿ ಒಂದು ಹೆಚ್ಚಿನ ಸಂಖ್ಯಾಬಲವಿದೆ. ಆದರೆ ಸರ್ಕಾರದವರು ಇನ್ನಾದರೂ ತಮ್ಮ ದುಂದು ವೆಚ್ಚವನ್ನು ನಿಲ್ಲಿಸಲೇ ಬೇಕು, ಕೆಲವು ಇಲಾಖೆಗಳನ್ನು ಮುಚ್ಚಲೇ ಬೇಕು, ಇನ್ನು ಕೆಲವು ಜನರಿಗೆ ಯಾವ ಉಪ ಯೋಗವೂ ಇಲ್ಲದ ಕೆಲವು ಇಲಾಖೆಗಳನ್ನು ರದ್ದುಮಾಡಲೇ ಬೇಕಾಗುವುದೆಂದು ಇಷ್ಟು ಮಾತನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker Sir, I welcome this Supplementary Demand, Sir. Sir, we are in a stage of developing economy with histile adverse natural circumstances. The schemes as stated in the Supplementary estimates are either State or Centrally sponsored and in a stage in which our State is placed, supplementary estimates are inevitable. Sir, the Centre has not yet finalised the text of the Fourth Five Year Plan. So, when we believe in planned development, development from stage to stage, I for one would believe that the supplementary estimates become inevitable. If one goes through the text of the supple mentary Estimates,it is seen Sir, that certain token grants are already allocated and the estimates now want to amplify by exactly pointing out the financial requirements and financial frame work.

Speaking for Demand No. 20, I have to say that the pride of place is given for the development of agriculture. As far as agriculture is concerned, we must have education including technical education, we must have research, we must have implementation of the various schemes, we must have a method by which food crops are preserved and also we must try to create a tempo to use substitute foods, for example, fruits and vegetables. And therefore this supplementary Demand No. 20....

SRI K. LAKKAPPA (Hebbur).—If the Hon'ble Member yields for a moment, have the monies that we have invested in agriculture yielded any results and helped the raiyats ?

Sri R. S. HEGDE.—I do not yield, Sir. Now, Sir, demand No. 20 makes provision for all the suggestions that I have told just now.

Now, Sir, to speak for North Kanara, North Kanara has been selected for intensive agricultural development. Many of the gram sevaks attached to the blocks have not been posted. So in order to have more trained grama sevaks, an additional gram sevak centre is inevitable,

Because unless we have the technical know-how, unless you have the technical personnel in the persons of the gram sevaks and extension officers, I do not think any agricultrual development scheme has any bright future.

Sri K. Lakkappa.—They have no fixed allocation.

Sri H. R. Keshava Murthy (Gandasi).—He has no idea of agriculture.

Sri R. S. Hegde.—That may be his opinion, Sir. I have been there the President of the Taluk Board for the last five years and I am intimately connected with agricultural development piopgramme of my own block and also of my District. Gram Sevaks by and large are absolutely essential to carry the tempo of development to the doors of the agriculturist. That fact cannot be denied. What I suggest Sir, by the scheme of gram sevaks creating an agricultural tempo is expected. Now certain persons may not be working properly. That does not mean that the scheme is bad. The General Administration pattern is there. It may be some officers or clerks are not working preperly. That does not mean that the administration itself should be ccondemned as something which is not required. And therefore when once we accept the principle of gramsevaks and village staff serving the village, then my submission is that the gram sevaks become a part and parcel of the entire agricultural developmental scheme.

Then Sir, to speak of Demand No. 23, many scheduled caste Housing societies are coming up in the various rural areas. And it is absolutely essential that the loan given by the L.I.C. is availed of by these Housing Societies. The main purpose of the societies is to build Houses for Scheduled Castes, Scheduled Tribes. Now there is a particular pattern of staff for these societies. Well and good. But certain strict rules should be observed as far as implementation of the scheme is concerned :

(1) Delay should be arrested ;

(2) Back references should be minimised ;

(3) The inspector or the officer concerned must approach the application of the Scheduled Caste people with a positive approach. That means the approach must be with a view to grant the application rather than negative it. If these things are taken note of by the staff, I am sure many of the Scheduled Caste people will be provided with a roof under which they can live.

Then Sir, speaking on demand No. 25, the rural man-power projects, or pilot projects, are working in our district in four taluks, and we have the project for two years. The project has been successful to a very great extent. As far as minor irrigation is concerned, there is a ratio that 75 per cent of the amount must be spent on labour and 25 per cent on the masonry work. What I submit Sir, is that some measure of relaxation must be observed. If a disproportionate amount of money is spent on labour only, unfortunately the tank does not survive the onslaughts

(SRI R. S. HEGDE)

of the monsoon in our area. Therefore, I request that the Government should serioulsy suggest to the Centre that the ratio of expenditure between labour and masonry works should be kept at 60 : 40 or 50 : 50.

Then Sir, to speak on Demand No. 44 and the establishment of consumer Co-operatives, I submit, as far as consumers federation and assistance are concerned they need it badly. Everybody is speaking of devaluation. Even a barber says, the value of the rupee is reduced. Sir, everybody knows that devaluation is for foreign exchange material. But, there is no proper publicity as far as devaluation is concerned so that the common man understands the effect of this. People must be made to stand that devaluation is not for locally available material but it is only for the foreign exchange facility with which we are not concerned at all.

5-00 P.M.

SRI G. V. GOWDA (Palya).—Wonderful statement! I have not heard a strange statement than this! Price of every article is soaring up and my friend says it will have no effect on the locally available materials!!

SRI S. GOPALA GOWDA.—My friend just now said even a barber says that the rupee value is reduced. He has to pay for the razor and other things which come from foreign and so he has to pay more.

SRI R. S. HEGDE.—Sir, I still maintain that so far as locally available material is concerned, we are not concerned with devaluation of rupee at all. Money has not been devalued. The barber says it because of lack of knowledge and education. So, what I say is, there must be proper publicity and education as far as devaluation is concerned.

Now, Sir, as far as the co-operative is concerned, they have to be strengthened. On page 27 it is stated :

> "The Government of India have sanctioned loan assistance of Rs. 50.00 lakhs for the purpose of strengthening of Agricultural Credit Stabilisation Fund. This has also been taken into account in the Budget for 1966-67. The strengthening of the Fund has been necessitated by the inability of the Agriculturists to repay the short term loans borrowed from the Primary Societies on account of the failure of rains and semi-famine conditions in many part of the State."

My submission, is, this state of affairs will continue for ever unless we introduce what is called the full finance scheme as far as the agriculturist is concerned. The very philosophy of life must begin from the stomach. We may say so many big ideals to the farmer, but unless he gets what is absolutely essential for him, it is not possible to give expression to the various ideals of development at all. Whatever that is necessary to the farmer must be given to him in the first one or two years and gradually recover it. Unless this is done, whatever short term loan we give will be entirely utilised for consumption.

As far as the food policy is concerned, this duplication must be done away with and there must be one agency. If it is co-operatives, let it be co-operatives alone and the Revenue should not come in. Or, if it is the Revenue Department, let be completely left to Revenue. Now, storing is by co-operative and distribution is by the Revenue. I submit, that this must be entrusted to one agency in order to arrest the mis-application of the very principle of distribution. Thank you, Sir.

Sri G. V. Gowda.—Mr. Speaker, Sir, I agree that Supplementary Estimates are necessary when they are inevitable. But, unfortunately, most of the demands that have been placed before us are not justified in the sense that they are not necessary or indispensable that they are to be brought at this stage. Of course, one or two demands are there which would have given occasion for supplementary demands. I am surprised with the arguments of Sri R. S. Hegde in respect of devaluation when he said that the commonman is not affected.

Sir, commodities that were costing thousand rupees in the internal market or external market, now have been increased by 36 per cent. So, we have to measure our value of goods in terms of the price prevailing elsewhere. This is the fiscal policy so far as international trade is concerned. I do not know how my friend got the idea that we are not affected.

Sir, our Finance Minister showed a nominal surplus in the revenue account in the Budget. Now, he has asked to the extent of Rs. 3 crores and odd. Of course, by spending this amount, he might have some revenue. But, he has not given the exact revenue he is going to derive. Even in the Supplementary Demands, they have got to take into account the original annual Financial Statement and also indicate what the corresponding revenue is so as to give scope for the appreciation of the financial position of the State. The nominal surplus shows in the Budget would become a big deficit by adopting the Supplementary Demands. We have always been having deficit financing and it is contended that deficit financing is inevitable in developing economy. But for all the times to come, it should not be there. Deficit finance will give scope for further rise in prices and it affects the commonman.

The other day the Finance Minister was pleased to say that he has wiped the Reserve Bank debt. But we must calculate the interest on the money we have borrowed for this. With regard to the irrigation projects, from 63-64, 31 works were taken up at the cost of Rs. 98 crores and out of this 19 works have started yeilding. But the return from these irrigation projects is very unsatisfactory. There is loss of Rs. 4 crores even in the first year and the same result will follow. That means, Government will not be able to consolidate the internal resources and wipe out the interest for the money borrowed. If we are not able to make profits out of these projects, I do not know whether we will be relieved of this position. Therefore, the internal economy or the financial position is becoming very gloomy after seeing the working results of

(SRI G. V. GOWDA)

these irrigation projects. Likewise there are so many other things in which recoveries have notb een made with the result the financial position is as dark as it was.

Demand 10 one of the items is taking of Estates. In respect of Haravi Basapuram Estate Village in Hadagalli Taluk, it is not taken over till now. There was some complication and the tribunal gave the decision in favour of the inamdar. But whet the steps taken to abolish these inams and to take back the estate. If there is any lacuna in the executive order, they have to rectify and see that the estate is taken over. Likewise there is one estate in Kollegal Taluk which has not been taken over by the Government either under the Madras Estates (Abolition and Conversion into Ryatwari) Act or any other law. I think they have to bring in other legislation to take over because as I can see there were only two estates which were remain with Inamdars or Jagirdars. All these estates are left over. The work relating to abolision of inams is far from satisfactory. Unless some drastic thing is done it is not possible to get any justice done for the money spent. They want some more establishment for these works and I do not know how the Government is going to justify this.

The Pandit Cottage Hospital in Sirsi has been taken over in order to convert it into a general hospital. I do not come in the way of making it a general hospital but I would request to see that the same policy is extended to all places where there is a chance for such conversions.

So far as Gramsevaks are concerned, they are asking for some amount. These gramsevaks are concerned, they are inevitable provided we extract work from them. If they do not work, who is there to make them work ? I is the Government machinery. Taking into consideration all the blocks where there are nearly 2000 gramasevaks, we are paying nearly 30 lakhs as salary per annum. Are we justified in spending this money ? Unless we are able to extract work commensurate with the money spent, there is no use. They want to have two refresher course wings. As a matter of fact most of the villages have not felt the existence of these persons.

Even in regard to housing programme for Scheduled Castes, I request the Government to see that a rational policy is laid down. There is no use of allotting 10 lakhs to one area and a few lakhs to another area. They have to conduct a survey and evolve a rational policy. I find in certain taluks there are more than one society governing these affairs. Every taluk must have only one society and each has to meet the legitimate needs of the population of that place.

So far as pilot projects is concerned, Sri Hegde says that there are four projects in his district and all that. The day of distributing or allotting these projects is not fair. The backward areas or the scarcity areas should be generally given preference and the man power can be utilised in those projects.

So far as advance action for the fourth plan is concerned I must say that the Government have failed. The Government of India have pPovided money and they have not been able to make use or take advance action. Certain amounts have been paid and I do not know whether any advance action with regard to minor or medium projects have to be taken up. We do not know any advance action has been taken.

So far as feeding programme is concerned, it is sanctioned on 1st April 1966. Nearly four months have elapsed and how much is spent out of 10 lakhs ? In my taluk this programme has not been implemented. Until the Government implements the programme, there is no use of money being provided. No doubt the idea is a laudable one but they must see it is translated into action and utilised for the benefit of old and sick people and expectant mothers.

As far as Demand No. 44 is concerned, Government Ordered in June 1966 that a sum of Rs. 38,53,443-68 which was due from the Mysore State Industrial Co-operative Bank, Ltd., to Government as loan may be converted as share capital. I do not know whether the Bank have paid any interest or loan. Now they want to convert the loan into share capital. Is it desirable in the interest of public money to do so ? If it is converted into share, the society may not declare dividend with the result the Government may not get anything. If necessary the Government may purchase some shares. Now it is not wise to convert any loan into share capital.

About the police press, Sri C. J. Mukkannappa has stated about its working. I would add one sentence and that is in Amritur, Kunigal Taluk, a certain high school committee met for the purpose of electing its office bearers and to prevent them from functioning or exercising their rights in electing Chairman, the police have intervened. They went there, seized all the books without any authiority. Will this sort of action on the part of police, lead to establishing a Welfare State.

We all this morning heard the Minister's reply. Of course we seek information, and if the Minister knows information, he has to inform the House. Otherwise not. But the way in which he gave replies showed that we are becoming a police State. It cannot be a welfare state and the action of the police without any authority being made in seizing these records of the school committee is nothing but condemnable.

I will speak only one more sentence and close the matter. About this South Canara District Co-operative Fish Market Federation, a sum of 6.55 lakhs have been sanctioned because the sum of Rs. 5 lakhs already given was found insufficient. This is a private corporation and would be the estimated cost of this cold storage plant and what is the capital available at the hands of the federation. I do not know why when Government gave five lakhs for the first time did not think of the future expenses. And how best to help the federation even at the very

(Sri G. V. Gowda)

inception. They should have thought what would be the estimate of the project and the amount available. This only shows that there is no control over anything. Much less an Expenditure.

With these observations I submit once again that this sort of submitting supplementary demands would speak only that there is no control over expenditure.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಸರ್ಕಾರದವರು 3 ಕೋಟಿ 18 ಲಕ್ಷ 22 ಸಾವಿರ ಆರು ರೂಪಾಯಿಗಳ ಸಪ್ಲಿಮೆಂಟರಿ ಎಸ್ಟಿಮೇಟ್ ಬಗ್ಗೆ ಈ ದಿವಸ ಸಭೆಯ ಅನುಮತಿ ಕೇಳುತ್ತಿದ್ದಾರೆ. ಇದರಲ್ಲಿ ಕ್ಷಾಮ ನಿವಾರಣೆಯ ಕೆಲವು ಬಾಬುಗಳನ್ನು ಬಿಟ್ಟರೆ, ಇನ್ನು ಬೇರೆ ಬಾಬುಗಳ ಬಗ್ಗೆ ತಾವು ಬಡ್ಜೆಟ್ ತಯಾರು ಮಾಡುವ ಕಾಲದಲ್ಲೇ ಇದನ್ನು ಗಣನೆಗೆ ತೆಗೆದುಕೊಳ್ಳುವ ಅವಕಾಶವಿತ್ತು. ಆದರೂ ಕೂಡ ಈ ಬಗ್ಗೆ ಇವರ ನೀತಿ ಹೋಗಿದೆ. ಈ ಸಂದರ್ಭದಲ್ಲಿ ಈ ಸಭೆಯ ಮುಂದೆ ಇವರು ತಂದಿರುವುದನ್ನು ನೋಡಿದರೆ ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಈ ದಿನ ನಾನೂ ಡಿಮ್ಯಾಂಡ್ ನಂಬರ್ 33 ಮತ್ತು 44ರ ಬಗ್ಗೆ ಮಾತ್ರ ಕೆಲವು ವಿಷಯಗಳನ್ನು ತಿಳಿಸಬಯಸುತ್ತೇನೆ. ಈ ದಿನ ಫ್ಯಾಮಿನ್ ರಿಲೀಫ್ ಬಗ್ಗೆ ಕೇಂದ್ರ ಸರ್ಕಾರದಿಂದ ಎರಡು ಕೋಟಿ ರೂಪಾಯಿಗಳ ಹಣ ಬಂಧಿದೆ. ಈಗಾಗಲೇ ಖರ್ಚುಮಾಡಿರುವ ಪ್ರಕಾರ ಮೇ ತಿಂಗಳಲ್ಲಿ 60 ಲಕ್ಷ ರೂಪಾಯಿಗಳನ್ನು ಜೂನ್-ಜುಲೈ ನಲ್ಲಿ 44 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡಿದ್ದಾರೆ ಇನ್ನೂ ಹೆಚ್ಚು ಹಣಬೇಕೆಂದು ಕೇಳುತ್ತಿದ್ದಾರೆ. ಈ ದಿವಸ ದೇಶದಲ್ಲಿ ಭೀಕರ ಬರಗಾಲವಿದೆ. ದುರದೃಷ್ಟವಶಾತ್ ನಾನು ಬಂದಿರತಕ್ಕದ್ದು ಕೋಲಾರ ಜಿಲ್ಲೆಯಿಂದ ಇದುವರೆಗೂ ಕೂಡ ಬಹುಭಾಗ ಪ್ರದೇಶದಲ್ಲ ಮಳೆಯು ಸರಿಯಾಗಿ ಆಗಿಲ್ಲ. ಬಿತ್ತನೆ ಕೆಲಸ ಸರಿಯಾಗಿ ಆಗಿಲ್ಲ. ಜನತೆಗೆ ಅದರಲ್ಲೂ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ದೊರಕಿಸಿಕೊಡತಕ್ಕ ರಿಲೀಫ್ ಕಾಮಗಾರಿ ಕೆಲಸಗಳಲ್ಲಿ ಒಂದು ರಮ್ಯವಾದ ನಾಟಕ ಮಾಡುವಂತೆ ಮಾಡುತ್ತಿದ್ದಾರೆ. ಅದು ಶೇಕಡ 25 ರಷ್ಟು ಸಹ ಸಾಮಾನ್ಯ ಜನಗಳಿಗೆ ಸೇರುತ್ತಾ ಇಲ್ಲ. ಈ ದಿವಸ ಏನಾಗಿದೆಯೆಂದರೆ ಇರತಕ್ಕ ಹಳ್ಳಿಗಳನ್ನು ದೊಡ್ಡದುಮಾಡಿ ಸುಮ್ಮನೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿದರೂ ಕೂಲಿ ನ್ಯಾಯವಾಗಿ ಸಿಗುತ್ತಿಲ್ಲ ಯಾರೋ ಒಬ್ಬ ಕಂಟ್ರಾಕ್ಟರ್‌ನಿಂದ ಗುಪ್ತವಾಗಿ ಕೆಲಸಗಳನ್ನು ಮಾಡಿಸುತ್ತಾರೆ. ಈ ವಿಚಾರವನ್ನು ನಮ್ಮ ಜಿಲ್ಲೆಗೆ ಬಂದಾಗ ಇವರಿಗೆ ತಿಳಿಸಿದ್ದೇನೆ. ಸರ್ಕಾರದ ರಿಲೀಫ್ ಕಾಮಗಾರಿ ಬಗ್ಗೆ ಏನು ಹಣವನ್ನು ಖರ್ಚುಮಾಡುತ್ತಾ ಇದ್ದಾರೋ ಅದೆಲ್ಲಾ ದುರ್ವ್ಯಯವಾಗುತ್ತಿದೆ. ಜನಗಳಿಗೆ ನಿಜವಾಗಿ ಸೇರುತ್ತಾ ಇಲ್ಲ. ನಮ್ಮ ಜಿಲ್ಲೆ ಬರಗಾಲ ಪರಿಸ್ಥಿತಿಯಲ್ಲಿದ್ದರೂ ಅನೇಕರೂ ತಮ್ಮ ಸ್ವಂತಕ್ಕಾಗಿ ಆ ಹಣವನ್ನು ಉಪಯೋಗಿಸುತ್ತಿದ್ದಾರೆ. ಪಂಜಾಬ್‌ನಲ್ಲಿ ಕಾಳಸಂತೆ ಕೋರರನ್ನು ಹಿಡಿದು ಅವರಿಗೆ ಶಿಕ್ಷೆ ಕೊಡುತ್ತಿದ್ದಾರೆ ಆ ರೀತಿ ಇಲ್ಲಿಯೂ ಮಾಡಬೇಕೆಂದು ನಾನು ಈ ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ. ಈ ದಿವಸ ದುರದೃಷ್ಟವಶಾತ್ ನೀರಾವರಿ ಯೋಜನೆಗಳನ್ನೂ ಕೂಡ ಬಹಳ ತ್ವರಿತವಾಗಿ ತೆಗೆದುಕೊಳ್ಳುವುದಕ್ಕೆ ಒಂದು ಹೆಚ್ಚಿನ ಯೋಜನೆಯನ್ನು ತಯಾರುಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಿಗೂ ಮುಖ್ಯಮಂತ್ರಿಗಳು, ಹಾಗೂ ಪಿ.ಡಬ್ಲ್ಯು.ಡಿ. ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಪ್ರವಾಸ ಮಾಡುತ್ತಿದ್ದಾರೆ. ಇವರು ಬೇರೆ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದರೂ ಕೋಲಾರ ಜಿಲ್ಲೆಗೆ ಪ್ರವಾಸ ಮಾಡುವುದಕ್ಕೆ ಏಕೋ ಮನಸ್ಸು ಮಾಡಲಲ್ಲ. ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಅಲ್ಲಿನ ಜನಗಳಿಗೆ ನೆರವಾಗುವುದಕ್ಕೆ ಮಂತ್ರಿಗಳು ಮನಸ್ಸು ಮಾಡಲಿಲ್ಲವೆಂದು ನಾನು ಬಹಳ ವಿಷಾದದಿಂದ ತಿಳಿಸುತ್ತೇನೆ. ಫ್ಯಾಮಿನ್ ರಿಲೀಫ್ ಹೆಡ್‌ನಲ್ಲಿ ಈ ಸಣ್ಣ ನೀರಾವರಿ ಯೋಜನೆಗಳಿಗಾಗಿ ಸರ್ಕಾರದವರು ಏನು ಹಣವನ್ನು ಕೊಟ್ಟಿದ್ದಾರೋ ಅದನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ಖರ್ಚುಮಾಡುತ್ತಾ ಇಲ್ಲ. ಟೆಕ್ನಿಕಲ್ ಅಬ್‌ಜಕ್ಷನ್ಸ್ ನೆಪ ಒಡ್ಡಿ ಒಂದು ಕೆಲಸವೂ ಕೂಡ ಆಗದಂತೆ ಮಾಡುತ್ತಿದ್ದಾರೆ. ಆ ಕೆಲಸ ಬಹಳ ಕಷ್ಟವೆಂದು ಪರಿಗಣಿಸುತ್ತಾರೆ. ಒಂದು ಕೆರೆ ನಿರ್ಮಾಣ ಮಾಡುವುದಕ್ಕೆ ನೂರಾರು ತಕರಾರುಗಳನ್ನೊಡ್ಡಿ ಕಾಗದ ಪತ್ರಗಳು ಚೀಫ್ ಇಂಜನಿಯರಿಂದ ಎಗ್ಸಿಕ್ಯೂಟಿವ್ ಇಂಜನಿಯರ್, ಎಗ್ಸಿಕ್ಯೂಟಿವ್ ಇಂಜನಿಯರಿಂದ ಚೀಫ್ ಇಂಜನಿಯರ್ ಹೀಗೆ ಓಡಾಡುತ್ತಾ ಆ ಕೆಲಸ ನಿಧಾನವಾಗುತ್ತಿದೆ. ಆದ್ದರಿಂದ ಫ್ಯಾಮಿನ್ ರಿಲೀಫ್ ಬಗ್ಗೆ ಏನು ಹಣವನ್ನು ಸರ್ಕಾರದವರು ಒದಗಿಸಿದ್ದಾರೋ ಆ ಹಣವನ್ನು ಪೂರ್ತಿಯಾಗಿ ಖರ್ಚುಮಾಡುವುದಕ್ಕೆ ಪಿ.ಡಬ್ಲ್ಯು.ಡಿ. ಇಲಾಖೆಯನ್ನು ಒತ್ತಾಯ ಪಡಿಸುವುದು ಬಹಳ ಅವಶ್ಯಕವಿದೆ. ಅಷ್ಟೇ ಅಲ್ಲದೆ ಈ ದಿವಸ ಡಿಮ್ಯಾಂಡ್ ನಂಬರ್ 44 ರಲ್ಲಿ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕಿಗೆ ಸುಮಾರು 38 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದರೂ ಅದನ್ನು ಷೇರು

ಬಂಡವಾಳವಾಗಿ ಕೊಡುವುದಕ್ಕೋಸ್ಕರ ಈ ದಿವಸ ಒಂದು ಬೇಡಿಕೆಯನ್ನು ತಂದಿದ್ದಾರೆ. ಇಂಡಸ್ಟ್ರಿಯಲ್ ಕೋ-ಆರೇಟಿವ್ ಬ್ಯಾಂಕು ಪೂರಾ ಬಂಕಮ್ ಎಂಬುದಾಗಿ ನಾನು ತಿಳಿಸುತ್ತೇನೆ. ಇಂಡಸ್ಟ್ರಿಯಲ್ ಬ್ಯಾಂಕುಗಳಲ್ಲಿ ಮಂತ್ರಿಗಳು ತಮಗೆ ಬೇಕಾದವರನ್ನು ಡೈರೆಕ್ಟರುಗಳನ್ನಾಗಿ ಮಾಡಿ ಮುಂದಿನ ಚುನಾವಣೆಯಲ್ಲಿ ಯಾರ್ಯಾರು ಸಹಾಯ ಮಾಡುತ್ತಾರೋ ಅಂತಹವರಿಗೆ ಸುಮ್ಮನೆ ಧರ್ಮಾರ್ಥವಾಗಿ ಕೊಟ್ಟಿದ್ದಾರೆ. ಇದರಿಂದ ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತಾ ಇಲ್ಲ. ಇದರಲ್ಲಿ ಶೇ 95 ರಷ್ಟು ದುರ್ವ್ಯಯವಾಗಿದೆ. ಏನೂ ಕೆಲಸ ಮಾಡದೇ ಇರತಕ್ಕ ವ್ಯಕ್ತಿಗಳಿಗೆ ಇವರು ಹಣ ಕೊಟ್ಟಿರುವುದನ್ನು ನಮ್ಮ ಜಿಲ್ಲೆಯಲ್ಲಿ ತೋರಿಸುವುದಕ್ಕೆ ನಾನು ತಯಾರಾಗಿದ್ದೇನೆ. 44 ನೇ ಡಿಮ್ಯಾಂಡಿನಲ್ಲಿ ಸೂಚಿಸಿರುವ ಹಾಗೆ ವಾಳಿಯಪ್ಪ ಟೆಕ್ಸ್‌ಟೈಲ್ ಮಿಲ್ಸ್ ಅವರಿಗೆ 1 ಲಕ್ಷ ರೂಪಾಯಿಗಳ ಷೇರು ಕ್ಯಾಪಿಟಲ್ ಕೊಡುವುದಕ್ಕೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾಗಿದೆ. ಇದರಿಂದ ಸರ್ಕಾರದ ನೀತಿ ನನಗೆ ಅರ್ಥವಾಗುವುದಿಲ್ಲ. ಇದೇ ಬೆಂಗಳೂರಿನಲ್ಲಿ ನಾಲ್ಕು ತಿಂಗಳುಗಳಿಂದಲೂ ಕೂಡ ಮಿನರ್ವ ಮತ್ತು ರಾಜಾಮಿಲ್‌ಗಳ ಲಾಕ್-ಔಟ್‌ನಿಂದಾಗಿ ಆ ಮಿಲ್ಲುಗಳ ಕಾರ್ಯಾಚರಣೆ ಮುಂದುವರಿಯುತ್ತಾ ಇಲ್ಲ. ಅವು ಬಹಳ ಪುರಾತನವಾದ ಮಿಲ್ಲುಗಳು. ಬಹಳ ಹೆಚ್ಚಿಗೆ ಹೆಸರುವಾಸಿಯಾದಂತಹುಗಳು. ಇಂತಹ ಮಿಲ್‌ಗಳ ಬಗ್ಗೆ ಸರ್ಕಾರ 50–60 ಲಕ್ಷ ರೂಪಾಯಿಗಳ ಗ್ಯಾರಂಟಿ ಕೊಡಬೇಕಾಗಿದೆ. ಯಾವುದಾದರೂ ಒಂದು ರೀತಿಯಲ್ಲಿ ಇದನ್ನು ಬಗೆಹರಿಸಬೇಕು. ಇದರ ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲದಿದ್ದರೆ ಅದನ್ನು ಸರ್ಕಾರವೇ ನೇರವಾಗಿ ತೆಗೆದುಕೊಂಡು ಬೊಂಬಾಯಿ ರೀತಿಯಲ್ಲಿ ನಡೆಸಬೇಕು. ಇದನ್ನು ಹಾಗೆಯೇ ಬಿಟ್ಟಿರುವುದರಿಂದ ಏಳುಸಾವಿರ ಜನ ಕಾರ್ಮಿಕರು ಬೀದಿ ಭಿಕಾರಿಗಳಾಗಿದ್ದಾರೆ. ಆದ್ದರಿಂದ ಇಲ್ಲಿ ಸರ್ಕಾರವಿದೆಯೇ ಅಥವಾ ಸರ್ಕಾರವೆಂದು ಕರೆಯಬೇಕೇ, ಬೇಡವೇ ಎಂಬುದಾಗಿ ನನಗನ್ನಿಸುತ್ತಿದೆ. ಈ ದಿವಸ ಇಂಥಾದ್ದಕ್ಕೆ ಏನೂ ವ್ಯವಸ್ಥೆ ಮಾಡದೆ ಹೊಸದಾಗಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಷೇರು ಹಣವನ್ನು ಕೊಡುತ್ತೇವೆ, ಇಂಡಸ್ಟ್ರೀಸ್ ಬ್ಯಾಂಕುಗಳನ್ನು ಸ್ಥಾಪನೆ ಮಾಡುತ್ತೇವೆಂದು ಇವರು ಹೊರಟಿರುವುದನ್ನು ನೋಡಿದರೆ ಇದರಲ್ಲಿ ಏನು ಔಚಿತ್ಯವಿದೆ ಎಂಬುದು ನನಗಂತೂ ಅರ್ಥವಾಗುವುದಿಲ್ಲ. ಸರ್ಕಾರದವರು ಅವರಿಗೆ ಬೇಕಾದವರಿಗೆ ಕೊಡುತ್ತಾರೆ. ದಾವಣಗೆರೆಯಲ್ಲಿ ಶಂಕರ ಟೆಕ್ಸ್ ಟೈಲ್ ಮಿಲ್ಸ್ ಎಂಬುದಾಗಿ ಒಂದಿದೆ. ಇಂತಹ ಪರಿಸ್ಥಿತಿ ಇದ್ದಾಗಲೂ ಸುಮಾರು 20 ಲಕ್ಷ ರೂಪಾಯಿಗಳನ್ನು ಅವರಿಗೆ ಸರ್ಕಾರದವರು ಕೊಟ್ಟಿದ್ದಾರೆ. ಅವರಿಗೆ ಗ್ಯಾರಂಟಿ ಕೊಟ್ಟು ಅದು ಪುನಃ ಕೆಲಸಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದಕ್ಕೆ ಇವರು ತೋರಿಸಿದಂತಹ ಔದಾರ್ಯವನ್ನು ಈ ಮಿನರ್ವ ಮತ್ತು ರಾಜಾ ಮಿಲ್ಲುಗಳಿಗೇಕೆ ತೋರಿಸಲಿಲ್ಲವೆಂದು ಈಗ ನಾನು ಈ ಸಂದರ್ಭದಲ್ಲಿ ಇಲ್ಲಿ ಕೇಳಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಿನರ್ವಾ ಮತ್ತು ರಾಜಾ ಮಿಲ್ಲುಗಳಿಗೆ 20-20 ಲಕ್ಷ ರೂಪಾಯಿಗಳಂತೆ ಒಟ್ಟು 40 ಲಕ್ಷ ರೂಪಾಯಿಗಳ ಗ್ಯಾರಂಟಿ ಕೊಟ್ಟಿದ್ದೇವೆ. ಆ 40-50 ಲಕ್ಷ ರೂಪಾಯಿಗಳಿಂದ ಸಂಬಳ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. 50 ಲಕ್ಷ ರೂಪಾಯಿಗಳ ಗ್ಯಾರಂಟಿ ಸಾಲ ಕೊಟ್ಟಿದ್ದೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಅಷ್ಟೇ ಅಲ್ಲದೆ ಷೆಡ್ಯೂಲ್ಡ್ ಕ್ಯಾಸ್ಟ್ಸ್, ಷೆಡ್ಯೂಲ್ಡ್ ಟ್ರೈಬ್ಸ್ ಕೋ-ಆಪರೇಟಿವ್ ಹೌಸಿಂಗ್ ಕಾರ್ಪೊರೇಷನ್ನಿಗೆ 10 ಲಕ್ಷ ರೂಪಾಯಿಗಳ ಷೇರು ಕ್ಯಾಪಿಟಲ್ ಕೊಡಬೇಕೆಂದು ತಿಳಿಸಿದ್ದಾರೆ. ಇದರಲ್ಲಿ 3 ಕೋಟಿ 50 ಲಕ್ಷ ರೂಪಾಯಿಗಳನ್ನು 65-66 ನೇ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಈ ಸಭೆ ಮಂಜೂರು ಮಾಡಿದ್ದರೂ, ಇದುವರೆಗೆ ಹರಿಜನರ ವಸತಿ ಗೃಹಗಳ ನಿರ್ಮಾಣದ ಬಗ್ಗೆ ಏನನ್ನೂ ಖರ್ಚು ಮಾಡಲಿಲ್ಲ. ಆ ಯೋಜನೆಯನ್ನು ಮಣ್ಣುಪಾಲು ಮಾಡಿ ನೇರವಾಗಿ ಅವರಿಗೆ ಹಣವನ್ನು ಕೊಡುತ್ತಿಲ್ಲ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಇದುವರೆಗೂ ಆ ಹಣವನ್ನು ಖರ್ಚುಮಾಡದೆ ಈ ಐದು ವರ್ಷಗಳ ಕಾಲ ಆ 3½ ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡದೆ ಈಗ 10 ಲಕ್ಷ ರೂಪಾಯಿಗಳ ಷೇರು ಕ್ಯಾಪಿಟಲ್ ಬೇಕು ಎಂಬುದಾಗಿ ಕೇಳುವುದು ನನಗಂತೂ ಅರ್ಥವಾಗುತ್ತಿಲ್ಲ. ಹರಿಜನರ ಬಗ್ಗೆ ಸರ್ಕಾರ ಬರೀ ನಾಟಕದ ನೀತಿಯನ್ನು ಅನುಸರಿಸುತ್ತಿದೆ.

ಇನ್ನು ಐಟಂ ನಂಬರ್ 8 ರಲ್ಲಿ ಅಗ್ರಿಕಲ್‌ಚರಲ್ ಕಾಲೋನಿಗಳ ಬಗ್ಗೆ ಸರ್ಕಾರ ಒಂದು ಬೇಡಿಕೆಯನ್ನು ಮಂಡಿಸಿದ್ದಾರೆ. ಅದರಲ್ಲಿ ರಿಹ್ಯಾಬಿಲಿಟೇಷನ್ ಪ್ರಾಜೆಕ್ಟನ್ನು ಸೇರಿಸಿದ್ದಾರೆ. ಅದೂ ಅಲ್ಲದೆ ಹೊಸ ಹೊಸ ಬೋರ್ಡುಗಳನ್ನು ನೇಮಕ ಮಾಡುವುದೇ ಅಲ್ಲದೆ ಆ ಬಾಬಿಗೆ 3½ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೂ ಹರಿಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಲಿಲ್ಲ. ಅಸ್ಪೃಶ್ಯತಾ ನಿವಾರಣೆಗಾಗಿ ಹೊಸದಾಗಿ ಒಂದು ಬೋರ್ಡನ್ನು ರಚನೆ ಮಾಡಬೇಕೆಂದು ನಾನು ಅನೇಕ ವರ್ಷಗಳಿಂದ ಇಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಆದರೂ ಸರ್ಕಾರ ಆ ಬಗ್ಗೆ ಇದುವರೆಗೂ ಲಕ್ಷ್ಯ ಕೊಟ್ಟಿಲ್ಲ. ಇದರಲ್ಲಿ ಸರ್ಕಾರದ ನೀತಿ ಏನೆಂಬುದೇ ನನಗೆ ಅರ್ಥವಾಗಲಿಲ್ಲ. ಸರ್ಕಾರ ಹರಿಜನರ

(ಶ್ರೀ ಪಿ. ವೆಂಕಟಗಿರಿಯಪ್ಪ)

ಬಗ್ಗೆ ಹಿಂದಿನ ಸಭೆಯಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಿತ್ತೋ ಅದನ್ನು ಜಾಗ್ರತೆಯಾಗಿ ಖರ್ಚುಮಾಡಿ ಹರಿಜನರಿಗೆ ವಸತಿಗೃಹಗಳನ್ನು ಕಟ್ಟಿಸುವುದಕ್ಕಾಗಿ ಕೂಡಲೇ ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

MR. SPEAKER.—Now the Finance Minister will begin the reply.

(*Several members rose to speak*)

MR. SPEAKER.—Members will kindly resume their seats.

ಶ್ರೀ ಬಿ. ಭಾಸ್ಕರ್ ಶೆಟ್ಟಿ (ಕಾಪು).—ಸ್ವಾಮಿ, ನಮ್ಮಲ್ಲಿ ಮಾತನಾಡುವವರು ಇನ್ನೂ ಕೆಲವರು ಇದ್ದಾರೆ. ಆದ್ದರಿಂದ ಈ ವಿಷಯದ ಮೇಲೆ ಚರ್ಚೆ ಮಾಡಲು ಇನ್ನೂ ಸ್ವಲ್ಪ ಹೆಚ್ಚು ಕಾಲಾವಕಾಶ ವನ್ನು ಕೊಡಬೇಕು.

MR. SPEAKER.—If the House is prepared to sit for one hour more the chair has no objection.

SRI K. LAKKAPPA.—Let it be postponed for tomorrow.

MR. SPEAKER.—Order, order. Am I to take orders from anybody ?

SRI RAMAKRISHNA HEGDE.—We must finish this today. If the House is agreeable to sit till 6-30, I have no objection to start the reply at 6-00 p.m.

MR. SPEAKER.—Even then all members who want to speak cannot be accommodated. I have got 6 names. How can I accommodate them in half an hour ?

SRI S. SIVAPPA.—The Minister can reply tomorrow.

MR. SPEAKER.—If the members do not coordinate, I cannot possibly help them. If I call upon one member, then another member will walk out saying that he is not given a chanee. I am not going to make a choice. Let the Whip choose and tell me the names. I am prepared to persuade the Minister to give half an hour more for the debate.

SRI B. BHASKER SHETTY.—Sri Sanjivanath Aikala may be allowed to begin first.

† ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಧ್ಯಕ್ಷರೇ, 1966–67 ನೇ ಇಸವಿಯ ಹೆಚ್ಚುವರಿ ಬೇಡಿಕೆಯ ಬಗ್ಗೆ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಹೇಳಿದ ಮಾತು ಗಳನ್ನು ಸಮರ್ಥಿಸುತ್ತಾ ನಾನು ಕೆಲವು ವಿಷಯಗಳನ್ನಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಿಮ್ಯಾಂಡ್ ನಂಬರ್ 18 ರಲ್ಲಿ ಆಸ್ಪತ್ರೆಯ ವಿಷಯ ಬಂದಿದೆ. ಇದರಲ್ಲಿ ಕೆಲವು ಹೊಸ ಇಲಾಖೆಗಳನ್ನು ತೆರೆಯಬೇಕೆಂದು ಹೇಳಿದೆ. ಮತ್ತು ಇನ್ನೊಂದು ಪಂಡಿತ ಕಾಟೇಜ್ ಆಸ್ಪತ್ರೆಯನ್ನು ಸರ್ಕಾರದವರು ತೆಗೆದುಕೊಂಡು ಅದನ್ನು ದೊಡ್ಡ ಆಸ್ಪತ್ರೆಯಾಗಿ ಮಾಡುವ ಒಂದು ಬಾಬಿನಲ್ಲಿ ಸರ್ಕಾರದವರು ಹಣವನ್ನು ಕೇಳಿದ್ದಾರೆ. ಇದುವರೆಗೆ ಸರ್ಕಾರದವರು ದೊಡ್ಡ ದೊಡ್ಡ ಷಹರಗಳಲ್ಲಿರತಕ್ಕ ಆಸ್ಪತ್ರೆ ಗಳಿಗೆ ಈ ರೀತಿ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಿ ಹಳ್ಳಿಗಾಡುಗಳಲ್ಲಿರತಕ್ಕ ಪ್ರೈಮರಿ ಹೆಲ್ತ್ ಯೂನಿಟ್‌ಗಳಿಗೆ ಗಮನ ಕೊಡದೆ ಇರುವ ಬಗ್ಗೆ ಕೆಲವು ವಿಷಯಗಳನ್ನು ನಾನು ಹೇಳಬಯಸು ತ್ತೇನೆ. ಉಡುಪಿಯಲ್ಲಿ 10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ ದ್ದಾರೆ. ಆದರೆ ಅದನ್ನು ಸರ್ಕಾರದವರು ಉಪಯೋಗ ಮಾಡಿಕೊಳ್ಳದೆ ಈಗ ಆ ಆಸ್ಪತ್ರೆಯಲ್ಲಿ ಸಾವಿರಾರು ಮೂಟೆ ಸಿಮೆಂಟ್ ಮೂಟೆ ಮತ್ತು ಗೋಣಿ ಚೀಲಗಳನ್ನು ತುಂಬಿಸಿದ್ದಾರೆ. ಇದು ಬಹಳ ಆಶ್ಚರ್ಯಕರವಾಗಿದೆ. ತಯಾರಾದ ಆಸ್ಪತ್ರೆ ಕಟ್ಟಡದಲ್ಲಿ ಸಿಮೆಂಟ್ ಗೋಣಿ ಚೀಲಗಳನ್ನು

ತುಂಬಿಸುವುದಾದರೆ ಆಸ್ಪತ್ರೆಯ ಒಳಗಡೆ ಅದು ಗೋಡೆಗಳಿಗೆ ತಾಕಿ ಒಂದು ದುಷ್ಪರಿಣಾಮ ಉಂಟಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ಸರ್ಕಾರದವರು ಈ ಕಡೆ ಗಮನ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಇದೇ ರೀತಿ ಡಿಮ್ಯಾಂಡ್ ನಂಬರ್ 20ರಲ್ಲಿ 'ಗ್ರಾಮಸೇವಕರ ತರಪೇತಿ ಕೇಂದ್ರವನ್ನು ತೆರೆಯುವುದಕ್ಕಾಗಿ ಹಣವನ್ನು ಕೇಳಿದ್ದಾರೆ. ಅನೇಕ ವರ್ಷಗಳಿಂದ ಅನೇಕ ರೀತಿಯಲ್ಲಿ ಗ್ರಾಮ ಸೇವಕರು ಮತ್ತು ಗ್ರಾಮ ಸೇವಕಿಯರಿಗೆ ಮತ್ತು ಸೋಷಿಯಲ್ ಎಜುಕೇಷನ್ ಆರ್ಗನೈಜರು ಗಳಿಗೆ ವರ್ಷೇ ವರ್ಷೇ 3 ತಿಂಗಳು, 6 ತಿಂಗಳು ತರಪೇತಿಯನ್ನು ಕೊಡುತ್ತಿದ್ದಾರೆ. ಮತ್ತು ಅದೂ ಅಲ್ಲದೆ ಸೋಷಿಯಲ್ ಎಜುಕೇಷನ್ ಆರ್ಗನೈಜರುಗಳಿಗೆ ಟೀಚರ್ಸ್ ಟ್ರೇನಿಂಗ್ ಕೊಡಬೇಕೆಂದು ಪುನಃ ಒಂದು ಹೊಸ ಯೋಜನೆಯನ್ನು ಸರ್ಕಾರದವರು ತಂದಿದ್ದಾರೆ. ಈ ಪ್ರಕಾರ ನಮ್ಮ ಪ್ರಾಂತದಲ್ಲಿ ಎಲ್ಲಾ ಸೋಷಿಯಲ್ ಎಜುಕೇಷನ್ ಆರ್ಗನೈಜರುಗಳಿಗೆ ಟೀಚರ್ಸ್ ಟ್ರೇನಿಂಗ್ ಕೊಡುತ್ತಿದ್ದಾರೆ. ಇದು ಬ್ರೈನ್ ಫೀವರ್ ಇದ್ದ ಹಾಗೆ ಆಗಿದೆ. ಇವರಿಗೆತರಪೇತಿ ಯನ್ನು ಕೊಡುವಾಗ ಸರ್ಕಾರದ ಸಂಬಳ ಸಿಕ್ಕುತ್ತದೆ. ಟಿ.ಎ.—ಡಿ.ಎ. ಎಲ್ಲಾ ತರಹದ ಅನು ಕೂಲಗಳೂ ಸಿಕ್ಕುತ್ತವೆ. ಈಗಿನ ಸಂದರ್ಭದಲ್ಲಿ ಸೋಷಿಯಲ್ ಎಜುಕೇಷನ್ ಆರ್ಗನೈಜರುಗಳನ್ನು ನೇಮಕ ಮಾಡುವ ಅಗತ್ಯವಿಲ್ಲ. ಆದ್ದರಿಂದ ಈಗ ಸೋಷಿಯಲ್ ಎಜುಕೇಷನ್ ಆರ್ಗನೈಜರ್ಸ್, ಗ್ರಾಮ ಸೇವಕರು ಮತ್ತು ಗ್ರಾಮ ಸೇವಕಿಯರು ಇವರುಗಳಿಗೆ ಅನೇಕ ರೀತಿಯಲ್ಲಿ ಶಿಕ್ಷಣ ಮತ್ತು ತರಪೇತಿಯನ್ನು ಕೊಡುವುದು ಒಂದು ಜಾಬ್ ಕೋರ್ಸ್ ಇದ್ದಹಾಗೆ ಇದೆ. ಕೇಂದ್ರ ಸರ್ಕಾರ ದವರು ಒಂದು ಫಾರ್ಮುಲಾ ಹಾಕಿಕೊಂಡು ಕಂಟಿನ್ಯುಯಸ್ ಆಗಿ ಉಪಾಧ್ಯಾಯರಿಗೆ, ಗ್ರಾಮ ಸೇವಕ ಮತ್ತು ಗ್ರಾಮ ಸೇವಕಿಯವರಿಗೆ ಮತ್ತು ಸೋಷಿಯಲ್ ಎಜುಕೇಷನ್ ಆರ್ಗನೈಜರುಗಳಿಗೆ ಆರು ಆರು ತಿಂಗಳು ಶಿಕ್ಷಣವನ್ನು ಕೊಡುತ್ತಿದ್ದಾರೆ. ಈ ರೀತಿ ನಮ್ಮ ಸರ್ಕಾರದವರು ಇತಿ, ಮಿತಿ, ಗತಿ ಇಲ್ಲದ ಅನೇಕ ಯೋಜನೆಗಳನ್ನು ತಂದು ನಮ್ಮ ಸರ್ಕಾರದ ಬೊಕ್ಕಸವನ್ನು ಬರಿದು ಮಾಡು ತ್ತಿದ್ದಾರೆ.

ಇನ್ನು ಡಿಮ್ಯಾಂಡ್ ನಂಬರ್ 25ರಲ್ಲಿ ಯುಟಿಲೈಜೇಷನ್ ಆಫ್ ಮ್ಯಾನ್ ಪವರ್ ಇದರ ಬಗ್ಗೆ 10 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈಗ ಹೊಸದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮನುಷ್ಯನ ಶಕ್ತಿಯನ್ನು ಉಪಯೋಗಿಸುವ ಬಗ್ಗೆ ಸರ್ಕಾರದವರು ಏನು ಹೊಸ ಕಾರ್ಯಗಳನ್ನು ಮಾಡಿದ್ದಾರೆ? ನಮ್ಮ ದೇಶದಲ್ಲಿ ಈಗ 16 ಲಕ್ಷ ಜನ ಕೈ ಮಗ್ಗದವರು ಇದ್ದಾರೆ. ಅವರು ಬಹಳ ತೊಂದರೆ ಪಡುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಸಾಕಷ್ಟು ಸಹಾಯ ಸಿಕ್ಕಿಲ್ಲ. ಹೀಗಿರುವಾಗ ನಮ್ಮ ಸರ್ಕಾರದವರು ಯಾವುದೋ ಒಂದು ಹೊಸ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದುಕೊಂಡು ಅದನ್ನು ಖರ್ಚು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು ಕೈ ಮಗ್ಗದ ಕೈಗಾರಿಕೆಗಾಗಿ ನಮ್ಮ ಸರ್ಕಾರಕ್ಕೆ 32 ಲಕ್ಷ ರೂಪಾಯಿಗಳನ್ನು ಸಹಾಯ ಧನವಾಗಿ ಕೊಟ್ಟಿದ್ದಾರೆ. ಆದರೂ ಸಹ 16 ಲಕ್ಷ ಜನಗಳು ಅವಲಂಬಿಸಿಕೊಂಡಿರತಕ್ಕ ಈ ಕೈಮಗ್ಗದ ಕೈಗಾರಿಕೆಗೆ ನಮ್ಮ ಸರ್ಕಾರದಿಂದ ಸಾಕಷ್ಟು ಸಹಾಯ ಸಿಕ್ಕಿಲ್ಲ. ಇಷ್ಟು ಹೇಳಿ ಹೆಚ್ಚು ವಿಷಯ ಗಳನ್ನು ಹೇಳಲು ಕಾಲಾವಕಾಶವಿಲ್ಲದೆ ಇರುವುದರಿಂದ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ, ಸಭಾಪತಿಗಳೇ, ಈ ಬಡ್ಜೆಟ್ಟಿನಲ್ಲಿ ಒಂದೆರಡು ವಿಷಯಗಳನ್ನು ಸಭಾಪತಿಗಳ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ನಿಂತಿದ್ದೇನೆ. ಮುಖ್ಯವಾಗಿ ಈ ಕಾಲದಲ್ಲಿ ವ್ಯವಸಾಯ ಬಹಳ ಪ್ರಾಮುಖ್ಯವಾದುದು. ಈ ವ್ಯವಸಾಯ ಬಹಳ ಪ್ರಾಮುಖ್ಯ ಎಂದು ಸರ್ಕಾರದವರು ಎಲೆಕ್ಟ್ರಿಕ್ ಪವರನ್ನೂ, ಪಂಪುಸೆಟ್ಟುಗಳನ್ನೂ ಒದಗಿಸಿದ್ದಾರೆ. ಆದರೆ ರೈತರುಗಳು ಭಾವಿಗಳನ್ನು ತೆಗೆಯುವುದಕ್ಕೆ ಹೋದರೆ ಬಾವಿಗಳಲ್ಲಿ ಸ್ವಲ್ಪವೂ ನೀರಿಲ್ಲ. ಅದಕ್ಕೋಸ್ಕರ ವ್ಯವಸಾಯದ ಇಲಾಖೆಯವರು ರಾಜ್ಯದಲ್ಲಿ ಎಷ್ಟೆಷ್ಟು ಬಾವಿಗಳು ಇವೆ, ಎಷ್ಟು ಹೊಸದಾಗಿ ತೆಗೆದಿದ್ದಾರೆ, ಎಷ್ಟು ರೂಪಾಯಿ ಸಾಲ ಕೊಟ್ಟಿದ್ದಾರೆ, ಒಂದು ವೇಳೆ ಬಾವಿಯಲ್ಲಿ ನೀರು ಬರದೇ ಹೋದರೆ ಏನು ಮಾಡಬೇಕು ಎನ್ನುವುದಕ್ಕೆ ನಾನು ಒಂದು ಸಲಹೆ ಹೇಳುತ್ತೇನೆ. ಸರ್ಕಾರದವರು ವ್ಯವಸಾಯ ಇಲಾಖೆಯ ಮುಖಾಂತರ ರಿಯಾಯಿತಿ ದರದಲ್ಲಿ ರೈತರಿಗೆ ಬೋರು ವೆಲ್ಲುಗಳನ್ನು ಹಾಕಿಸಿ ನೀರನ್ನು ಒದಗಿಸಿ ಕೊಡಿಸಿಕೊಟ್ಟರೆ ವ್ಯವಸಾಯ ಮಾಡಲು ಇದು ಬಹಳ ಪ್ರಾಮುಖ್ಯ ಎಂದು ಹೇಳುತ್ತೇನೆ. ಸುಮಾರು 2–3 ವರ್ಷಗಳಿಂದಲೂ ಸರಿಯಾಗಿ ಮಳೆ ಬೆಳೆ ಇಲ್ಲದೆ ರೈತರಿಗೆ ತೊಂದರೆಯಾಗುತ್ತಾ ಇದೆ. ಈ ವರ್ಷವೂ ಮಳೆ ಇಲ್ಲದೆ ಬಹಳ ಕೆಟ್ಟಿದೆ. ರಾಗಿ ಚೆಲ್ಲನೆ ಆಗಲಿಲ್ಲ, ಭತ್ತ ನಾಟಿ ಆಗಲಿಲ್ಲ. ಶಿವಮೊಗ್ಗ, ಕೊಡಗು, ಹಾಸನ ಜಿಲ್ಲೆಗಳು ಯಥೇಚ್ಛ ವಾಗಿ ಭತ್ತ ಬೆಳೆಯತಕ್ಕಂಥ ಪ್ರದೇಶ. ಅಂತಹ ಕಡೆಗಳಲ್ಲಿಯೂ ಮಳೆ ಕಡಿಮೆ ಆಗಿದೆ. ಕೃಷ್ಣರಾಜಸಾಗರದಲ್ಲೂ ನೀರು ಕಡಿಮೆಯಾಗಿ, ಭರ್ತಿ ಆಗಲಿಲ್ಲ. ಆದುದರಿಂದ ಒಟ್ಟು ಹಾಕಲು ಆಗಲಿಲ್ಲ. ಈ ವರ್ಷ ಭತ್ತದ ಒಟ್ಟು ಹಾಕದೆ ರೈತರು ಕಾದುಕೊಂಡಿದ್ದಾರೆ. ಇಂಜನಿಯರಿಂಗ್

(ಶ್ರೀ ಜೆ. ದೇವಯ್ಯ)

ಇಲಾಖೆಯವರೂ ಬಂದು ರೈತರಿಗೆ ಭತ್ತದ ಒಟ್ಟು ಹಾಕಬೇಡಿ ಎಂದು ತಿಳಿಸಿ ಬಂದಿದ್ದಾರೆ. ನೀರು ಬರುತ್ತದೋ, ಇಲ್ಲವೋ ಎಂಬುದನ್ನು ಅವರು ಹೇಳುತ್ತಾರೆ. ಇದು ದೇಶಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಕೊಡಗು ಮತ್ತು ಕೃಷ್ಣರಾಜಸಾಗರದಲ್ಲಿ ಮಳೆ ಕಡಿಮೆ ಯಾಗಿದೆ. ಈ ಬಜೆಟ್ಟಿನಲ್ಲಿ ಫೌಂಡೇಷನ್ ಹಾಕಿದ್ದೀರಿ ಎಂತ ಹೇಳುತ್ತಾರೆ ಸರ್ಕಾರದವರು. ಹಿಂದೆ ಅನೇಕ ಸಾರಿ ನಾನು ಹೇಳಿವೆ. ಹಾರಂಗಿ ಕಂಬದಕಡ ಮಾಡುವುದು ಸರಿಯೆ ಆದರೆ ಅದರಿಂದ ಕೃಷ್ಣರಾಜಸಾಗರದ ನೀರಿನ ಮಟ್ಟ ವರ್ಷೇ ವರ್ಷೇ ಕಡಿಮೆಯಾಗುತ್ತಾ ಇದೆ. ಅದಕ್ಕೂ ಇದಕ್ಕೂ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೀರಿ. ದೇಶದಲ್ಲಿ ಬಹಳ ತೊಂದರೆಯಾಗುತ್ತದೆ. ಈ ವರ್ಷ ನೀರು ಬಂದಿಲ್ಲ. 1 ಲಕ್ಷ 20 ಸಾವಿರ ಎಕರೆ ನೀರಾವರಿಯಾಗತಕ್ಕ ಪ್ರದೇಶ. ಆದರೆ ಹೋದ ವರ್ಷದಲ್ಲಿ ಕೃಷ್ಣರಾಜಸಾಗರದಲ್ಲಿ ನೀರು ತುಂಬದೇ ಇರುವುದರಿಂದ ಕಬ್ಬಿನ ಬೆಳೆ ಆಗಲಿಲ್ಲ. ಕಬ್ಬಿನ ಬೆಳೆ ಬಹಳ ಪ್ರಾಮುಖ್ಯವಾದುದು. ಅಲ್ಲಿ ಆಗಲಿಲ್ಲ. ಭತ್ತದ ಬೆಳೆಯೂ ಪ್ರಾಮುಖ್ಯವಾದುದು. ಇದರಿಂದ ಮಂಡ್ಯದ ಸಕ್ಕರೆ ಕಾರ್ಖಾನೆಯು ನಿಂತು ಹೋಗಿರುತ್ತೆ. 3 ಕೋಟಿ ರೂಪಾಯಿ ಸಾಲ ವಾಗಿದೆ ಅಂತ ಕೇಳಿದೆ. ಇನ್ನು ಕೂಲಿಗಾರರಿಗೆ 1—1½ ವರ್ಷ ಕೆಲಸ ಇಲ್ಲ ಎಂದು ಹೇಳುತ್ತೇನೆ. ಈ ವರ್ಷದಿಂದ ಸಂಬಳ ಕೊಡಬೇಕು. 3 ಕೋಟಿ ರೂಪಾಯಿ ಸಾಲ ತೀರಿಸಿಕೊಂಡು ಸಂಬಳ ದಾರರಿಗೆ ಎಷ್ಟರಮಟ್ಟಿಗೆ ಸಂಬಳ ಕೊಡುತ್ತಾರೋ ಗೊತ್ತಿಲ್ಲ. ಕಬ್ಬು ಒಣಗಿ ಹೋಗಿರುವುದರಿಂದ ಸರ್ಕಾರದವರು ಒಂದು ಸರ್ವೆ ಮಾಡಬೇಕು. ಎಷ್ಟು ಎಕರೆ ಕಬ್ಬು ಹೋಗಿದೆ, ಎಷ್ಟು ನಷ್ಟ ವಾಗಿದೆ ಎಂಬುದನ್ನು ನೋಡಿ ರೈತರಿಗೆ ಯಾವ ತರಹದಲ್ಲಿ ರಿಯಾಯಿತಿ ತೋರಿಸಬೇಕು ಎಂದು. ಇದುವರೆಗೆ ಯಾವುದನ್ನೂ ತೆಗೆದುಕೊಂಡಿಲ್ಲ. ರೈತರುಗಳ ಮುಖಂಡರುಗಳೂ ಕೂಡ ಅಲ್ಲಿನ ಡೈರೆಕ್ಟರ್‌ಗಳು ಆಗಿದ್ದಾರೆ. ಅವರೂ ಕೂಡ ರೈತರ ವಿಚಾರದಲ್ಲಿ ಏನೂ ಮಾತನಾಡುತ್ತಾ ಇಲ್ಲ. ನಿನ್ನೆ ಒಂದು ಅಸಿಟೇಟ್ ಫ್ಯಾಕ್ಟರಿಗೆ ಸಾತನೂರು ಫಾರಂಗೆ ಜಮೀನು ಕೊಟ್ಟಿದ್ದೀರಿ. 3 ಕೋಟಿ ರೂಪಾಯಿ ಸಾಲವಾಗಿರತಕ್ಕ ಕಂಪನಿಗೆ ಸೇರಿದ ಫಾರಂನ ಜಮೀನನ್ನು ಕಡಿಮೆ ಧರಕ್ಕೆ 40-50 ಎಕರೆ ಜಮೀನು ಏತಕ್ಕೆ ಕಡಿಮೆ ಕೊಟ್ಟಿದ್ದೀರಿ. ನೀವು ಹೆಚ್ಚಿಗೆ ದುಡ್ಡು ಬರುವ ಹಾಗೆ ಮಾಡಬಾರದಾಗಿತ್ತೆ ? ರೈತರು ಬೆಳೆಯತಕ್ಕಂಥ ಅವಕಾಶವನ್ನು ನಮ್ಮ ಫ್ಯಾಕ್ಟರಿಯವರು ಕೊಟ್ಟಿದ್ದಾರೆ. ಇನ್ನೂ ಜನ ಕಾತುರರಾಗಿದ್ದಾರೆ. ಇದನ್ನು ಸರ್ಕಾರದವರು ಏರ್ಪಾಡು ಮಾಡಬೇಕು. ನಮ್ಮ ಫಾರಂನಿಂದ ವರ್ಷ ಒಂದಕ್ಕೆ 4 ಲಕ್ಷ 5 ಲಕ್ಷ ನಷ್ಟವಾಗುತ್ತಾ ಇದೆ. ಈ ವರ್ಷದಲ್ಲೂ ಏನೂ ಕೆಲಸ ಇಲ್ಲ. ಸಕ್ಕರೆ ಕಾರ್ಖಾನೆಯ ಕೂಲಿಗಾರರಿಗೆ ಭೂಮಿಯನ್ನು ಒಬ್ಬೊಬ್ಬರಿಗೆ ಅರ್ಧ ಅರ್ಧ ಎಕರೆ ಕೊಟ್ಟರೂ ಸುಖವಾಗಿ ಜೀವನ ಮಾಡಿಕೊಂಡು ಹೋಗುತ್ತಾರೆ. ನಷ್ಟ ಮಾಡಿಕೊಳ್ಳದ ಹಾಗೆ ಅದನ್ನು ನಡೆಸಬೇಕೆಂದು ಸರ್ಕಾರದ ಮೂಲಕ ಹೇಳುತ್ತೇನೆ. ಸರ್ಕಾರ ಸಮಯ ಬಂದ ಹಾಗೆ ಮಾತನಾಡುತ್ತಾರೆ. ಒಂದು ಸಾರಿ ಜವಾಬ್ದಾರಿ ಇದೆ ಎಂದು ಹೇಳುತ್ತಾರೆ, ಇನ್ನೊಂದು ಸಾರಿ ಇಲ್ಲ ಎಂದು ಹೇಳುತ್ತಾರೆ. ಸರ್ಕಾರದ್ದು 60 ಪರ್ಸೆಂಟು ಷೇರು ಇದೆ. ಸರ್ಕಾರದ ಕಡೆ ಛೇರ್ಮನ್ ಇದ್ದಾರೆ, ಡೈರೆಕ್ಟರ್ ಇದ್ದಾರೆ, ಇವೆಲ್ಲಾ ಇದ್ದುಕೊಂಡು ಜವಾಬ್ದಾರಿ ಇಲ್ಲ ಎಂದರೆ ಹೇಗೆ ? ಹೆಚ್ಚು ಬೆಳೆ ಬೆಳೆದು ಫಸಲು ಮಾಡಿ ಫ್ಯಾಕ್ಟರಿ ಸಾಲ ತೀರಿಸಬೇಕು. ಫ್ಯಾಕ್ಟರಿ ಚೆನ್ನಾಗಿ ನಡೆಸಬೇಕು ಎಂದು ಹೇಳುತ್ತೇನೆ. ಹಿಂದೆ ಫ್ಯಾಕ್ಟರಿಯವರು ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಸಾಲ ಕೊಡುತ್ತಿದ್ದರು. ಈಗ ಸೊಸೈಟಿಗಳ ಮುಖಾಂತರ ಗೊಬ್ಬರವನ್ನು ಸಾಲ ಕೊಡುತ್ತಾರೆ ಎಂದು ಹೇಳುತ್ತೇನೆ. ಹಿಂದೆ ಸೊಸೈಟಿಯವರೂ ಕೊಟ್ಟಿದ್ದರು. ಈಗ ಅವರು ಫ್ಯಾಕ್ಟರಿಯವರಿಗೂ ನಮಗೂ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಈಗ ಕಬ್ಬನ್ನು ಒಪ್ಪಂದ ಮಾಡಿಕೊಂಡು ಕಬ್ಬನ್ನು ಫ್ಯಾಕ್ಟರಿಗೆ ತೆಗೆದು ಕೊಳ್ಳಿ ಎಂದರೆ ಎಲ್ಲಾದರೂ ಮಾರಿಕೊಳ್ಳಿ ಎಂದು ಹೇಳುತ್ತಾರೆ. ಕೆಲವು ಕಬ್ಬು ಒಣಗಿಹೋಯಿತು. ಕಬ್ಬನ್ನು ತೆಗೆದುಕೊಳ್ಳಲು ದಿಕ್ಕಿಲ್ಲ, ದಿವಾಳಿ ಇಲ್ಲ, ಎಲ್ಲಾ ಒಣಗಿ ಹೋಯಿತು. ಅದನ್ನು ಕೇಳದೇ ಹೋದರೆ ಮುಂದೆ ಏನಾಗುತ್ತದೆ ರೈತರು ಏನು ಮಾಡುತ್ತಾರೆ ಎಂಬುದನ್ನು ಅವರು ತಿಳಿದುಕೊಳ್ಳ ಬೇಕು. ಹಾಗಾದರೆ ಅವರ ಗತಿ ಏನು ? 1952-53, 1953-54ರಲ್ಲಿ 35 ಲಕ್ಷ ರೂಪಾಯಿ ಬೋನಸ್ ಬರಬೇಕು. ಸುಪ್ರೀಂಕೋರ್ಟಿನಲ್ಲಿ ಅದು ಇನ್ನು ಫೈಸಲಾಗಿಲ್ಲ ಎಂದು ಹೇಳುತ್ತಾರೆ. ಅದರಿಂದ ರೈತರಿಗೆ 35 ಲಕ್ಷ ರೂಪಾಯಿ ಬರಬೇಕಾದ್ದನ್ನು ಒಂದು ಕಾಸೂ ಕೊಟ್ಟಿಲ್ಲ. ಸರ್ಕಾರದ ವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಸ್ವಾಮಿ, ಒಂದು ಆಸ್ಪತ್ರೆ ವಿಷಯ. 1 ವರ್ಷ, 2 ವರ್ಷ, 3 ವರ್ಷ ಆದರೂ ಒಂದು ವ್ಯಾನ್ ಡಿಸ್ಟ್ರಿಕ್ಟ್ ಮೆಡಿಕಲ್ ಆಸ್ಪತ್ರೆಗೆ ಸಪ್ಲೈ ಮಾಡಬೇಕಾದರೆ ಒಂದು ವರ್ಷ ಆಯಿತು. ಮಂತ್ರಿಗಳಿಗೆ 2 ಸಾರಿ ಹೇಳಿದೆ. ಒಂದು ವ್ಯಾನ್ ರಿಪೇರಿ ಮಾಡಬೇಕಾದರೆ ಒಂದು ವರ್ಷವಾದರೆ ಹೇಗೆ ? ಇದರಿಂದ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ.

ಈಚೆಗೆ ಎಂಪ್ಲಾಯ್‌ಮೆಂಟ್ ಆಫೀಸ್ ಎಂದು ಏರ್ಪಾಡು ಮಾಡಿದ್ದೀರಿ, ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿ ಸೀನಿಯಾರಿಟಿ ಮೇಲೆ ರಿಜಿಸ್ಟರ್ ಮಾಡಿಕೊಂಡು ಹೋಗುತ್ತಾರೆ. ಅವರಿಗೆ ಕೆಲಸ ಕೊಡುವುದಿಲ್ಲ. ಎಲ್ಲಾ ಅಧ್ವಾನವಾಗಿ ಹೋಗಿದೆ. ಮಂಡ್ಯದಲ್ಲಿ ಒಬ್ಬ ಆಫೀಸರು ಇದ್ದಾರೆ. ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಅವರು ಕ್ಯಾನ್ಸಲ್‌ಗೆ ಓಡಿ ಹೋಗಿದ್ದಾರೆ. ಇಷ್ಟು ಅನಾಹುತ ನಡೆಯುತ್ತಾ ಇದೆ. ಸರ್ಕಾರದವರು ಅವರ ಮೇಲೆ ನಿಗಾ ಇಡಬೇಕು. ಸಂಬಂಧಪಟ್ಟ ಮಂತ್ರಿಗಳು ಅವರ ವಿಷಯದಲ್ಲಿ ಗಮನ ಇಡಬೇಕು ಎಂದು ಹೇಳುತ್ತೇನೆ.

ಇನ್ನು ವಿದ್ಯಾ ಇಲಾಖೆ. ಒಬ್ಬರು ಮಹಿಳಾ ಅಧಿಕಾರಿಯನ್ನು ಹಾಕಿದ್ದಾರೆ. ಅವರನ್ನು ಶ್ರೀಮತಿ ಚನ್ನಪಟ್ಟಣವೆಂದೇ ಹೇಳಬಹುದು. ಅವರು ಅಲ್ಲಿ ಕೆಲಸವನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಆದ್ದರಿಂದ ಅವರನ್ನು ತೆಗೆದು ಸರಿಯಾಗಿ, ದಕ್ಷತೆಯಿಂದ ಕೆಲಸಮಾಡುವವರನ್ನು ಅಲ್ಲಿ ಹಾಕಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮಾಂಡಿನ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಈ ವ್ಯವಸಾಯ ಮತ್ತು ಮೀನುಗಾರಿಕೆ ಇಲಾಖೆಗೆ ಇಲ್ಲಿ 11,71,800 ರೂಪಾಯಿಗಳನ್ನು ಇಟ್ಟಿದ್ದಾರೆ. ಇವತ್ತಿನ ದಿವಸ ಈ ವ್ಯವಸಾಯ ಇಲಾಖೆಯಲ್ಲಿ ಏನಾಗಿದೆ ಎಂದರೆ, ಅಲ್ಲಿ ಸಕಾಲದಲ್ಲಿ ಬೇಕಾದ ಸಲಕರಣೆಗಳು ಇಲ್ಲ, ಗೊಬ್ಬರಗಳು ಸಿಗುವುದಿಲ್ಲ. ವ್ಯವಸಾಯಕ್ಕೆ ಬೇಕಾದ ಸಂದರ್ಭಗಳಲ್ಲಿ ಯಾವ ಸೊಸೈಟಿಯಲ್ಲಿ ಕೇಳಿದರೂ ಗೊಬ್ಬರ ಒಂದೂ ಸಿಗಲಿಲ್ಲ. ನನ್ನ ತಿಳುವಳಿಕೆಗೆ ಬಂದ ಪ್ರಕಾರ, ಇವತ್ತಿನದಿವಸ ಯಾವ ಗೊಬ್ಬರವು ವ್ಯವಸಾಯಕ್ಕೆ ಉಪಯೋಗವಾಗಬೇಕಾಗಿತ್ತೋ, ಅದು ಅದಕ್ಕೆ ಉಪಯೋಗವಾಗದೆ, ಎಸ್ಟೇಟುಗಳಿಗೆ ಹೋಗುತ್ತಾ ಇದೆ. ಒಬ್ಬ ಆಫೀಸರನ್ನು ಕೇಳಿದಾಗ, ಅವರು ಹೇಳಿದರು, ಈ ಉರಿಯಾ ಗೊಬ್ಬರವು ಚಿಕ್ಕಮಗಳೂರು ಎಸ್ಟೇಟುಗಳಿಗೆ ಹೋಗುತ್ತಾ ಇದೆ, ಅದರ ವಿಚಾರಣೆ ನಡೆಯುತ್ತಿದೆ ಎಂದು. ಈಗ ಈ ವ್ಯವಸಾಯ ಇಲಾಖೆಯಲ್ಲಿ ಒಂದು ದೊಡ್ಡ ತಪ್ಪು ಏನೆಂದರೆ, ಗೊಬ್ಬರವನ್ನು ಸಪ್ಲೈ ಮಾಡುವ ಇಲಾಖೆಯೇ ಬೇರೆ, ಹೀಗೆ ಒಂದಕ್ಕೊಂದು ಸಂಬಂಧವಿಲ್ಲದೆ, ಇದು ಯಾವುದಕ್ಕೂ ಪ್ರಯೋಜನ ಬರದ ಇಲಾಖೆಯಾಗಿದೆ. ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಗಾಗಿ ಸಣ್ಣ ಮಾದರಿಯ ಯಾಂತ್ರಿಕ ನೇಗಿಲುಗಳನ್ನು ಒದಗಿಸಿಕೊಟ್ಟಿದ್ದಾರೆ. ಇದರಲ್ಲಿ ನೋಡುವುದಾದರೆ, ಯಾರ್ಯಾರು ಪ್ರಭಾವ ಬೀರಿದ್ದಾರೋ, ಅಂಥವರಿಗೆ ಹೋಗುವುದಲ್ಲದೆ, ನಿಜವಾಗಿ ಯಾರು ಹೆಚ್ಚು ಉತ್ಪನ್ನ ಮಾಡುತ್ತಾನೋ, ಹೆಚ್ಚಾಗಿ ವ್ಯವಸಾಯ ಮಾಡುತ್ತಾನೋ ಅಂಥವನಿಗೆ ಸಿಗಲಿಲ್ಲ. ಇದು ಒಂದೇ ಅಲ್ಲ, ಇನ್ನಿತರ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಲೋನ್ ಕೂಡ ಇದೇ ರೀತಿಯಾಗುತ್ತಿದೆ. ಆದ್ದರಿಂದ ಇವತ್ತಿನ ದಿವಸ ನಿಜವಾಗಿ ಯಾರು ಯಾರಿಗೆ ಸಿಗಬೇಕೋ ಅಂಥವರಿಗೆ ಸಿಗುತ್ತಾ ಇಲ್ಲ. ಎಂದು ನಾನು ಇಲ್ಲಿ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

ಇದರ ಜೊತೆಗೆ ಮೀನುಗಾರಿಕೆ ಬಂದರಿನ ಅಭಿವೃದ್ಧಿಗಾಗಿ ಒಂದು ಲಕ್ಷ ರೂಪಾಯಿಯನ್ನು ಯುಗೋಸ್ಲಾವಿಯಾ ಎಕ್ಸ್‌ಪರ್ಟುಗಳಿಗೆ ಇನ್‌ವೆಸ್ಟಿಗೇಶನ್‌ಗಾಗಿ ಇದರಲ್ಲಿ ಕೊಟ್ಟಿದೆ ಎಂದು ಹೇಳುತ್ತಾರೆ. ನಾನು ತಿಳಿದಮಟ್ಟಿಗೆ ಈ ಬಂದರಿನ ಯೋಜನೆಯು ಆರು ಲಕ್ಷದ್ದು ಇದೆ ಎಂದು ಕಾಣುತ್ತದೆ. ಈ ಆರು ಲಕ್ಷ ಬಂದರಿನ ಯೋಜನೆಗೆ, ಅದರ ಒಂದು ಸರ್ವೆ ಮಾಡಲಿಕ್ಕೆ ನಾವು ಒಂದು ಲಕ್ಷ ಕೊಡುವುದಾದರೆ, ಈ ಯೋಜನೆಯ ಪ್ರತಿಫಲ ಎಲ್ಲಿ ಯಾವ ಮಟ್ಟಕ್ಕೆ ಬಂದು ನಿಲ್ಲುತ್ತದೆ ಎಂದು ತಾವು ಆಲೋಚನೆ ಮಾಡಬೇಕು.

ಎರಡನೆಯದಾಗಿ, ನಮ್ಮ ಸರ್ಕಾರದ ವತಿಯಿಂದ ನಡೆಸಲ್ಪಡುವ ಸಹಕಾರ ಇಲಾಖೆ. ನಮ್ಮ ಆರ್ಥಿಕ ಮಂತ್ರಿಗಳು ಕೆಲವು ಕಾಲ ಸಹಕಾರ ಮಂತ್ರಿಗಳಾಗಿಯೂ ಇದ್ದರು. ಅಲ್ಲಿ ಏನೇನು ನಡೆಯುತ್ತಿದೆಂಬುದು ಅವರಿಗೆ ಗೊತ್ತಿದೆ. ಅವರಿಗೆ ಗೊತ್ತಿಲ್ಲದಿದ್ದರೆ, ಅವರಿಗೆ ಒಂದು ನಿದರ್ಶನವನ್ನು ಕೊಡಬಯಸುತ್ತೇನೆ. ನಿಮ್ಮ ಸಿರ್ಸಿ ತೋಟಗಾರರ ಕೋ-ಆಪರೇಟೀವ್ ಸೊಸೈಟಿಯಲ್ಲಿ ನಿಮಗೆ ಚೆನ್ನಾಗಿ ತಿಳಿದಿರುವಂತೆ, ಅಲ್ಲಿಯ ಒಬ್ಬ ಸೆಕ್ರೆಟರಿ 130 ರೂಪಾಯಿ ಸಂಬಳ ತೆಗೆದುಕೊಳ್ಳುವವ, ಇವತ್ತಿನ ದಿವಸ 30 ಸಾವಿರ ರೂಪಾಯಿಯ ಆರ್. ಸಿ. ಸಿ. ಬಿಲ್ಡಿಂಗನ್ನು ಕಟ್ಟಿಕೊಳ್ಳುತ್ತಿದ್ದಾನೆ. ತಾವು ಏನಾದರೂ ವಿಚಾರ ಮಾಡಿದ್ದೀರಾ? ಬರೇ ಇದು ಕಾಂಗ್ರೆಸ್ ಸಂಸ್ಥೆಯ ಪೋಷಣೆ ಮಾಡುವ ಸಂಸ್ಥೆಯಾಗಿದೆ ಎಂದು ಅಧಿಕೃತವಾಗಿ ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಮತ್ತೊಂದು ವಿಷಯ. ವ್ಯವಸಾಯದ ವಿಷಯವನ್ನು ಮಾತನಾಡುವಾಗ ಗೊಬ್ಬರದ ವಿಚಾರವನ್ನು ಹೇಳಿದೆ. ನಮ್ಮ ಮಂಗಳೂರು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಹೋದ ವರ್ಷ 75 ಸಾವಿರ ಟನ್ ಗೊಬ್ಬರ ಕಾಫಿ ಎಸ್ಟೇಟಿಗೆ ಹೋಗಿದೆ. ಆ ವಿಷಯದಲ್ಲಿ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಇದು ನಿಜವಾಗಿಯೂ ಕೆಟ್ಟ ಕೆಲಸ. ಇದರಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ ಮತ್ತು ನ್ಯಾಯವಾಗಿ ಸಿಗಬೇಕಾದಂಥವರಿಗೆ ಅನ್ಯಾಯವಾಗುತ್ತದೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ತಮ್ಮವರು, ಇಲ್ಲವೇ ತಮ್ಮ ಚುನಾವಣೆಗೆ ಯಾರು ಸಹಾಯ ಮಾಡುತ್ತಾರೆ, ಅಂಥವರಿಗೆ ನೀವು ಸಹಾಯ ಮಾಡುತ್ತೀರೇ ಹೊರತು, ಸರ್ವಸಾಮಾನ್ಯವಾಗಿ ಯಾರು ನಿಜವಾಗಿ ಅರ್ಹರು, ಯಾರಿಗೆ ಈ ಗೊಬ್ಬರಗಳು ಬೇಕಾಗಿದೆ, ಅಂಥವರಿಗೆ ಇವತ್ತಿನ ದಿವಸ ಸಿಗುತ್ತಾ ಇಲ್ಲ.

ಆಮೇಲೆ ಫಿಷರೀಸ್ ಮೆಕೆನೈಸ್ಡ್ ಬೋಟ್ಸ್ ಹೆಚ್ಚುತ್ತಾ ಇದೆ. ಅದಕ್ಕಾಗಿ ನಾವು ಸ್ವಲ್ಪ ಹಣ ವನ್ನು ಕೇಳಿದ್ದೇವೆ. ನಮ್ಮಲ್ಲಿ ಆದಷ್ಟು ಹೆಚ್ಚು ಮೆಕ್ಯಾನೈಸ್ಡ್ ಬೋಟುಗಳನ್ನು ಒದಗಿಸಬೇಕು. ತಾವು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಾವಿರ ಮೆಕ್ಯಾನೈಸ್ಡ್ ಬೋಟುಗಳ ಯೋಜನೆಯನ್ನು ಇಟ್ಟುಕೊಂಡಿದ್ದೀರಿ. ಮಾತ್ರವಲ್ಲದೆ, ಈ ದೋಣಿಗಳನ್ನು ಕೊಡುವಾಗ, ಶರಿಯಾದ ರೀತಿಯಲ್ಲಿ ವಿತರಣೆಯಾಗಬೇಕು. ಅಲ್ಲದೆ ಇದು ಈಗ ಬರೇ ಮೀನು ವ್ಯಾಪಾರಸ್ಥರಿಗೆ ಹೋಗುತ್ತದೆಯೇ ವಿನಾ ಯಾರು ನಿಜವಾಗಿ ತೆಗೆದುಕೊಳ್ಳಲು ಅರ್ಹರು ಅಂಥವರಿಗೆ ಹೋಗುವುದಿಲ್ಲ. ಅಂತೂ, ಇನ್ನು ಮುಂದಕ್ಕಾದರೂ ಕೊಡುವಾಗ, ಯಾರು ಮೀನುಗಾರಿಕೆ ಕಸಬನ್ನು ಸ್ವತಃ ಮಾಡು ತ್ತಾರೆ, ಅಂಥವರಿಗೆ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಯಾರು ಫಿಶರ್‌ಮೆನ್ ಟ್ರೈನಿಂಗ್ ಮಾಡಿಕೊಂಡಿದ್ದಾರೋ ಅವರಿಗೆ ಕೊಡತಕ್ಕಂಥವು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಾವು ಹೊರಗಿನವರಿಗೂ ಕೊಟ್ಟಿದ್ದೀರಿ. ಮೂರು ಜನರ ಒಂದು ಗುಂಪಿಗೆ ಲಾಟ್ ಮಾಡಿದ್ದೀರಿ. ಇನ್ನು ಮೇಲೆ ಆದರೂ ಅದನ್ನು ವಿತರಣೆ ಮಾಡುವಾಗ ಜಾಗ್ರತೆವಹಿಸ ಬೇಕೆಂದು ಹೇಳುತ್ತೇನೆ. ಹೋದ ವರ್ಷ ಕರಾವಳಿ ಪ್ರದೇಶದಲ್ಲಿ 45 ಸಾವಿರ ಟನ್ ಮೀನು, ಅದಕ್ಕೆ ಸರಿಯಾದ ಸಾಗಾಣಿಕೆ ಇಲ್ಲದೆ, ಸಾಮಾನು ಸರಂಜಾಮು ಇಲ್ಲದೆ ಕೊಳೆತು ಹೋಗುವ ಪರಿಸ್ಥಿತಿ ಬಂದಿತ್ತು. ಇದಕ್ಕೆ ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ ? ಮತ್ತು ಈ ರೀತಿ ಕೊಳೆತು ಗೊಬ್ಬರವಾಗದ ಹಾಗೆ ಅದಕ್ಕೆ ತಕ್ಕ ಒಂದು ಯೋಜನೆಯನ್ನು, ಒಂದು ಸಾಗಾಣಿಕೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಬೇಕು ಎಂದು ಹೇಳುತ್ತೇನೆ.

6-00 P.M.

SRI RAMAKRISHNA HEGDE.—Mr. Speaker Sir, before I deal with the various points raised by the Hon'ble members in the course of the discussion of the supplementary demands, I would like to refer to a few of the matters that have happened after the budget estimates were presented to this House, and which had bearing on the budgetary position. Firstly, I would like to refer to the decision of the Government of India who devalued the rupee. We are not concerned with this decision directly, but the effect of the devaluation of the rupee has great consequences even to the State Government's financial position. Criticisms were made by one or two Hon'ble members about the decision of the Government of India regarding the devaluation. As I said it will not benefit anybody by discussing about the merit of the decision. What we are concerned to-day most is how and in what ways we should be prepared ourselves to face the development after the devaluation. So far as the State finances are concerned, it is estimated that our additional commitments on account of devaluation of the rupee would be of the order of Rs. 5 crores. The main Departments that are affected are the Electricity Department, Irrigation Department, Road Transport Corporation and certain Government Industrial concerns. We have approached the Government of India that since this development could not have been foreseen at the time of the preparation of the Budget, the Government of India should come to our help and should take care these additional commitments. Though we have not received any

final reply so far, I am happy to inform the House that in the course of discussion with the Planning Minister he has given a very categorical assurance that this additional burden will be taken care of by the Central Government. There are other consequences, for example, after devaluation there has been rise in prices of various commodities and some members have referred to this. We can understand a rise in prices of an article which though not imported contains certain imported content. But articles and commodities which have nothing to do with the import contents are also being sold at highier prices—for example—vegetables, milk and such other commodities have also registered some rise in prices. This is unfortunate and it is partly due to, if I may say so, the lack of patriatism and partly due to psychology. There has been an impression that devaluation necessarily leads to shortage of articles, which is not correct. Governments both Central and State Governments are taking effective steps to hold the price line and starting of Co-operative Department Stores particularly in big cities like Bangalore. We have also decided to strengthen the Co-operative Consumers Societies in all urban areas with a view to cover a minimum of 60 per cent of the consumer requirements in urban areas. This will naturally take some time because the various aspects of this Organisation, capital, the managerial know-how and so on cannot be commanded overnight. The Government is watching very carefully the market trends, and I can assure the Honble members that the Government will not hesitate to take any step that is necessary to curb further rise in prices of the essential goods. Sir, I must also refer to the seasonal conditions. Unfortunately the monsoon was delayed. Even in Malnad areas of heavy rainfall, this year rains started very late and the paddy fields that were sown were almost withering. There are certain areas of some other Districts where even to-day there is no rain at all. Therefore, the scarcity relief works that have been started by the Government last year had to be continued in these affected areas with the same vigour and same intensity. The Members will kindly recall that the Central Government was kind enough to give us two crores of rupees towards the relief works in the State. Now we have practically spent the whole amount. We have approached the Central Government again to extend help to us monetary help and we have asked, as the immediate measure, for grant of two crores of rupees.

The Prime Minister is very sympathetic and I am sure the Central Government will give us Rs. 2 crores additional help. Sir, I must also refer to the improvement on the revenue side of the Budget and also of the factors that might contribute in future in the coming months which would worsen the position of the finances. Sir, on account of the various taxation measures that this House approved, there will be improvement on the income said to the extent of nearly Rs. 1¼ crores. But as I have already submitted to the House, only on account of the devaluation, there will be an additional expenditure of Rs. 5 crores. Then, as we have decided to give a small rise in the D. A. scale of low paid Government employees, that expenditure has to be incurred and we

(SRI RAMAKRISHNA HEGDE)

will have to take that also into consideration. Sir, the Government have decided to increase the land revenue assignment to the Taluk Boards by 20 per cent. This expenditure was not foreseen or anticipated and that we intend to give and that Bill is coming before this House very shortly. This will meen an additional expenditure or loss to the Government to the extent of Rs. 70 lakhs. Sir, with a view to strengthen the co-operative societies both in the consumer sector as well as in the marketing sector, the Government may have to give them necessary support to enable these co-operative societies to have increased borrowing power by subscribing to their share capital. This, I estimate, would cost the Government an additional expenditure of nearly Rs. 1 crore. Sir when we take these developments into consideration, unless either we increase our resources or we cut our expenditure elsewhere, it is obvious that it would be very difficult to maintain the balance of the budgetary position. I do not want to go into details, but I would be failing in my duty. If I do not mention that Government has not left any stone unturned in effecting economy and effecting savings wherever it is possible and desirable. Sir, while the current year's budget was framed, utmost care was taken that unnecessary expenditure is avoided in every Department. Recently our Financial Adviser has gone through the estimates of various Departments. He had detailed discussions with the heads and Secretaries of various Departments with a view to find the possible area of saving and economy. But in spite of his best efforts, his estimate is that there would not be any appreciable savings because there is no scope. We have cut our various sectorial allocations practically to the bones. Therefore, there is no further scope for savings or further economy. The only plausible way of saving would be to retrench the Governmant employees which we cannot think of for various reasons. I would like to briefly mention mainly the main items of expenditure and show to the Hon'ble members whether it is possible to have any savings in respect of any of these items. Sir, the analysis of the budget will be as follows :—

| | | Rs. in lakhs |
|---|---|---|
| 1. | Pay of Officers only | 295 |
| | Pay of Establishments, Dearness and other Allowances, including pay of officers all together the total expenditure is | 3,725 |

Here there is absolutely no scope for reduction. The only thing that we can do and we have been doing during the last two years is not recruit new staff; wherever there is a vacancy we do not fill up and if it is necessary to fill up the post, then draw from the surplus pool. This is the policy that the Government has been pursuing for quite some time. Sir, another item of expenditure is in regard to

travelling allowance, famine relief, pension, retirement benefits, territorial and political pensions, privy purses and allowances, commutation of pensions and other miscellaneous compensations and assignments, altogether will add up to Rs. 530 lakhs. As the Members would feel, here also there is hardly any scope for economy. The third item is in regard to interest on Debt and other obligations. Appropriation for Reduction and avoidance of Debt, etc. The total amount in this respect is Rs. 32.17 lakhs. The fourth item is in regard to grant-in-aid to Education, Grant-in-aid under miscellaneous and grant in other departments. So far as grant in aid to educational institutions is concerned, it is not possible to reduce and the other expenditure is very nominal. Here it accounts for Rs. 15.17 lakhs. Now, the total revenue expenditure as the Members are aware is Rs. 154.01. Out of these, the miscellaneous items account for Rs. 10.86 lakhs. I am mentioning this in this House only to show that the Budget is framed in such a manner that it is not possible to make any substantial savings in any Department or in any sector and this we have made clear in no uncertain terms and in unmistakable terms to the Government of India also. Sir, the present supplementary estimates can be classified into four categories.

I was surprised that even an experienced Member like Sri G. V. Gowd made a criticism that the Demand for 320.62 lakhs will upset the Budget. He said there might be some items relating to the Central schemes for which the Central Government might give assistance. According to him a substantial part of this related to State Governments finances and according to him he feared that this will result in a great deficit. I would like to allay the fears. As I said the present Demands can be classified under four categories :

1. total of items for which token demands are placed amounting to Rs. 0.01 lakhs
2. total of items covered by Central assistance already received in the the previous year received in the current year which can be registered within the plan ceiling fixed—this will be a total sum of Rs. 109.93 lakhs.
3. Total of items which are adjustments to be made which do not result in out-go of cash : Rs. 90.59 lakhs.
4. Total items which are not provided for in the Budget and which are not covered under any Central assistance-come to Rs. 12.15 lakhs.

So this is quite clear that the actual cash out-go on account of this will be only 12.15 plus 0.01, amounting to 12.16 lakhs ; and all other demands relate to either the Central Government schemes that are covered by Central Government assistance or items relating to adjustment of accounts. I do not think it is possible within the time allowed to me to refer to each and every point made by the Hon'ble Members. But it would be necessary for me to take up a few points of importance.

(SRI RAMAKRISHNA HEGDE)

One criticism that was not altogether un-expected—it was made by the Hon'ble Member the Leader of the Opposition and also one or two other Members that these Supplementary estimates are brought before this House having the forthcoming elections in our view. Sir, that allegation can be made against any party in power, particularly during the election year. But I would like to submit to the House that the substantial expenditure here shown in these demands is in respect of (i) famine relief (ii) agricultural development........ ...

Sri S. SIVAPPA.—Co-operation ?

Sri RAMAKRISHNA HEGDE.—Co-operation is there in respect of consumers co-operative societies. It is not very big. I am confident and I am quite sure that the Hon'ble Members will agree that these are works which are most necessary particulary in view of not only the importance of agricultural production in the present context but also in view of the scarcity conditions that exist today in the various parts of the State. I do not think it will be proper to attribute any motive to the Government in taking up these relief works. Whether we are on this side or whether my friends across are here, they will have to take up, because it is their duty.

Secondly, Sri G. V. Gowd referring to rural manpower utilisation schemes, felt that the distribution of these blocks is not made on a rational basis. Perhaps he forgets that these blocks are not allotted to certain districts and areas. There are certain criteria prescribed before the block is allotted, the main creteria being (i) it should be backward ; (ii) it should be dry having less rain-fall (iii) it should have another very important criterian, idle labour potential or extra labour potential. Allotment is made after taking into consideration these three factors.

SRI G. V. GOWDA.—All the three exist in my taluk.

SRI RAMAKRISHNA HEGDE.—If Kollegal taluk is capable of meeting all these requirements, I am sure Government will certainly allot one block to Kollegal taluk also.

Today in Bangalore Division there are 20 blocks for which we have provided during the current year. In Mysore Division there are five blocks, Belgaum 8 blocks ; Gulbarga Division 11—total 44.

Sri R. S. Hegde said that the cost-component allowed for materials should be raised from 25 per cent to 40 per cent. There is no hard and fast rule about this. He said 60 per cent for labour and the remaining can be material components. I have no objection. It can be adjusted that way.

Then another criticism was in regard to the deposit that was made in the court in regard to that case. Sri C. J. Muckannappa is not here.

SRI C. J. MUCKANNAPPA (*sitting in another seat*).—I am here Sir.

Sri RAMAKRISHNA HEGDE.—I am glad he is there. This case related to ex-State of Bombay. A suit was filed on the ground that the

Government was in enjoyment of the lands and failed to account for the realisation. The lands formerly were in Kurundwad estate which was later merged with the State of Bombay. The Ruler of Kurundwad had passed permanent tenancy rights and this was a claim made in exercise of his sovereign powers. The claim as made by the plaintiff was untenable as the preliminary rendering of accounts is pending in the High Court. The liability of the State is questioned. We have gone to the High Court. But the final decree was passed and on the basis of that execution was sued. The High Court directed this amount to be deposited which is on the basis of certain accounts filed in the lower court.

Sri Muckannappa's insinuation was that this particular individual was a favourite of some Minister or may possibly by the future financier of the Congress Party and therefore it was given. Sir, it is absolutely baseless. The Government went in appeal to the Senior Civil Judge's court and after that, went to the High Court in second appeal. He also mentioned that the Government has not taken effective steps to go in appeal against the cases decided against the Government in the High Court. Sir, with a view to give him correct information, I am giving these statistics. During the current year, from 1st January 1966 up to the 31st of July—till yesterday—the number of special leave petitions, writ petitions etc., filed by Mysore State Government in the Supreme Court are 97 and the number of special leave petitions, appeals, writ petitions against the State 8; 8 out of a total of 105. Order of Supreme Court in favour of Government 100 and against the Government 1.

6-30 P.M.

Sri G. V. Gowda.—That is, leave being granted.

Sri Ramakrishna Hegde.—Whatever it is; writ petitions also; special leave petitions, appeals, writ petitions etc., all together.

Sri C. J. Muckannappa.—How many were decided in your favour Sir? Let not things be in the air.

Sri Ramakrishna Hegde.—Sir, I am afraid, I must conclude because it already 6-30. Sri G. V. Gowda referred to the training of Gram Sevaks and one or two other members also referred to this. Sir, we have taken up several districts under the scheme of intensive agricultural development areas and for this purpose, it is necessary to strengthen the staff at the base, particularly because of theintensification of agricultural development schemes. We have to have more Gram Sevaks in each Block and trained Gram Sevaks. Every block will be given five additional Gram Sevaks and one additional Extension Officer, in addition to the existing. I would like to submit to hon. members that if seeing is believing, then, they must go and visit Mandya district. What a transformation has taken place after we have introduced this scheme in that district! It is a revolution.

(SRI RAMAKRISHNA HEGDE)

Sir, in conclusion, I would like to submit again to the House that there is not a single item in this which could have been foreseen when the Budget Estimate was framed; most of them are unforeseen and unexpected items. I would like to repeat that everything possible, everything that is necessary will be done to conserve the resources of the State, to cut the expenditure and to effect economy so that our financial position will not go from bad to worse. Thank you.

SRI S. AVALA REDDY (Sidlaghatta).—Just now the Minister mentioned that consumers co-operative societies would be opened in the cities and towns; what about rural parts ?

SRI RAMAKRISHNA HEGDE.—Sir, even for rural part, there is a scheme. Every taluk headquarters will have a consumber society and the taluk market society will also function as consumer society. We are thinking to spread them and wherever people come forward to establish rural consumer societies, we will encourage.

MR. SPEAKER.—I will now put the Demands to the vote of the House. The question is :

"That further sums not exceeding the amounts mentioned in the Demands Nos. 10,13,18,20,23,24,25,30,33,44,47, 48 and 54 be granted to the Government to defray the charges which will come in course of payment during the financial year ending 31st day of March, 1967."

*The motion was adopted.*

*As ordered by the Speaker the motion for Demands for Grants adopted by the House are reproduced below :—*

**Demand No. 10.—General Administration.**

*19. General Administration.*

"That a further sum not exceeding Rs. 3,20,100 be granted to the Government to defray the charges which will come in course of payment during the financial year for the period ending 31st day of March 1967, in respect of 'General Administration.'"

**Demand No. 13.—Police**

*23. Police.*

"That a further sum not exceeding Rs. 100 be granted to the Government to defray the charges which will come in cours of payment during the financial year for the period ending 31st day of March 1967, in respect of 'Police'."

## Demand No. 18.—Medical and Public Health.

*29. Medical and 30. Public Health*

"That a further sum not exceeding Rs. 300 be granted to the Government to defray the charges which will come in course of payment during the financial year for the period ending 31st day March 1967 in respect of 'Medical and Public Health'."

## Demand No. 20.—Agriculture, Horticulture and Fisheries.

*31. Agriculture*

"That a further sum not exceeding Rs. 11,71,800 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

## Demand No. 23.—Co-operation.

*34. Co-operation*

"That a further sum not exceeding Rs. 200 be granted to the Government to defray the charges which will come in course of payment during the financial year for the period ending 31st day of March 1967, in respect of 'Co-operation'."

## Demand No. 24.—Industries including Sericulture.

*35. Industries*

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Industries'."

## Demand No. 25.—Community Development, etc.

*37. Community Development Projects, National Extension Service and Local Development Works.*

"That a further sum not exceeding Rs. 10,00,000 be granted to the Government to defray the charges will which come in course of payment during the financial year for the period ending 31st day of March 1967, in respect of 'Community Development Projects, National Extension Service and Local Development Works'."

## Demand No. 30.—Irrigation—Non-Commercial.

*44. Irrigation, Navigation, Embankment and Drainage Works (Non-Commercial)*

"That a further sum not exceeding Rs. 75,000 be granted to the Government to defray the charges which will come in course of payment during the financial year for the period ending 31st day of March 1967, in respect of 'I.N.E. & D. Works'."

## Demand No. 33.—Famine

*64. Famine Relief*

"That a further sum not exceeding Rs. 1,14,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

## Demand No. 44.—Industrial and Economic Development.

*96. Capital Outlay on Industrial and economic Development.*

"That a further sum not exceeding Rs. 55.78,500 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Industrial and Economic Development'."

## Demand No. 47.—Capital Account of Electricity Schemes outside the Revenue Account

*101. Capital Outlay on Electricity Schemes.*

"That a further sum not exceeding Rs. 15,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Electricity Schemes'."

## Demand No. 48.—Capital Outlay on Public Works.

*103. Capital Outlay on Public Works.*

"That a further sum not exceeding Rs. 40,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Public Works'."

**Demand No. 54.—Advances and Loans**

*Q. Loans and Advances by State—Union Territory Governments.*

"That a further sum not exceeding Rs. 1,07,35,905 be granted to the Government to defray the charges which will come in course of payment during the financial year for the period ending 31st day of March 1967, in respect of 'Loans and Advances by State/Union Territory Governments'."

Mr. Speaker.—Now the House stands adjourned to reassemble tomorrow at 1-00 p.m.

---

*The House adjourned at Forty Minutes past Six of the Clock to meet again at One of the Clock on Tuesday, the 2nd August 1966.*

---